ಕನ್ನಡ ಕಟ್ಟಿದವರು ಮಾಲೆ

# ಜೋಳದರಾಶಿ ದೊಡ್ಡನಗೌಡರು

---

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಜೋಳದರಾಶಿ ದೊಡ್ಡನಗೌಡರು

ಡಾ. ಶಂಭು ಬಳಿಗಾರ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

---

JOLADARASHI DODDANNAGOUDARU A Monograph on Joladarashi Doddanagoudaru. Written by Dr. Shambhu Baligar. Published By B.H. Mallikarjun, Administrative Officer, Kannada Pustaka Pradhikara, Kannada Bhavana, J.C. Road, Bengaluru - 560 002

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Impression : 2011

Pages: xiv + 109

Copies: 1000

Price : 70/-

ಮೊದಲನೆಯ ಮುದ್ರಣ : ೨೦೧೧

ಪುಟಗಳು: xiv + ೧೦೯

ಪ್ರತಿಗಳು- : ೧೦೦೦

ಬೆಲೆ: ೭೦/

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು :

ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

ಮುದ್ರಕರ :

ಮೆ|| ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಎಂ.ಕೆ.ಕೆ. ರಸ್ತೆ, ಬೆಂಗಳೂರು-೫೬೦ ೦೨೧

<u>ಕನ್ನಡ ಕಟ್ಟಿದವರು ಮಾಲೆ</u>

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**


ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ ಶ್ರೀ

ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)

ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಈ ನಿಟ್ಟಿನಲ್ಲಿ “ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ - ವಿವರಗಳನ್ನು ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ- ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಭಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬರೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರ ತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡ ಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯಗಳಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ.

ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯು ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಳಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ, ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು - ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ - ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗೂ ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

**ಸಂಪಾದಕ**

# ಲೇಖಕರ ನುಡಿ

ಜೋಳದರಾಶಿ ದೊಡ್ಡನಗೌಡರು ನವೋದಯ ಕಾಲದ ಮಹತ್ವದ ಲೇಖಕರಲ್ಲಿ ಒಬ್ಬರು. ಅವರು ಆಂಧ್ರ-ಕರ್ನಾಟಕ ಗಡಿಭಾಗದಲ್ಲಿದ್ದು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಪ್ರಸಾರ ಮಾಡುತ್ತಾ, ಕನ್ನಡ ಕಟ್ಟಿದ ಧೀಮಂತರಲ್ಲಿ ಪ್ರಮುಖರು. ಕನ್ನಡ-ತೆಲುಗು ಭಾಷೆಗಳಲ್ಲಿ ಪರಿಣತಿ ಹೊಂದಿದ್ದ ಗೌಡರು, ಉಭಯ ಭಾಷೆಗಳಲ್ಲಿ ಕೃತಿ ರಚನೆ ಮಾಡಿದವರು. ಇದಲ್ಲದೆ ಕನ್ನಡದ ಪ್ರಮುಖ ಕೃತಿಗಳನ್ನು ಗಮಕಕ್ಕೆ ಅಳವಡಿಸಿಕೊಂಡು, ನಾಡಿನ ಉದ್ದಗಲಕ್ಕೂ ಸಂಚರಿಸಿ, ಗಮಕವಾಚನದ ಮೂಲಕ, ಜನಮಾನಸದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದ 'ಗಮಕಕಲಾನಿಧಿ'ಯವರು. ನಾಟಕ ಕೃತಿಗಳನ್ನು ರಚಿಸಿ, ನಿರ್ದೇಶನ ಮಾಡಿ, ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿ, ನಾಟಕ ಕಂಪನಿ ಕಟ್ಟಿಕೊಂಡು ರಾಜ್ಯಾದ್ಯಂತ ಸಂಚರಿಸಿ, ಕನ್ನಡ ನೆಲದ ಸಂಸ್ಕೃತಿ ಪ್ರಸಾರ ಮಾಡಿದ ಕಲಾನಿಧಿಗಳು. ಅವರು ಸಾಹಿತ್ಯ, ಸಂಗೀತ, ಗಮಕ, ರಂಗಭೂಮಿ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಅನನ್ಯವಾದುದು. ಅಂಥವರನ್ನು ಕುರಿತು 'ಕನ್ನಡ ಕಟ್ಟಿದವರು' ಮಾಲಿಕೆಯಡಿಯಲ್ಲಿ ಚಿಕ್ಕ ಪುಸ್ತಿಕೆ ರಚಿಸಿಕೊಡುವಂತೆ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಂದ ಮನವಿ ಪತ್ರ ಬಂದಾಗ ತುಂಬಾ ಸಂತೋಷವಾಯಿತು. ನಾನು ಬಾಲ್ಯದಿಂದಲೆ ಗೌಡರನ್ನು ನೋಡಿ ಅವರ ಗಮಕವಾಚನದಿಂದ ಪ್ರಭಾವಿತನಾದವನು. ಸಂಶೋಧನೆಯ ಸಂದರ್ಭದಲ್ಲಿ ಅವರ ಜೀವಿತ ಕಾಲದಲ್ಲಿ ಅವರ ಮನೆಯಲ್ಲಿಯೇ ಅವರೊಂದಿಗೆ ಸಂದರ್ಶನ ಮಾಡುವ ಭಾಗ್ಯ ಪಡೆದವನು. ಅಂಥವರನ್ನು ಕುರಿತು ಕೃತಿ ರಚಿಸಿಕೊಡುವ ಅವಕಾಶವನ್ನು ಕಲ್ಪಿಸಿಕೊಟ್ಟ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯನವರಿಗೆ ಹೃತೂರ್ವಕ ವಂದನೆಗಳು.

ಸಾಹಿತ್ಯ ರಚನೆಯಲ್ಲಿ ಸದಾ ನನ್ನನ್ನು ಪ್ರೋತ್ಸಾಹಿಸುತ್ತ ಬಂದಿರುವ ಸಹೋದರರಾದ ವಿ.ಪಿ.ಬಳಿಗಾರ, ಮನು ಬಳಿಗಾರ, ಹಿರಿಯರಾದ ಶ್ರೀ ವೈ.ಎ. ಮಾಚಕನೂರ, ಪ್ರೊ. ಜಿ.ಎಚ್. ಹನ್ನೆರಡುಮಠ, ಪ್ರೊ. ಮಹೇಶ ತಿಪ್ಪಶೆಟ್ಟಿ, ಡಾ. ಕೆ.ಆರ್. ದುರ್ಗಾದಾಸ್, ಡಾ. ಶಾಂತಿನಾಥ ದಿಬ್ಬದ, ಪ್ರೊ. ಇಟಗಿ ಈರಣ್ಣ, ಡಾ. ಎಂ.ಬಿ. ಹೂಗಾರ, ಪ್ರೊ. ಎ.ಆರ್. ಪಾಟೀಲ, ಪ್ರೊ. ಎ. ಸಿದ್ದೇಶ್ವರ, ಡಾ. ಡಿ.ಎಂ. ಹಿರೇಮಠ, ಡಾ. ಶ್ರೀಶೈಲ ಹುದ್ದಾರ, ಪ್ರೊ. ಎಸ್.ಎಫ್. ಶಿಗ್ಗಿ ಗೆಳೆಯರಾದ ಡಾ. ಪಿ.ಡಿ. ತೋಟದ, ಡಾ. ವೈ.ಎಫ್. ಹಂಜಿ ಇವರಿಗೆಲ್ಲಾ ನನ್ನ ಅನಂತ ಕೃತಜ್ಞತೆಗಳು.

**ಡಾ. ಶಂಭು ಬಳಿಗಾರ**

# ಪರಿವಿಡಿ

ಲೇಖಕರ ನುಡಿ

ಪೀಠಿಕೆ

ಜೀವನ-ಸಾಧನೆ

೧. ಜೋಳದರಾಶಿ ಪರಿಸರ

೨. ಜನನ-ಬಾಲ್ಯ ಮತ್ತು ವಿದ್ಯಾಭ್ಯಾಸ

೩. ಕೌಟುಂಬಿಕ ಜೀವನ

೪. ಕಲಾಜೀವನ

೫. ಸಾಹಿತ್ಯಕ ಜೀವನ

೬. ಸಾಂಸ್ಕೃತಿಕ ಜೀವನ

೭. ಅಧ್ಯಾತ್ಮಿಕ ಜೀವನ

೮. ಅನಂತರ

೯. ದೊಡ್ಡನಗೌಡರ ಸಾಹಿತ್ಯಕೃತಿಗಳು

೧೦. ಜೋಳದರಾಶಿ ದೊಡ್ಡನಗೌಡರ ವಿವಿಧ ಭಾವಚಿತ್ರಗಳು

# ಪೀಠಿಕೆ

ಜೋಳದರಾಶಿ ದೊಡ್ಡನಗೌಡರು, ನಾಡಿನ ಶ್ರೇಷ್ಠ ಗಮಕ ಕಲಾವಿದರಾಗಿದ್ದು ನಾಡು-ನುಡಿಯ ಅನುಪಮ ಸೇವೆಗೈದು, ಕನ್ನಡನೆಲದ ಸಂಸ್ಕೃತಿಯನ್ನು ಉಳಿಸಿ-ಬೆಳಿಸಿಕೊಂಡು ಬಂದ, ಹಳೆಯ ತಲೆಮಾರಿನ ಪ್ರತಿಭಾಸಂಪನ್ನರಲ್ಲಿ ಒಬ್ಬರು. ಅವರು ಬದುಕಿದ್ದಿದ್ದರೆ ಅವರ ಪಾದಗಳನ್ನು ನೂರು ವಸಂತಗಳು ಚುಂಬಿಸುತ್ತಿದ್ದವು. ಕರ್ನಾಟಕ-ಆಂಧ್ರ ಗಡಿ ಭಾಗದಲ್ಲಿದ್ದು ಕನ್ನಡ ಕಟ್ಟುವಲ್ಲಿ ಶ್ರಮಿಸಿದ ಅವರ ಜೀವನ ಮತ್ತು ಕೃತಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಕೆಲಸ ನಡೆದಿಲ್ಲ. ಬಹುಮುಖ ವ್ಯಕ್ತಿತ್ವದ ಗೌಡರ ಜೀವನವು ಹಲವು ರಂಗಗಳಲ್ಲಿ ಹರಡಿಕೊಂಡಿದೆ. ಅವರನ್ನು ಪ್ರಮುಖವಾಗಿ:

೧. ಕವಿ

೨. ಗಮಕಿ

೩. ನಾಟಕಕಾರ

೪. ವಿಮರ್ಶಕ ಮತ್ತು

೫. ವೇದಾಂತಿ

ಎಂದು ಗುರುತಿಸಬಹುದಾಗಿದೆ. ಅವರು ಕವಿಗಳಾಗಿ, ಸಾಹಿತಿಗಳಾಗಿ, ಹಲವು ಮೌಲಿಕ ಕೃತಿಗಳನ್ನು ರಚಿಸಿ ಹೆಸರುವಾಸಿಯಾಗಿದ್ದಾರೆ. ಅವರ ಕೃತಿಗಳನ್ನು ಪ್ರಮುಖವಾಗಿ -

೧. ಕಾವ್ಯಗಳು - ನಾಟಕಗಳು

೨. ಜೀವನಚರಿತ್ರೆಗಳು - ಆತ್ಮಚರಿತ್ರೆ

೩. ವಿಮರ್ಶೆ-ಸಂಪಾದನೆ -

ಮುಂತಾದ ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಬಹುದು. ಅವರು ಮಾಡಿರುವ ಸಾಹಿತ್ಯ ಸೇವೆಗಾಗಿ ಅವರಿಗೆ ರಾಜ್ಯ ಅಕಾಡಮಿ ಪ್ರಶಸ್ತಿ ಹಾಗೂ ಗುಲಬರ್ಗ ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಲಭಿಸಿವೆ. ಬದುಕಿನುದ್ದಕ್ಕೂ ಗಮಕಿಗಳಾಗಿ ನಾಡನ್ನೆಲ್ಲಾ ಸುತ್ತುತ್ತಾ, 'ಪ್ರವಚನ' ಸೇವೆಗೈದು, ಅಪಾರ ಜನಮೆಚ್ಚುಗೆಯಿಂದಾಗಿ 'ಗಮಕ ಕಲಾನಿಧಿ', 'ಗಮಕ ಗಂಧರ್ವ' ಎಂಬ ಬಿರುದುಗಳನ್ನು ಪಡೆದ ಕೀರ್ತಿಗೆ ಅವರು ಪಾತ್ರರಾಗಿದ್ದಾರೆ. ರಂಗಭೂಮಿ ಇತಿಹಾಸದಲ್ಲಿ ಖ್ಯಾತನಾಮರಾದ ಬಳ್ಳಾರಿ ರಾಘವರ ಶಿಷ್ಯರಾಗಿದ್ದ ಅವರು, ಒಬ್ಬ ಉತ್ತಮ ನಟ - ನಿರ್ದೇಶಕ ಮತ್ತು ಸಂಗೀತಗಾರರಾಗಿ ಪ್ರಸಿದ್ಧರಾಗಿದ್ದರು. ಅಲ್ಲದೆ ಕನ್ನಡ ನಾಡು - ನುಡಿ ಕಟ್ಟುವಲ್ಲಿ ಅವಿಶ್ರಾಂತವಾಗಿ ಹೋರಾಡಿ, ಹಲವು ಮೌಲಿಕ ಗ್ರಂಥಗಳನ್ನು ಕೊಡಿಗೆಯಾಗಿ ನೀಡಿದ ಅವರ ಜೀವನ ಕೂಡಾ ಅನುಪಮವಾದುದೂ, ಆದರ್ಶಮಯವಾದುದು ಆಗಿದೆ. ಗೌಡರು ಕನ್ನಡ ಮತ್ತು ತೆಲಗು ಭಾಷೆಗಳೆರಡರಲ್ಲೂ ಪರಿಣಿತರಾದ್ದರಿಂದ ಉಭಯ ಭಾಷೆಗಳಲ್ಲೂ ಕೃತಿ ರಚಿಸಿದ್ದಾರೆ.

ಗೌಡರ ಕೃತಿಗಳು, ಗೌಡರ ಜೀವಿತಕಾಲದಲ್ಲಿ ಅವರೊಂದಿಗೆ ನಡೆಸಿದ ಸಂಭಾಷಣೆಗಳು ಹಾಗೂ ಇತರರು ಗೌಡರ ಬಗ್ಗೆ ಹೇಳಿರುವ ವಿಚಾರಗಳು ಇಲ್ಲಿ ಆಧಾರ ಸಾಮಗ್ರಿಗಳಾಗಿವೆ. ಗೌಡರ ಜೀವನ ಚರಿತ್ರೆಯನ್ನು ಅರಿಯುವಲ್ಲಿ ಅವರ ಆತ್ಮ ಚರಿತ್ರೆ 'ನಂದೇನಾನೋದಿದೆ' ಬಹುವಾಗಿ ಉಪಯುಕ್ತವೆನಿಸಿದೆ. ಅಲ್ಲದೆ ಕಾಲ ಕಾಲಕ್ಕೆ ಪ್ರಕಟವಾದ ಅವರ ಕೃತಿಗಳಲ್ಲಿ ಅವರ ಬದುಕಿನ ಆಗು-ಹೋಗುಗಳನ್ನು ಗುರುತಿಸಬಹುದಾಗಿದೆ. ನಾನು ಅವರ ಜೀವಿತ ಕಾಲದಲ್ಲಿ ನಡೆಸಿದ ನೇರ ಸಂದರ್ಶನದಿಂದ ಸಂಗ್ರಹಿಸಿದ ಸಾಕಷ್ಟು ಮಾಹಿತಿಯು ಕೃತಿ ರಚನೆಗೆ ಸಹಾಯಕವಾಗಿದೆ. ಇದಲ್ಲದೆ ವಿಭಿನ್ನ ದೃಷ್ಟಿಯಿಂದ ಅವರ ಬದುಕನ್ನು ಪರಿಚಯಿಸಲು ಇತರ ಲೇಖಕರು ಗೌಡರನ್ನು ಕುರಿತು ಬರೆದ ಕೃತಿಗಳು, ಲೇಖನಗಳು ಸಹಾಯಕ್ಕೆ ಒದಗಿ ಬಂದಿವೆ. ಇದಲ್ಲದೆ ಗೌಡರನ್ನು ಬಲ್ಲವರಿಂದಲೂ ಮಾಹಿತಿ ಸಂಗ್ರಹ ಮಾಡಿಕೊಂಡದ್ದು ಕೃತಿ ರಚನೆಗೆ ತುಂಬ ಸಹಕಾರಿಯಾಗಿದೆ.

## ೧. ಜೋಳದರಾಶಿ ಪರಿಸರ

ಬಳ್ಳಾರಿ ಜಿಲ್ಲೆಯ ಮೂಲೆಯೊಂದರಲ್ಲಿವ ಚಿಕ್ಕ ಗ್ರಾಮ ಜೋಳದರಾಶಿ. ಯಾವ ವೈಶಿಷ್ಟ್ಯಗಳನ್ನೂ ಹೊಂದಿರದ ಈ ಗ್ರಾಮವು ಬಳ್ಳಾರಿಯಿಂದ ಅನಂತಪುರ ಮಾರ್ಗದಲ್ಲಿ ಇಪ್ಪತ್ತು ಕಿಲೋಮೀಟರ್ ಅಂತರದಲ್ಲಿ ಇದೆ. ಗುಂತಕಲ್-ಗದಗ ರೈಲುಮಾರ್ಗವು ಅನತಿ ದೂರದಲ್ಲೆ ಹಾಯ್ದುಹೋಗಿದ್ದು ಈ ಊರಿನವರಿಗೆ ವೀರಾಪುರ ರೈಲು ನಿಲ್ದಾಣವೇ ಸಮೀಪದ ನಿಲ್ದಾಣವಾಗಿದೆ. ಮಹಿಮಾಪುರುಷ ಶ್ರೀ ಎರ್ರಿತಾತನವರು ನೆಲೆಸಿದ್ದ ಚೆಳ್ಳಗುರಿಕೆ ಗ್ರಾಮವು ಜೋಳದರಾಶಿಯಿಂದ ಮೂರು ಕಿಲೋಮೀಟರ್ ಅಂತರದಲ್ಲಿದ್ದರೆ, ಈಗ ಆಂಧ್ರದಲ್ಲಿ ಸೇರಿಹೋಗಿರುವ ಪುಣ್ಯಕ್ಷೇತ್ರ ಉರವಕೊಂಡೆಯು ಜೋಳದರಾಶಿಗೆ ಅಷ್ಟೇನು ದೂರವಿಲ್ಲ

ಈ ಗ್ರಾಮಕ್ಕೆ ಜೋಳದರಾಶಿಯೆಂದು ಹೆಸರು ಬರಲು ಕಾರಣವೇನೆಂದು ತಿಳಿಯಲು ಗಟ್ಟಿ ಆಧಾರಗಳೇನೂ ದೊರೆಯುವದಿಲ್ಲ. ಜಾನಪದೀಯ ಕಾವ್ಯಮಯ - ಹೆಸರನ್ನು ಪಡೆದಿರುವ ಈ ಗ್ರಾಮದ ಸುತ್ತಲೂ ಅಷ್ಟೇನು ದೊಡ್ಡವಲ್ಲದ, ಸಾಧಾರಣ ಎತ್ತರದ ಗುಡ್ಡಗಳಿವೆ. ದೂರದಿಂದ ನೋಡಿದರೆ ಜೋಳದರಾಶಿಯಂತೆ ಕಾಣುತ್ತವೆ. ಈ ಹೋಲಿಕೆಯಿಂದಲೆ, ಈ ಗ್ರಾಮಕ್ಕೆ ಜೋಳದರಾಶಿಯೆಂದು ಹೆಸರು ಬಂದಿರಬೇಕೆಂಬುದು ಕೆಲವರ ಅಭಿಪ್ರಾಯ. ಆದರೆ ಈ ಅಭಿಪ್ರಾಯ' ಒಂದು ಕಲ್ಪನೆಯ ಮೇಲೆ ನಿಂತಿರುವ ಊಹೆಯೆ ಹೊರತು, ಖಚಿತ ದಾಖಲೆ ಅಲ್ಲ. ಗುಡ್ಡಗಳಿಂದ ಸುತ್ತುವರಿದ ಅನೇಕ ಹಳ್ಳಿಗಳಿವೆ, ಆದರೆ ಅವುಗಳಿಗೆಲ್ಲಾ 'ಜೋಳದರಾಶಿ'ಯೆಂದು ಕರೆಯಲಾದೀತೆ? ಇನ್ನು ಕೆಲವರು ಬೇರೆ ರೀತಿ ಊಹೆ ಮಾಡುತ್ತಾರೆ. ಸುತ್ತ-ಮುತ್ತಲ ಪ್ರದೇಶದಲ್ಲೆಲ್ಲ ಜೋಳವನ್ನು ಬೆಳೆಯಲು ಪ್ರಸಿದ್ಧವಾದ ಗ್ರಾಮವಾದುದರಿಂದ, ಈ ಹೆಸರು ಬಂದಿರಬೇಕು ಎಂಬುದಾಗಿ, ಅಂದರೆ ಉಳಿದ

ಗ್ರಾಮಗಳೆಲ್ಲ ಜೋಳವನ್ನು ಬೆಳೆಯುತ್ತಿರಲಿಲ್ಲವೆಂದು ಅಭಿಪ್ರಾಯವಲ್ಲ, ಮಿಕ್ಕವರಿಗಿಂತ ಯಾವುದೋ ಒಂದು 'ವೈಶಿಷ್ಟ' ಈ ಗ್ರಾಮದ ಬೆಳೆಗಾರರಲ್ಲಿ ಇದ್ದಿರಬೇಕು ಎಂಬುದು ಇನ್ನೊಂದು ವಾದ. ಈ ವಾದ ಇಷ್ಟಕ್ಕೆ ನಿಲ್ಲದೆ ಇನ್ನೂ ಮುಂದುವರೆಯುತ್ತದೆ. ಈ ಊರಿನ ಪ್ರತಿಷ್ಠಿತ ರೈತನೊಬ್ಬ ಒಂದು ಸಲ 'ಎಲ್ಲರೂ ಬೆರಳು ಕಚ್ಚುವಂತೆ' ಜೋಳವನ್ನು ಬೆಳೆದನಂತೆ ಬಾಯಿಂದ ಬಾಯಿಗೆ ಈ ಸುದ್ದಿ ಹರಡಿ, ಸುತ್ತಮುತ್ತಲ ಪ್ರದೇಶದ ಜನಬಂದು, ಆತನು

---

೧. 'ಸ್ಥಳ' ಸಂದರ್ಶನಕಾಲಕ್ಕೆ ಗ್ರಾಮದ ಜನರು ಹೇಳಿದ ಮಾತುಗಳು.

---

ಮಾಡಿದ ಜೋಳದರಾಶಿಯನ್ನು ನೋಡಿ ಬೆರಗಾದರಂತೆ. ಅಂದಿನಿಂದ ಈ ಗ್ರಾಮದ ಜನರಿಗೆ 'ಜೋಳದರಾಶಿಯವರು', 'ಜೋಳದರಾಶಿಯವರು' - ಎಂದು ಕರೆಯ ತೊಡಗಿದರಂತೆ. ಕಾಲಾಂತರದಲ್ಲಿ ಈ ಗ್ರಾಮಕ್ಕೆ ಮೊದಲಿದ್ದ ಹೆಸರು ಹಿಂದೆ ಸರಿದು, ಜೋಳದರಾಶಿಯೆಂಬ ಹೆಸರೇ ಉಳಿದುಕೊಂಡಿತೆಂಬುದು ಇನ್ನು ಕೆಲವರ ವಾದ. ಈ ವಾದವನ್ನು ಒಪ್ಪುವದಾದರೆ, ಈ ಗ್ರಾಮಕ್ಕೆ ಆ ಮೊದಲಿದ್ದ ಹೆಸರು ಯಾವುದೆಂಬ ಪ್ರಶ್ನೆ ತಲೆಯೆತ್ತುತ್ತದೆ. ಹಾಗೆ ಹೇಳಲು ಯಾವ ಆಧಾರವೂ (ಕಂದಾಯ ಇಲಾಖೆಯಲ್ಲೂ ಕೂಡ) ಇಲ್ಲ ವಾದಗಳೇನೆ ಇದ್ದರೂ ಹೆಸರು ಕೇಳಿದ ತಕ್ಷಣ ಕುತೂಹಲ ಕೆರಳಿಸುವ, ಮನಾಕರ್ಷಿಸುವ ದೇಶೀಯ ಹೆಸರನ್ನುಳ್ಳ 'ಜೋಳದರಾಶಿ' ಒಂದು ಅಧ್ಯಯನದ ಕೇಂದ್ರವಾದುದು ಒಂದು ಆಕಸ್ಮಿಕವೇ ಸರಿ.

ಜೋಳದರಾಶಿಯು ಕೃಷಿಪ್ರಧಾನವಾದ ಗ್ರಾಮ. ಇಲ್ಲಿನ ಒಕ್ಕಲುಮಕ್ಕಳು ಮಣ್ಣಿನಲ್ಲಿ ದುಡಿದುಣ್ಣುವ ಕಾಯಕಜೀವಿಗಳು. ಯಾವ ಆಧುನಿಕ ಸೌಕರ್ಯಗಳನ್ನೂ ಪಡೆಯದ ಜನ, ಬಳ್ಳಾರಿಯನ್ನೆ ಅವಲಂಬಿಸಬೇಕಾಗಿತ್ತು. ಈಗಲೂ ಹಾಗೆ ಇರುವುದಾದರೂ, ಉಳಿದ ಹಳ್ಳಿಗಳಂತೆ ಈ ಹಳ್ಳಿಗೂ ಕೆಲವು ಆಧುನಿಕ ಸೌಕರ್ಯಗಳು ಲಭಿಸಿವೆ.

ಯಾವ ವೈಶಿಷ್ಟ್ಯವನ್ನು ಹೊಂದಿರದ 'ರಾಮೇಶ ಮಂದಿರ'ವೇ ಈ ಗ್ರಾಮದ ಧಾರ್ಮಿಕ ಕೇಂದ್ರ, ಆಂಧ್ರದ ಗಡಿಯಲ್ಲಿರುವ ಕಾರಣದಿಂದಾಗಿ, ಈ ಗ್ರಾಮದ ಬಹುತೇಕ ಜನರು ಕನ್ನಡ ಮತ್ತು ತೆಲುಗು ಭಾಷೆಗಳೆರಡನ್ನೂ ಬಲ್ಲವರಾಗಿದ್ದಾರೆ. ದೊಡ್ಡನಗೌಡರಿಂದಲೇ ಬೆಳಕಿಗೆ ಬಂದ ಈ ಗ್ರಾಮದ ಹಿರಿತನವು, ಆ ಊರಿನ ಪ್ರತಿಷ್ಠಿತ ಮನೆತನದ 'ಗೌಡರ'ದೇ ಆಗಿತ್ತು. ಇಂದಿಗೂ ಆ 'ಹಿರಿತನ'ವನ್ನು ಉಳಿಸಿಕೊಂಡು ಬಂದಿರುವ 'ಗೌಡರ ಮನೆತನದ ಬಗ್ಗೆ ಈ ದಿಶೆಯಲ್ಲಿ ಮೊದಲು ತಿಳಿದುಕೊಳ್ಳಬೇಕಾಗುತ್ತದೆ.

## ಗೌಡರ ಮನೆತನ :

“ಕನ್ನಡ ರಂಗಭೂಮಿ ಮತ್ತು ಗಮಕ ಪ್ರಪಂಚದಲ್ಲಿ ದೊಡ್ಡನಗೌಡರದು ದೊಡ್ಡ ಹೆಸರು..... ಆಧುನಿಕ ವಿದ್ಯಾಭ್ಯಾಸದ ಸೌಕರ್ಯಗಳೇನೂ ಇಲ್ಲದ ಪರಿಸರದಲ್ಲಿ ಹುಟ್ಟಿ ಬೆಳೆದ ದೊಡ್ಡನಗೌಡರು, ಒಂದು ಅರ್ಥದಲ್ಲಿ

'ಸ್ವಯಂಭೂ', ನಾಟಕ, ಗಮಕ ಸಾಹಿತ್ಯ, ಆಧ್ಯಾತ್ಮಗಳನ್ನು ಸಮಪ್ರಮಾಣದಲ್ಲಿ ಅರಗಿಸಿಕೊಂಡಿರುವ ದೊಡ್ಡನಗೌಡರ ಕಲಾಜೀವನ, ನಾಡಿನ ಇತಿಹಾಸದ ಒಂದು ಸಾಂಸ್ಕೃತಿಕ ದಾಖಲೆ. ಸ್ವಯಂಪ್ರತಿಭೆ, ಸ್ವಾಧ್ಯಾಯ, ನಿರಂತರ ಉತ್ಸಾಹಗಳಿಂದ ಅವರು ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ಪರಂಪರೆಯಲ್ಲಿ ಇರುವ ಒಳಿತುಗಳನ್ನು

---

೧. 'ಸ್ಥಳ' ಸಂದರ್ಶನಕಾಲಕ್ಕೆ ಗ್ರಾಮದ ಜನರು ಹೇಳಿದ ಮಾತುಗಳು.

---

ಪ್ರೀತಿಸುವಂತೆಯೇ ಪರಂಪರೆಯಲ್ಲಿ ಇರುವ ಒಳಿತುಗಳನ್ನು ಪ್ರೀತಿಸುವಂತೆಯೇ ಕೆಡಕುಗಳನ್ನು ನಿಷ್ಠುರವಾಗಿ ಖಂಡಿಸುವ ಸ್ವಭಾವ ಅವರದು. ಬಹುದೊಡ್ಡ ಅವಿಭಕ್ತ ಕುಟುಂಬದ ಯಜಮಾನರಾಗಿಯೂ, ಕಮಲಪತ್ರದ ಜಲಬಿಂದುವಿನಂತೆ ಬದುಕಿದವರು. ದೊಡ್ಡನಗೌಡರು ದಣಿವರಿಯದ ರಸಿಕ ಮಾತುಗಾರರು. ಅವರೊಂದಿಗೆ ಮಾತನಾಡುವದೆಂದರೆ, ಮುಕ್ಕಾಲು ಶತಮಾನದ ಸಾಂಸ್ಕೃತಿಕ ಜೀವನದ, ಹೆಬ್ಬೊತ್ತಿಗೆಯ ಪುಟಗಳನ್ನು ತಿರುವಿ ಹಾಕಿದಂತೆ. ಗೌಡಿಕೆಯ ಗಡಸುತನ, ಹಳ್ಳಿಯ ಮುಗ್ಧತೆ, ಕಲಾವಿದನ ತನ್ಮಯತೆ, ಶರಣರ ಜೀವನ ದೃಷ್ಟಿ ಇವೆಲ್ಲ ದೊಡ್ಡನಗೌಡರ ವ್ಯಕ್ತಿತ್ವದಲ್ಲಿ ಬೆರೆತುಕೊಂಡಿವೆ. ಬಣ್ಣದ ಬದುಕಿನ ಮಾಯಾಲೋಕದಲ್ಲಿ ವಿಹರಿಸಿದಂತೆ, ಧರ್ಮಗುರುಗಳ ಸನ್ನಿಧಿಯಲ್ಲಿ ಆಧ್ಯಾತ್ಮದ ಸವಿಯುಂಡ ಜೀವ ಅವರದು' ಎಂದು, ಗೌಡರ ಜೀವಿತ ಅವಧಿಯಲ್ಲಿ ಸಂದರ್ಶನ ಮಾಡಿದ, ಡಾ|| ಬಸವರಾಜ ಮಲಶೆಟ್ಟಿಯವರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಪ್ರತಿಭಾವಂತ ವ್ಯಕ್ತಿಗೆ ಜನ್ಮನೀಡಿ ಪಾಲನೆ-ಪೋಷಣೆ ಮಾಡಿದ ಸಮಗ್ರ ಮನೆತನದ ಹಿನ್ನೆಲೆಯನ್ನು ನೋಡದಿದ್ದರೂ, ಸಂಗ್ರಹರೂಪವಾಗಿಯಾದರೂ ಅದರ ಬಗ್ಗೆ ತಿಳಿಯುವುದು ಸೂಕ್ತವೆನಿಸುತ್ತದೆ.

ಜೋಳದರಾಶಿಯ ದೊಡ್ಡಹೊನ್ನನಗೌಡ ಮತ್ತು ಸಣ್ಣಹೊನ್ನನಗೌಡರಿಬ್ಬರು ಊರಿನ ಪ್ರತಿಷ್ಠಿತ 'ಗೌಡಕಿ' ಮನೆತನದ ಅಣ್ಣ-ತಮ್ಮಂದಿರರು. ಹೆಸರೇ ಸೂಚಿಸುವಂತೆ, ದೊಡ್ಡ ಹೊನ್ನಗೌಡರು, ಸಣ್ಣಹೊನ್ನನಗೌಡರ ಅಣ್ಣಂದಿರು. ಇದೊಂದು ಆಗರ್ಭ ಶ್ರೀಮಂತ ಅವಿಭಕ್ತ ರೈತಕುಟುಂಬ. ಶ್ರೀಮಂತಿಕೆಯ ಜೊತೆಗೆ ಊರಿನ ಆಡಳಿತ 'ಗೌಡಿಕೆ'ಯು, ಇವರದೇ ಆಗಿತ್ತು. ಈ ಸಹೋದರರು ವಿದ್ಯಾವಂತರೂ, ವ್ಯವಹಾರ ಕುಶಲರೂ, ನ್ಯಾಯ ನಿಷ್ಠುರರೂ ಆಗಿದ್ದರು. ದೊಡ್ಡಹೊನ್ನನಗೌಡರು "ಶೀಲ ಪ್ರಾಮಾಣಿಕತೆ' ದರ್ಪ-ಠೀವಿಗಳಿಗಂಜಿ, ಊರಜನರು ದೂರನಿಂತೇ ಮಾತನಾಡುತ್ತಿದ್ದರು. "ಮೇಲಿನ ಉದ್ಯೋಗಿಗಳನ್ನು ಕಂಡಾಗ ಬಗ್ಗಿ ನಮಸ್ಕಾರ ಮಾಡಿ "ದ್ಯಾವರಾ? ಎನ್ನುವ ಗೌಡರ ಕಾಲದಲ್ಲಿ ಅವರ ಸರಿಸಮನಾಗಿ, ಲೋಡಿಗಾತು ಗೌಡಿಕೆಯ ಕಾರುಬಾರು ನಡೆಸಿದವರು... ಘಾಲಾಕ್ಷನಿಗೂ ಹೆದರದೆ ತನಗೆದುರಾದವರನು ಪಾತಾಳಕ್ಕೆ ತುಳಿದುಬಿಡುವ ಕೆಚ್ಚು ಇವರದಂತೆ. ಆ ಕಾಲದಲ್ಲಿ ಇವರಿಗಿಂತ, ಗೋಡೆಹಾಳ ಕರಿಬಸನಗೌಡ, ಶಾನುಭೋಗ ತಿಮ್ಮಪ್ಪನವರು, ನಮ್ಮ ಗ್ರಾಮದಲ್ಲಿ ಪ್ರಬಲಸ್ಥರಾಗಿದ್ದು ಇವರೊಂದಿಗೆ ದಿಟ್ಟತನದಿಂದ ಊರಲ್ಲಿಯೂ ಸರಕಾರದಲ್ಲಿಯೂ ವ್ಯಾಜ್ಯಮಾಡಿ, ಮುವ್ವತ್ತಾರು ವ್ಯಾಜ್ಯಗಳನ್ನು ಗೆದ್ದ ವಿಷಯ ಇಂದಿಗೂ ಕಥೆಗಳಂತೆ ಬಲ್ಲವರು ಹೇಳುತ್ತಿರುವುದು ಕೇಳಿರುವೆ" ಎಂದು ದೊಡ್ಡನಗೌಡರು ತಮ್ಮ ಆತ್ಮಚರಿತ್ರೆಯಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ದೊಡ್ಡನಗೌಡರ ಈ ಮಾತಿನಿಂದ, ಅವರ ಮನೆತನದ ಗೌಡಿಕೆಯ

ಹೆಗ್ಗಳಿಕೆಯನ್ನು ಅರಿಯಬಹುದಾಗಿದೆ. ಗೌಡರ ಶ್ರೀಮಂತಿಕೆಗಂತೂ ಕೊರತೆಯಿರಲಿಲ್ಲ ನಾಲ್ಕುನೂರು ಎಕರೆ ಜಮೀನಿನ ಒಡೆತನ, ಮನೆತುಂಬ ಎತ್ತು-ಎಮ್ಮೆ ಮುಂತಾದ ದನಕರುಗಳು, ಈ ಕೃಷಿಕಾರ್ಯಕ್ಕೆ ಬೇಕಾದಷ್ಟು ಆಳು-ಕಾಳುಗಳು, ಹೀಗೆ ಅತ್ಯಂತ ವೈಭವದ ಬದುಕು-ಹೊನ್ನನಗೌಡ ಸಹೋದರರದು.

ಈ ಮನೆತನಕ್ಕೆ ಹೀಗೆ ಸಕಲಸಂಪತ್ತಿದ್ದರೂ, ಸಂತಾನ ಸೌಭಾಗ್ಯದ ಕೊರತೆಯಿತ್ತು. ದೊಡ್ಡಹೊನ್ನನಗೌಡರು ಮೊದಲಪತ್ನಿ ಬಾಪುರದ 'ನಾಗಮ್ಮ'ನವರಿಗೆ ಮಕ್ಕಳಗಾಗಲಿಲ್ಲ ಎಂಬ ಕಾರಣದಿಂದಾಗಿ, ಮಿಂಚೇರಿಯ ಗಂಗಮ್ಮನವರೊಂದಿಗೆ ಎರಡನೆ ಮದುವೆ ಮಾಡಿಕೊಂಡರು. ಈ 'ಗಂಗಮ್ಮ'ನದು ಹೊಸ ಸಂಬಂಧವಾಗಿರದೆ, ಮಿಂಚೇರಿಗೆ ಕೊಟ್ಟಿದ್ದ ಹೊನ್ನನಗೌಡರ ತಂಗಿಯ ಮಗಳೇ ಆಗಿದ್ದಾರೆ. ಹೀಗೆ ದೊಡ್ಡಹೊನ್ನನಗೌಡರಿಗೆ ಎರಡು ಮದುವೆಯಾದರೂ, ನಾಗಮ್ಮನಿಗಾಗಲಿ - ಗಂಗಮ್ಮನಿಗಾಗಲಿ ಮಕ್ಕಳಾಗಲಿಲ್ಲ.

ಸಣ್ಣ ಹೊನ್ನನಗೌಡರಿಗೂ ಇಬ್ಬರು ಹೆಂಡರು. ಮೊದಲ ಪತ್ನಿ 'ಭೋಗಮ್ಮ, ಎರಡನೆಯ ಪತ್ನಿ ರುದ್ರಮ್ಮ ಈ ರುದ್ರಮ್ಮನು ಕೂಡ ಹೊನ್ನನಗೌಡರ ತಂಗಿಯಮಗಳೇ ಎಂಬುದನ್ನು ಗಮನಿಸಬೇಕು. ಹೀಗೆ ಇಬ್ಬರು ಹೆಂಡಿರ ಸಂಸಾರದಲ್ಲಿ "ಭೋಗಮ್ಮನವರಿಗೆ ಒಂದು ಹೆಣ್ಣು ಮಗುವಾಯಿತು. ಹುಟ್ಟಿದ ಮಗುವಿಗೆ 'ರುದ್ರಮ್ಮ'ನೆಂದು ನಾಮಕರಣ ಮಾಡಿದರು. ಸಣ್ಣಹೊನ್ನನಗೌಡರ ಕಿರಿಯಪತ್ನಿಯ ಹೆಸರುಕೂಡ 'ರುದ್ರಮ್ಮ'ನೆಂದೇ ಇದ್ದರೂ 'ಭೋಗಮ್ಮ'ನವರ ಮಗಳಿಗೆ 'ರುದ್ರಮ್ಮ'ನೆಂದೂ ನಾಮಕರಣ ಮಾಡಿದುದರ ಔಚಿತ್ಯವೇನೂ ತಿಳಿಯುವದಿಲ್ಲ ಹೀಗೆ ಅವಿಭಕ್ತ ಆಗರ್ಭ ಶ್ರೀಮಂತ ರೈತಮನೆತನದ ಏಕೈಕ ಸಂತಾನ ಫಲ ಈ ರುದ್ರಮ್ಮನವರಾದರು. 'ಹೊನ್ನನಗೌಡ' ಸಹೋದರರಿಗೆ, ರುದ್ರಮ್ಮನ ತರುವಾಯ ಮಕ್ಕಳಾಗಲೇ ಇಲ್ಲ ಗೌಡಕಿ ಮನೆತನದ ಕೀರ್ತಿ ಸಂಪತ್ತುಗಳೆಲ್ಲ ರುದ್ರಮ್ಮನಿಂದಲೇ ಬೆಳೆದು ಉಳಿದುಕೊಂಡು ಬರುವಂತಾಯಿತು. ದೊಡ್ಡ ಆಡಂಬರವನ್ನು ಸಮರ್ಥವಾಗಿ ನೀಗಿಸಿಕೊಂಡು ಹೋಗುವ ಚಾಣಾಕ್ಷರ ಅವಶ್ಯಕತೆಯೂ ಇತ್ತು. ಹೊಸ ಸಂಬಂಧಕ್ಕೆ ರುದ್ರಮ್ಮನವರನ್ನು ಮದುವೆಮಾಡಿಕೊಟ್ಟು ಕುಳಿತುಕೊಳ್ಳುವಂತಿರಲಿಲ್ಲ, ಒಬ್ಬಳೇ ಮಗಳೆಂಬ ಮಮತೆ, ದೊಡ್ಡ ಆಸ್ತಿ ಅನ್ಯರ ಪಾಲಾಗಬಾರದೆಂಬ ಉದ್ದೇಶ, ಮಗಳು ಸುಖವಾಗಿರಬೇಕು ಮತ್ತು ಕಣ್ಣಮುಂದೆಯೇ ಇರಬೇಕೆಂದು ಹೊನ್ನನಗೌಡರು ಯೋಚಿಸಿದ್ದುದು ಸಹಜವಾದುದೇ ಆಗಿದೆ.

ಈ ಮಧ್ಯೆ ಸಣ್ಣ ಹೊನ್ನನಗೌಡರ ಮೊದಲಪತ್ನಿ ಹಾವಳಿಗೆಯ ಭೋಗಮ್ಮನವರ ತಮ್ಮ ಪಂಪನಗೌಡರು, ಮಾವನ ಮನೆಯ ಕೃಷಿಕಾರ್ಯದಲ್ಲಿ ನೇರವಾಗಲೆಂದು ಜೋಳದರಾಶಿಗೆ ಬಂದು ನೆಲೆಸಿದ್ದರು. ಹಾಗೆ ಬರುವಾಗ ಕೆಂಗಲ್ ಪಂಪನಗೌಡರು, ತಮ್ಮ ತಂದೆಯನ್ನು ತಮ್ಮನಾದ (ಸಹೋದರ) ರುದ್ರಗೌಡನನ್ನೂ ಕರೆದುಕೊಂಡು ಬಂದಿದ್ದರು. ಮಾವನ ಮನೆಯ ಕೃಷಿ ಕಾರ್ಯದ ಸಕಲಜವಾಬ್ದಾರಿಯನ್ನು ಇವರು ಸಮರ್ಥವಾಗಿ ಪೂರೈಸಿಕೊಂಡು ಬರುತ್ತಿದ್ದರು. ತಮ್ಮ ಮನೆತನದ ಕೀರ್ತಿ, ಸಂಪತ್ತು ಭವಿಷ್ಯತ್ತಿನಲ್ಲೂ ಉಳಿದುಕೊಂಡು ಬರಬೇಕಾದರೆ, ಪಂಪನ ಗೌಡರು ಜೋಳದರಾಶಿಯಲ್ಲಿಯೇ ನಿಂತರೆ ಮಾತ್ರ ಸಾಧ್ಯವೆಂದು ಹೊನ್ನನಗೌಡ ಸಹೋದರರಿಗೆ ಮನವರಿಕೆಯಾಯಿತು.

ಪಂಪನಗೌಡರು ಹೇಗಿದ್ದರೂ ಹೊರಗಿನವರಲ್ಲ ಬಡವರಾದರೂ ಗುಣವಂತರಾಗಿದ್ದರು. ಈ ಕಾರಣ ಇದ್ದೊಬ್ಬಮಗಳು 'ರುದ್ರಮ್ಮ'ನನ್ನು ಪಂಪನಗೌಡರಿಗೆ ಕೊಟ್ಟು ಮದುವೆ ಮಾಡುವುದೆಂದು ಯೋಚಿಸಿದರು. ಹೀಗೆ ಮಾಡುವುದರಿಂದ ಮಗಳು ರುದ್ರಮ್ಮ ಸದಾಕಾಲ, ತಮ್ಮೆದುರಿನಲ್ಲಿ ಸುಖವಾಗಿರುತ್ತಾಳೆಂಬ ಆಸೆಯೂ ಸೇರಿಕೊಂಡಿತ್ತು. ಅಲ್ಲದೆ ದೊಡ್ಡ ಆಡಂಬರದ ತಮ್ಮ ಕೃಷಿಕಾರ್ಯವು, ನಿರಾತಂಕವಾಗಿ ಸಾಗುವುದೆಂಬ ಮುಂದಾಲೋಚನೆಯೂ ಕೂಡಿಕೊಂಡಿತ್ತು. ಹೀಗೆ ಹಿರಿಯರ ಲೆಕ್ಕಾಚಾರದಂತೆ ಸಣ್ಣಹೊನ್ನನಗೌಡರ ಮೊದಲಪತ್ನಿ ಹಾವಳಿಗೆಯ ಭೋಗಮ್ಮನವರ ತಮ್ಮನಾದ ಕೆಂಗಲ್ ಪಂಪನಗೌಡರಿಗೆ ಸಣ್ಣಹೊನ್ನನಗೌಡ ಮತ್ತು ಭೋಗಮ್ಮನವರ ಮಗಳು' , 'ರುದ್ರಮ್ಮ'ನೊಂದಿಗೆ ವಿಜೃಂಭಣೆಯಿಂದ ಮದುವೆಮಾಡಲಾಯಿತು. “ಕಟ್ಟೆಯ ಕಲ್ಲು ಕಟ್ಟೆಗೆ ಹೊಂದಿದಂತಾಯಿತು. ಈ ಸಂಬಂಧದಿಂದಾಗಿ ಮಗಳು ರುದ್ರಮ್ಮ, ತಮ್ಮ ಕಣ್ಮುಂದೇ ಇರುವಂತಾಯಿತು, ಸಂಪತ್ತು ಅನ್ಯರ ಪಾಲಾಗಲಿಲ್ಲವಲ್ಲದೆ, ಕೃಷಿಕಾರ್ಯವೂ ನಿರಾತಂಕವಾಗಿ ಸಾಗುವಂತಾಯಿತು. ಹೀಗೆ ಮನೆತನದ ಘನತೆ-ಗೌರವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಹಿರಿಯರಲೆಕ್ಕಾಚಾರವೇನೊ ಸರಿಯಾಗಿಯೇ ಯಿತ್ತಾದರೂ, ಕೆಲವರ ಲೆಕ್ಕಾಚಾರ ತಪ್ಪಿಹೋಯಿತು. ಹೊನ್ನನಗೌಡ ಸಹೋದರರ ಹಿರಿತನದಲ್ಲಿ ಪಂಪನಗೌಡ ಮತ್ತು ರುದ್ರಮ್ಮನವರ ದಾಂಪತ್ಯ ಜೀವನ ಸುಖವಾಗಿಯೇ ಸಾಗಿತು. ಗಂಡು-ಸಂತಾನವಿಲ್ಲದ ಮನೆಯಲ್ಲಿ ಆದಷ್ಟು ತೀವ್ರ ಗಂಡುಮಗುವೊಂದಾಗಬೇಕೆಂಬುದು, ಕುಟುಂಬದ ಹಿರಿಯರೆಲ್ಲರ ಅಪೇಕ್ಷೆಯಾಗಿತು. ಅವರೆಲ್ಲರ ಬಯಕೆಯೇ ಮೈವೆತ್ತುಬಂದಂತೆ 'ರುದ್ರಮ್ಮ'ನವರು ಗಂಡುಮಗುವಿಗೆ ಜನ್ಮನೀಡಿದರು. ಆ ಮಗುವೇ ಈ ಚರಿತ್ರೆಯ ಕಥಾನಾಯಕ 'ದೊಡ್ಡನಗೌಡರು'.

## ೨. ದೊಡ್ಡನಗೌಡರ ಜನನ-ಬಾಲ್ಯ ಮತ್ತು ವಿದ್ಯಾಭ್ಯಾಸ

ಜೋಳದರಾಶಿಯ ಹೆಸರನ್ನು ತಮ್ಮ ಅಗಾಧಸಾಧನೆಯ ಫಲವಾಗಿ ಕನ್ನಡರಂಗಭೂಮಿ ಮತ್ತು ಸಾಹಿತ್ಯೇತಿಹಾಸದಲ್ಲಿ ಸ್ಥಿರವಾಗುಳಿಸಿದ ದೊಡ್ಡನಗೌಡರು, ಕೆಂಗಲ್ ಪಂಪನಗೌಡರು ಮತ್ತು ರುದ್ರಮ್ಮನವರ ಮಗನಾಗಿ ಜೋಳದರಾಶಿಯಲ್ಲಿ ಜನಿಸಿದ್ದು ೨೭-೦೭-೧೯೧೦, ಸಾಧಾರಣ ಸಂವತ್ಸರ ಆಷಾಢ ಬ. ೧೧ರಂದು. ದೀರ್ಘ ಕಾಲದನಂತರ ಹುಟ್ಟಿದ ಗಂಡುಮಗುವಾದ್ದರಿಂದ, ಮನೆಮಂದಿಗೆಲ್ಲಾ ಹಿಡಿಸಲಾರದಷ್ಟು ಹಿಗ್ಗಾಯಿತು. ಕೆಲವು ಜನ ಹುಟ್ಟುವಾಗಲೆ, ಬಾಯಿಯಲ್ಲಿ ಬಂಗಾರದ ಚಮಚೆಯಿಟ್ಟು ಕೊಂಡೇ ಹುಟ್ಟುತ್ತಾರೆಂಬ ಮಾತಿದೆ. ದೊಡ್ಡನಗೌಡರು ಕೂಡ ಹೀಗೆ ಹುಟ್ಟಿದ ಅದೃಷ್ಟವಂತರು. ತಾತಂದಿರಿಂದ ಬಳುವಳಿಯಾಗಿಬಂದ ಆಗರ್ಭ ಶ್ರೀಮಂತಿಕೆ ಹಾಗೂ ತಾತ-ಅಜ್ಜಿ ತಂದೆ-ತಾಯಿ ಮೊದಲಾದವರ ಪ್ರೀತಿ-ವಾತ್ಸಲ್ಯಗಳ ಮಧ್ಯೆ ದೊಡ್ಡನಗೌಡರ ಬಾಲ್ಯಜೀವನ, ಅತ್ಯಂತ ಸುಖಕರವಾಗಿ ಕಳೆಯಿತು. ದೊಡ್ಡಹೊನ್ನನಗೌಡರ ಕಿರಿಯಪತ್ನಿ ರುದ್ರಮ್ಮನವರಿಗೆ, ಒಳಗೊಳಗೆ ಅಸಮಾಧಾನವಿದ್ದರೂ, ಗಂಡಂದಿರ ಹೆದರಿಕೆಯಿಂದಾಗಿ ಬಹಿರಂಗದಲ್ಲಿ ತೋರುಗೊಡುವಂತಿರಲಿಲ್ಲ ಈ ಮಧ್ಯೆ ದೊಡ್ಡನಗೌಡರ ತಾಯಿ ರುದ್ರಮ್ಮನವರು ಹೆಣ್ಣುಮಗುವಿಗೆ ಜನ್ಮನೀಡಿದರು. ಆ ಮಗುವೆ ದೊಡ್ಡನಗೌಡರ

ತಂಗಿ, ಬಾಪುರದ ನೀಲಮ್ಮನವರು. (ಇನ್ನು ಮುಂದೆ ದೊಡ್ಡನಗೌಡರು ಎಂದು ಹೇಳಬೇಕಾದಲ್ಲೆಲ್ಲಾ 'ಗೌಡರು' ಎಂದು ಸಂಕ್ಷಿಪ್ತವಾಗಿ ಹೇಳಲಾಗುವುದು.)

ಗೌಡರ ಸಣ್ಣತಾತ, ಅಜ್ಜಿ ಭೋಗಮ್ಮ (ತಾಯಿಯತಾಯಿ), ತಂದೆ-ತಾಯಿಯವರು ಗೌಡರನ್ನು ಅತ್ಯಂತ ಅಕ್ಕರೆಯಿಂದ ಜೋಕೆಮಾಡಿರುವುದರಲ್ಲಿ ವಿಶೇಷವೇನೂ ಇಲ್ಲ, ರಕ್ತಸಂಬಂಧ ಕರುಳಿನ ಬಳ್ಳಿ ಯಾರನ್ನಾದರೂ ಹೀಗೆ ಪ್ರೀತಿಯ ಬಂಧನದಲ್ಲಿ ಸುತ್ತಿಕೊಳ್ಳುವುದು ಸಹಜ. ಆದರೆ ಗೌಡರ ದೊಡ್ಡತಾತನ ಮೊದಲಪತ್ನಿ ನಾಗಮ್ಮನವರು, ಇತರರಿಗಿಂತ ಗೌಡರನ್ನು ಪ್ರೀತಿಸುತ್ತಿದ್ದುದರಲ್ಲಿ ವಿಶೇಷತೆಯಿದೆ. ಏಕೆಂದರೆ, ನಾಗಮ್ಮನವರಿಗೆ ಈ ತರಹದ ಬಂಧನಗಳಾವುವೂ ಇರಲಿಲ್ಲ. ತನ್ನ ಗಂಡನೂ ತೀರಿಹೋದ ಮೇಲೆ ಆ ಮನೆಯಲ್ಲಿ ಇದ್ದವರು, ಗಂಡನ ಕಡೆಯ ಸಂಬಂಧಿಗಳೇ ವಿನಃ, ತನ್ನ ರಕ್ತಸಂಬಂಧಿಗಳಾರೂ ಆಗಿರಲಿಲ್ಲ ಇಂತಹ ಪ್ರಸಂಗದಲ್ಲಿ ಕೊನೆತನಕ ಗಂಡನ ಮನೆಯಲ್ಲೇ ನಿಂತು, ಗೌಡರನ್ನು 'ಮಗ'ನಂತೆ ಕಾಪಾಡಿಕೊಂಡು ಬಂದ, ನಾಗಮ್ಮನವರ ಸೋಜಿಗವೆನಿಸುವ ಮಾತೃವಾತ್ಸಲ್ಯದ ಪರಿಚಯವನ್ನು ಗೌಡರ ಮಾತಿನಲ್ಲಿಯೇ ಮಾಡಿಕೊಳ್ಳುವುದು ಉಚಿತವೆನಿಸುತ್ತದೆ. '

"....ನಮ್ಮ ದೊಡ್ಡತಾತನ ಕುಟುಂಬ ನಾಗಮ್ಮವ್ವ ಬಹು ಅಕ್ಕರೆಯಿಂದ ಜೋಪಾನ ಮಾಡುತ್ತಿದ್ದರು. ಯಾರಾದರಾಗಲಿ ತನ್ನ ಮೊಮ್ಮಗನನ್ನು ಹೊಡೆದರೆ ಎಂದೂ ಸೈರಿಸುತ್ತಿರಲಿಲ್ಲ. ಒಮ್ಮೆ ತನ್ನ ತಾಯಿ ರುದ್ರಮ್ಮ ಯಾಕೋ ಬಹುಸಿಟ್ಟಿನಿಂದ ಒದ್ದಿದ್ದಳು. ಆಕೆಯ ಕಾಲುಂಗುರ ಕಣ್ಣಿಗೆ ತಾಕಿ ಕಣ್ಣು ಬಾತಿತ್ತು. ಅದನ್ನು ಯಾರಿಗೂ ಹೇಳಬಾರದೆಂದು ಪಶ್ಚಾತ್ತಾಪಗೊಂಡು ಅಂಗಲಾಚಿ ಕಣ್ಣೀರಿಟ್ಟು ಗಲ್ಲ ಹಿಡಿದು ಬೇಡಿಕೊಂಡಿದ್ದಳು. ನಾನು ಯಾರಿಗೂ ಹೇಳದಿದ್ದರೂ ನನ್ನ ಕಣ್ಣು ಹೇಳದಿರುತ್ತದೆಯೇ?' ನೋಡಿದ ಕೂಡಲೇ ನಮ್ಮ (ತಾಯಿಯ ತಾಯಿ) ಅವ್ವ ಭೋಗಮ್ಮ ಮತ್ತು ನಾಗಮ್ಮ ತಬ್ಬಿಕೊಂಡು "ಏನಪ್ಪಾ ಏನಾಯಿತೊ ಮಗು'' ಎಂದು ತಲೆದಡವಿ ಕೇಳಿದ ಕೂಡಲೇ ಅಮ್ಮನಿಗೆ ಕೊಟ್ಟ ಮಾತು ಮರೆತು ಅಬ್ಬರಿಸಿ ಅಳುತ್ತಾ 'ಅಮ್ಮ' ಎಂದೆ. ಎಲ್ಲರಿಗೂ ಅರ್ಥವಾಯಿತು. ಆಗ ನಮ್ಮ ತಾಯಿಯನ್ನು ಕರೆದು, ಗದರಿಸಿ ಸಿಟ್ಟುಮಾಡಿದ್ದು 'ಅನ್ಯಾಯವಾಗಿ ಹುಡುಗನ ಕಣ್ಣು ಕಳಿತಿದ್ದೆಯಲ್ಲೆ ಮಾರಾಯಗಿತ್ತಿ ನೀನೆಂಥ ತಾಯಿ' ಎಂದು ನಮ್ಮವ್ವನವರು ಚಂಡಿಯಂತೆ ಸಿಟ್ಟಾಗಿದ್ದುದು ನೆನಪಿಗೆ ಬಂದು, ಅಯ್ಯೋ ತಾಯಿಗೆ ಕೊಟ್ಟ ಮಾತು ನಡೆಸಲಿಲ್ಲಾ ಎಂದು, ಅಂದು ಪೆಟ್ಟಾದ ಕಣ್ಣಿಂದ ನೀರೂರುತ್ತೆ'' ಎನ್ನುವ ಗೌಡರ ಈ ಮಾತಿನಿಂದ ನಾಗಮ್ಮನವರ ಮಾತೃಪ್ರೇಮದ ಅರಿವು ಉಂಟಾಗುತ್ತದೆ.

ಈ ಸಂಸಾರದಲ್ಲಿ ವಿಶೇಷ ಸಾಧನೆಯಿಲ್ಲದೆ ಯಾವ ಮನುಷ್ಯನೂ ಸಂಪೂರ್ಣ ಸುಖಿಯಾಗಿ ಇರಲಾರನೇನೊ! ಸಮಸ್ತ ಕುಟುಂಬದ ಬೆಳದಿಂಗಳಿನಂತೆ ಬಾಳುತ್ತಿದ್ದ ಗೌಡರ ಬದುಕಿಗೂ ಬಾಲ್ಯದಲ್ಲಿಯೇ ಗ್ರಹಣ ಹಿಡಿದಂತಾಯಿತು. ಅವರ ತಾಯಿ ರುದ್ರಮ್ಮನವರು ಮೂರನೆ ಹೆರಿಗೆಯ ಸಮಯದಲ್ಲಿ ತೀರಿಹೋದರು. ಮಾತೃವಾತ್ಸಲ್ಯವೆಂದರೇನು ಎಂಬ ಅರಿವು ತನ್ನ ಹಸುಗೂಸುಗಳಿಗೆ ತಿಳಿಯುವ ಮುನ್ನವೆ ಆ ತಾಯಿ ತಬ್ಬಲಿಗಳನ್ನಾಗಿಸಿ ಸಾವನ್ನಪ್ಪಿದರು. ನಮ್ಮ ತಾಯಿ ಶ್ರೀಮಂತರ ಮಗಳಾಗಿ ಬಡತನದ ಗಂಡನ ಕೈಹಿಡಿದು ಆ

ಬಡತನವನ್ನ ಶ್ರೀಮಂತಿಕೆಯಾಗಿ ಉಂಡು ಬಾಳುವೆ ಮಾಡಿದ ಗರತಿ, ಹುಣ್ಣಿಮೆಯಂದು ತಂದೆಯ ಮನೆಯಲ್ಲಿ ಮಾಡಿದ ವಿಶೇಷ ಪಕ್ವಾನ್ನಗಳಿಗಾಸೆ ಮಾಡದೆ ಕರೆದರೂ ಹೋಗದೆ, ಗಂಡನುಂಡದ್ದೇ ಪರಮಾಮೃತವಾಗಿ ಸವಿದ ಗುಣವಂತೆ. ಬಹುಕಾಲ ಬಾಳುವ ಭಾಗ್ಯವನ್ನು ಪಡೆಯಲಿಲ್ಲ. ನನ್ನ ತಂಗಿಯ ತರುವಾಯ ಹೆತ್ತ ಕೂಸಿನೊಂದಿಗೆ, ಇದ್ದ ಇಬ್ಬರು ಮಕ್ಕಳನ್ನು ತಬ್ಬಲಿಗಳನ್ನಾಗಿ ಮಾಡಿ ಕಣ್ಣುಮುಚ್ಚಿದ ಮುತ್ತೈದೆ' ಎಂದು ತಾಯಿಯನ್ನು ಕಳೆದುಕೊಂಡ ಸಂಕಟದಿಂದ ಗೌಡರು ನೊಂದು ನುಡಿದಿದ್ದಾರೆ.

'ಹೊನ್ನನಗೌಡರಿಗೆ ಇನ್ನೊಬ್ಬ ಮಗಳೂ ಕಣ್ಮುಚ್ಚಿದಾಗ, ತಮ್ಮ ದೈವವನ್ನೇ ಹಳಿದುಕೊಳ್ಳುವಂತಾಯಿತು. ಇಬ್ಬರು ಸಹೋದರರಿಗೂ, ಇಬ್ಬಿಬ್ಬರು ಹೆಂಡಿರಾದರೂ, 'ರುದ್ರಮ್ಮ'ನ ಹೊರತಾಗಿ ಮಕ್ಕಳಾಗಲಿಲ್ಲ ಇದ್ದೊಬ್ಬ ಮಗಳೂ ಕಣ್ಮುಚ್ಚಿದಾಗ ಧೃತಿಗೆಡದಿರಲಾದೀತೆ? ಹೊಸನೀರು ಬಂದಂತೆ ಹಳೆನೀರು ಹರಿದು ಹೋಗುವುದು, ಸೂರ್ಯೋದಯದೊಂದಿಗೆ ಕವಿದ ಕತ್ತಲೆ ದೂರಾಗುವುದು - ಇದೆಲ್ಲ ಪ್ರಕೃತಿ ಧರ್ಮ. ಹೊನ್ನನಗೌಡರು ಮಗಳನ್ನು ಕಳೆದುಕೊಂಡ ನೋವಿನಿಂದ ಬೇಸರಗೊಂಡಿದ್ದರಾದರೂ, ಅವರಿಗೆ ಮಗಳು ತನ್ನ ಹಿಂದೆ ಬಿಟ್ಟುಹೋದ ಕರುಳ ಕುಡಿಗಳ ಮೋಹ ತಾನೇ ತಾನಾಗಿ ಸುತ್ತಿಕೊಂಡಿತ್ತು. ಆ ಹಸುಳೆಗಳಿಂದಾದರೂ 'ವಂಶ'ದ ಕುಡಿ ಬೆಳೆಯಲೆಂಬ ಆಸೆ, ಮಗಳನ್ನು ಕಳೆದುಕೊಂಡ ದುಃಖವನ್ನು ಸ್ವಲ್ಪ ಕಡಿಮೆಮಾಡಿತು. ಈಗ 'ಗೌಡರೇ' ಅವರ ತಾತನ ಬಾಳಿನ ಆಶಾದೀಪವಾದರು. ಹೀಗೆ ಬಾಲ್ಯದಲ್ಲಿ ಗೌಡರು ತಾಯಿಯನ್ನು ಕಳೆದುಕೊಂಡರೂ, ಅಜ್ಜಿ ನಾಗಮ್ಮ ಮತ್ತು ಭೋಗಮ್ಮನವರ ಮಮತೆಯ ಮಡಿಲಲ್ಲಿ ಯಾವ ಕೊರತೆಯೂ ಇಲ್ಲದಂತೆ ಸುಖವಾಗಿ ಬೆಳೆದರು.

ತಾಯಿಯನ್ನು ಕಳೆದುಕೊಂಡಾಗ 'ಗೌಡರು' ತೀರ ಚಿಕ್ಕಬಾಲಕ, ಆಗಿನ ಒಂದು ಪ್ರಸಂಗವನ್ನು ಅವರೇ ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ವಿವರಿಸಿದ್ದಾರೆ :

“ನಮ್ಮೂರಿಗೆ ಎರಡು ಮೈಲಿಗಳು ಅಂತರದಲ್ಲಿ ಬೆಳ್ಳಗುರಿಕೆ ಗ್ರಾಮ, ಅಲ್ಲಿ ಮಹಾತ್ಮರಾದ ಎರ್ರಿಸ್ವಾಮಿಗಳು ನೆಲೆಸಿದ್ದರು. ಅನೇಕ ಜನರು ತಮ್ಮ ಸಂಸಾರಿಕ ಆಪತ್ತು - ವಿಪತ್ತುಗಳಲ್ಲಿ ತಾತನ ದರ್ಶನಾಶೀರ್ವಾದ ಪ್ರಸಾದಗಳನ್ನು ಪಡೆಯುತ್ತಿದ್ದರು.... ನಮ್ಮ ತಾಯಿಯ ಬಗೆಗೆ ಕೇಳಲು ಕಾತುರತೆಯಿಂದ... ತಂದೆಯವರು ಹೊರಟಾಗ ನಾನೂ ಹಿಂದೆ ಹೋದೆ. ತಾತ ಕೂತಿದ್ದ ನಾವು ಹೋದಕೂಡಲೇ 'ಹೋಗಯ್ಯ ಬಾಯಿ ಬಾಯಿ ಬಡುಕೊ' ಎಂದು ತಟ್ಟನೆ ನುಡಿದುಬಿಟ್ಟರು. ನಿರಾಶೆಯಿಂದ ಬರುವಾಗ ತಾಯಿ ತೀರಿಹೋಗಿ ಮನೆಯು ಶೋಕದ ಕಡಲಾಗಿತ್ತು''. ಸಾವು-ನೋವುಗಳ ಸ್ಪಷ್ಟ ಪರಿಚಯವಿಲ್ಲದ ಮುಗ್ಧಬಾಲಕ, ತನ್ನ ತಾಯಿ ಬದುಕುಳಿಯಲೆಂದು, ತಂದೆಯನ್ನು ಬೆನ್ನಟ್ಟಿಕೊಂಡು ಹೋದ ಈ ದಾರುಣ ಪ್ರಸಂಗ, ಹೃದಯ ಕರಗಿಸುವಂತಹುದು.

ಗೌಡರ ಬಾಲ್ಯ ಇತರ ಬಾಲಕರಂತಾಗಿರದೆ ಹಲವು ವೈಶಿಷ್ಟ್ಯಗಳಿಂದ ಕೂಡಿದುದಾಗಿತ್ತು. ಅವರು ಹಳ್ಳಿಯಲ್ಲಿಯೇ ಹುಟ್ಟಿ ಹಳ್ಳಿಯಲ್ಲಿಯೇ ಬೆಳೆದವರಾದರೂ, ಅವರು ಗೈದ ಸಾಧನೆ ಅವರ ಬದುಕನ್ನು ಇತರರಿಗಿಂತ ಬೇರೆಯಾಗಿಸಿತು. ಯಾವ ಸೌಲಭ್ಯಗಳು ಇಲ್ಲದ ಹಳ್ಳಿಯಲ್ಲಿಯೇ ಹುಟ್ಟಿ ಕನ್ನಡ ನಾಡಿನ ಜನರೆಲ್ಲ 'ಜೋಳದರಾಶಿ'ಯ ಕಡೆಗೆ ಬೆರಗಾಗಿ ನೋಡುವಂತೆ ಬಾಳಿ-ಬದುಕಿದವರು. ಜಗತ್ತಿಗೂ ತನಗೂ ಯಾವ

ಸಂಬಂಧವೇ ಇಲ್ಲವೆಂಬಂತೆ, ಮೂಲೆಯೊಂದರಲ್ಲಿ ತನ್ನ ಪಾಡಿಗೆ ತಾನಾಗಿದ್ದ ಹಳ್ಳಿ ಜೋಳದರಾಶಿಯಲ್ಲಿ ವಿದ್ಯಾಸೌಕರ್ಯವಾಗಲಿ, ಸಾರಿಗೆ ಸೌಕರ್ಯವಾಗಲಿ, ಇರಲಿಲ್ಲ. ಅಂತಹ ಹಳ್ಳಿಯಲ್ಲಿ ಜನ್ಮ ತಳೆದ 'ಗೌಡರ ವಿದ್ಯಾಭ್ಯಾಸವೂ ಅಲ್ಲಿಯೇ ಪ್ರಾರಂಭವಾದುದು ಸ್ವಾಭಾವಿಕವೆ.

**ವಿದ್ಯಾಭ್ಯಾಸ:** ಶಿಕ್ಷಣಕ್ಕೆ ಮಹತ್ವವೇ ಇಲ್ಲದ ಆಗಿನ ಕಾಲದಲ್ಲಿ ಜೋಳದರಾಶಿಯಲ್ಲಿ ಶಿಕ್ಷಣಾವಕಾಶವಿದ್ದುದು, ನಾಲ್ಕನೇ ತರಗತಿಯವರೆಗೆ ಮಾತ್ರ. ಶಾಲೆ ಊರಲ್ಲಿ ಇತ್ತಾದರೂ, ಶಾಲೆಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಕೃಷಿಪ್ರಧಾನವಾದ ಗ್ರಾಮವಾದುದರಿಂದ, ಮನೆಮಂದಿಯೆಲ್ಲಾ ದುಡಿದರೂ ಮುಗಿಯದಷ್ಟು ಕೆಲಸಗಳಿರುತ್ತಿದ್ದವು. ರೈತರು ಮಳೆರಾಯನನ್ನು ನಂಬಿ ಕಷ್ಟಪಟ್ಟು ದುಡಿಯುತ್ತಿದ್ದಂತೆ, ಮಳೆರಾಯನು ಅವರ ಮೇಲೆ ಕಾಲಕಾಲಕ್ಕೆ ತನ್ನ ಕರುಣಾವರ್ಷವನ್ನು ಸುರಿಸುತ್ತಿದ್ದ ಶ್ರಮದ ದುಡಿಮೆ, ಸಕಾಲದಲ್ಲಿ ಸುರಿವಮಳೆ, ಭರ್ಜರಿ ಬೆಳೆ, ಮನೆತುಂಬಾ ದವಸಧಾನ್ಯಗಳನ್ನು ಇಡಲು ಜಾಗಸಾಲದಷ್ಟು ತುಂಬಿದ ಚೀಲಗಳು - ಒಟ್ಟಿನಲ್ಲಿ ಯಾವುದಕ್ಕೂ ಕೊರತೆಯಿಲ್ಲದ ಜೀವನ ಅವರದಾಗಿತ್ತು. ಹೀಗಾಗಿ ಹಳ್ಳಿಯ ಜನರು ಓದಿನ ಕಡೆಗೆ ಗಮನ ಕೊಡುತ್ತಲೇ ಇರಲಿಲ್ಲ 'ನಮಗೆದಕ ಬೇಕಪಾ ಸಾಲಿ, ತಣ್ಣಗೆ ದುಡಕೊಂಡು ಉಂಡು ರಾಜಾನಂಗ ಇರಬಾರದ'' ಎಂದು ಹಿರಿಯರು, ಮಕ್ಕಳನ್ನು ಶಾಲೆಗೆ ಕಳುಹಿಸುತ್ತಲೇ ಇರಲಿಲ್ಲ 'ಅಲ್ಲದೆ, ಕೃಷಿಕಾರ್ಯಕ್ಕೆ ಎಂಟುವರುಷದ ಮಗುವಿನಿಂದ, ಎಂಬತ್ತು ವರುಷದ ಮುದುಕರ ಅವಶ್ಯಕತೆಯೂ ಇರುತ್ತದೆ. ಸಣ್ಣ ಮಕ್ಕಳನ್ನು ದನಕಾಯಲು ಅಟ್ಟಿದರೆ, ಮುದುಕರನ್ನು ಹೊಲಕಾಯಲು ಅಟ್ಟುತ್ತಾರೆ. ಹೀಗೆ ಮನೆಯವರೆಲ್ಲ ವರ್ಷವಿಡೀ ಸಂಪೂರ್ಣ ಕೃಷಿ ಕಾರ್ಯದಲ್ಲಿಯೇ ತೊಡಗಬೇಕಾಗುತ್ತಿತ್ತು. ಇದರಿಂದಾಗಿ ವಿದ್ಯೆಯ ಕಡೆಗೆ ಯಾರ ಗಮನವೂ ಇರುತ್ತಿರಲಿಲ್ಲ, ಯಾರಾದರೂ ವಿದ್ಯಾವಂತರು ಬಂದರೆ, ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರಲ್ಲದೆ, ಅವರ ವೇಷ-ಭೂಷಣ, ಅವರು ಆಡುವ ಮಾತುಗಳನ್ನು ಕೇಳಲು ಜನರು ಆಶ್ಚರ್ಯದಿಂದ ಸುತ್ತುಗಟ್ಟುತ್ತಿದ್ದರು. ಇಂತಹ ಕಾಲದಲ್ಲಿ ವಿದ್ಯೆಯ ಮಹತ್ವವೇ ಇಲ್ಲದ ಗ್ರಾಮದಲ್ಲಿ ಗೌಡರ ಪ್ರಾಥಮಿಕ ವಿದ್ಯಾಭ್ಯಾಸ ಪ್ರಾರಂಭವಾಯಿತು.

ಗೌಡರು ಶಾಲೆಯಲ್ಲಿ ಕಲಿತದ್ದು ನಾಲ್ಕನೇ ತರಗತಿಯವರೆಗೆ ಮಾತ್ರ. ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಳ್ಳಾರಿಗೆ ಹೋಗಬೇಕಾಗುತ್ತಿತ್ತು. ಆಗರ್ಭ ಶ್ರೀಮಂತ ಮನೆತನದ ಏಕೈಕ ವಂಶದ ಕುಡಿಯಾಗಿದ್ದ 'ಗೌಡ'ರನ್ನು ಬಳ್ಳಾರಿಗೆ ಕಳುಹಿಸಿಯಾರೆ? ಅವರ ತಾತನವರು ಅದಕ್ಕೆ ಸಮ್ಮತಿ ನೀಡಲಿಲ್ಲ ಮೊಮ್ಮಗ ತಮ್ಮ ಶ್ರೀರಕ್ಷೆಯಲ್ಲಿಯೆ ಬೆಳೆಯಬೇಕು ಎನ್ನುವ ಜವಾಬ್ದಾರಿಯ ಮುನ್ನೆಚ್ಚರಿಕೆಯೇ ತಾತನವರು ತೆಗೆದುಕೊಳ್ಳುವ ನಿರ್ಧಾರಕ್ಕೆ ಹಿನ್ನೆಲೆಯಾಗಿತ್ತು. ಹೀಗಾಗಿ ಗೌಡರ 'ಶಾಲೆ'ಯ ಓದು ಅಲ್ಲಿಗೆ ನಿಲ್ಲಬೇಕಾಯಿತು. ಹೆಚ್ಚಿಗೆ ಕಲಿತು ಏನು ಮಾಡುವದಿದೆ? ಮನೆ ಜವಾಬ್ದಾರಿ ನೋಡಿಕೊಂಡು ಹೋದರೆ ಸಾಕು, ಇರುವವನು ಒಬ್ಬವ' ಎನ್ನುವ ಅಜ್ಜಿಯರ ವಾತ್ಸಲ್ಯದ ಮಾತುಗಳೂ ಜೊತೆಗೆ ಸೇರಿಕೊಂಡಿದ್ದವು. ತಾಯಿಯಿಲ್ಲದ ಮಗುವನ್ನು ಬಿಟ್ಟಿರುವ ಶಕ್ತಿ ಗೌಡರ ಅಜ್ಜಿಯರಿಗೆ ಇರಲಿಲ್ಲವೆಂಬುದನ್ನು ಇಲ್ಲಿ ಗಮನಿಸಬೇಕು.

ಗೌಡರು ಕಲಿತದ್ದು ನಾಲ್ಕನೇ ತರಗತಿಯವರೆಗಾದರೂ, ಅಂದಿನ ಶಿಕ್ಷಣದ ಪದ್ಧತಿ, ವ್ಯವಸ್ಥೆ ಶಿಕ್ಷಣ ಮೌಲ್ಯ, ಗುರುಗಳ ನಿಷ್ಠೆಗಳೆಲ್ಲಾ ಬೆರಗುಗೊಳ್ಳುವಂತಿದ್ದವೆಂದು ಗೌಡರೇ ಹೇಳಿಕೊಂಡಿದ್ದಾರೆ. ಕನ್ನಡ ವಿಷಯವನ್ನು ಆಯ್ಕೆ ಮಾಡಿಕೊಂಡು, ಬಿ.ಎ. ಪಾಸಾಗುವ ಇಂದಿನ ಎಷ್ಟೋ ವಿದ್ಯಾರ್ಥಿಗಳಿಗೆ ಹಳಗನ್ನಡವನ್ನು ಓದಿ ಅರ್ಥಮಾಡಿ ಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಕಾರ್ಯ ಪ್ರಾಥಮಿಕ ಶಾಲೆಯಲ್ಲಿಯೇ ಪ್ರಾರಂಭವಾಗುತ್ತಿತ್ತೆಂದರೆ, ಅಂದಿನ ಶಿಕ್ಷಣದ ಗುಣಮಟ್ಟ ಎಷ್ಟಿತ್ತೆಂದು ಊಹಿಸಬಹುದಾಗಿದೆ.

ಈ ಮೊದಲೇ ನೋಡಿರುವಂತೆ, ಆಂಧ್ರದ ಅಂಚಿನಲ್ಲಿರುವ ಹಳ್ಳಿ ಜೋಳದರಾಶಿಯಾಗಿರುವುದರಿಂದ, ಅಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳೆರಡನ್ನೂ ಸರಾಗವಾಗಿ ಮಾತನಾಡುತ್ತಾರೆ. ಹೀಗಾಗಿ ಎರಡು ಭಾಷೆಯಲ್ಲೂ ಶಿಕ್ಷಣ ಸಾಗುತ್ತಿತ್ತು. ಒಂದೇ ಸಾಲಿ, ಒಬ್ಬರೇ ಮಾಸ್ತರರು. ಒಂದು ಸಾಲಿನಲ್ಲಿ ಕನ್ನಡ ಹುಡುಗರು, ಇನ್ನೊಂದು ಸಾಲಿನಲ್ಲಿ ತೆಲುಗು ಹುಡುಗರು. ಕನ್ನಡ ಮತ್ತು ತೆಲುಗು ಎರಡೂ ಭಾಷೆಯಲ್ಲೂ ಕಲಿಸುವವರು ಒಬ್ಬರೇ ಶಿಕ್ಷಕರು. ಒಂದು ಕಡೆ ಮುಖಮಾಡಿ ಕನ್ನಡದಲ್ಲಿ ಪಾಠ ಮಾಡುವುದು, ಇನ್ನೊಂದು ಕಡೆ ಮುಖಮಾಡಿ ತೆಲುಗಿನಲ್ಲಿ ಪಾಠ ಮಾಡುವುದು. ಹೀಗಾಗಿ ಕನ್ನಡ ಮತ್ತು ತೆಲುಗು ವಿದ್ಯಾರ್ಥಿಗಳಿಗೆಲ್ಲಾ 'ಕನ್ನಡ-ತೆಲುಗು' ಭಾಷೆಗಳೆರಡರಲ್ಲಿಯೂ ಶಿಕ್ಷಣ ಸಾಗಿದಂತಾಗುತ್ತಿತ್ತು. ಕಾರಣ ಗೌಡರ ಬಾಲ್ಯದ ಶಿಕ್ಷಣ ಬಹುತೇಕ ತೆಲುಗಿನಲ್ಲಿಯೇ ನಡೆಯಿತೆಂದು ಹೇಳಬೇಕು.

ಗೌಡರೇ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿರುವಂತೆ, ಅಂದಿನ ವಿದ್ಯಾರ್ಥಿಗಳಿಗೆ ಮಾಸ್ತರರ ಬಗೆಗೆ ತುಂಬಾ ಭಯವಿರುತ್ತಿತ್ತು. ಇವರ ಗುರುಗಳಾಗಿದ್ದ ರುದ್ರಯ್ಯನವರು ಮತ್ತು ಷಡಕ್ಷರಯ್ಯನವರು ತುಂಬ ನಿಯತ್ತಿನವರು ಮತ್ತು ಅಷ್ಟೇ ಪ್ರತಿಭಾಸಂಪನ್ನರು. ತಾವು ಕಲಿಸಿದ ಪಾಠವನ್ನು ತಮ್ಮ ಶಿಷ್ಯರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಯಾರಾದರೂ ತಪ್ಪಿದರೆ ಅಂಥವರಿಗೆ ಬೇವಿನ ಜುಳುಕೆಯ ಏಟು ತಪ್ಪಿದ್ದಲ್ಲ. ಅಂತಹ ಅಧಿಕಾರವನ್ನು ಅಂದು ಶಿಕ್ಷಕರು ಹೊಂದಿದ್ದರಲ್ಲದೆ, ಅದನ್ನು ಅಷ್ಟೇ ವಿಶ್ವಾಸದಿಂದ ಒಪ್ಪಿಕೊಳ್ಳಲಾಗಿತ್ತು. ಆಗಿನ ಶಿಕ್ಷಣ ಪದ್ಧತಿಯಲ್ಲಿ ಕಂಠಪಾಠಕ್ಕೆ ಹೆಚ್ಚಿನ ಮಹತ್ವವನ್ನು ಕೊಡುತ್ತಿದ್ದರು. ಗೌಡರು ಬಾಲ್ಯದಲ್ಲಿಯೆ ಧನಂಜಯ ನಿಘಂಟು, ಆಂಧ್ರನಾಮ ಸಂಗ್ರಹ ಅಮರಕೋಶ, ನಿಜಲಿಂಗ ಶತಕ, ನರಸಿಂಹ ಶತಕ ಮುಂತಾದುವನ್ನು ಬಾಯಿಪಾಠ ಮಾಡಿದ್ದರು. ಕಾವ್ಯಗಳನ್ನು ಓದುವುದು, ಪದಚ್ಛೇದ ಮಾಡುವುದು ಸಂಧಿ ಸಮಾಸಗಳನ್ನು ಬಿಡಿಸುವುದು - ಮುಂತಾದುವೆಲ್ಲ ಪಾಠ ಕ್ರಮದ ಪ್ರಮುಖ ಅಂಗಗಳಾಗಿದ್ದವೆಂದು ಗೌಡರು ಹೇಳಿಕೊಂಡಿದ್ದಾರೆ. ಹೀಗೆ ಮಾಡುವಾಗ ಶುದ್ಧ ಉಚ್ಚಾರಣೆಗೆ ಬಹಳ ಮಹತ್ವವನ್ನು ಕೊಡುತ್ತಿದ್ದರಂತೆ. ಮಧ್ಯಾಹ್ನದವರೆಗೂ, ಇಷ್ಟು ಅಭ್ಯಾಸ ನಡೆದ ಮೇಲೆ, ಅನಂತರದಲ್ಲಿ ಇನ್ನೊಂದು ಬಗೆಯ ಪಾಠಗಳು ನಡೆಯುತ್ತಿದ್ದವು.

ಹುಡುಗರನ್ನೆಲ್ಲಾ ಸಾಲಾಗಿ ಕೂಡ್ರಿಸಿ, ಗದುಗಿನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ರಾಜಶೇಖರ ವಿಳಾಸದಂತಹ ಕಾವ್ಯವನ್ನು ಗಮಕಶೈಲಿಯಲ್ಲಿ ಓದಿಸುತ್ತಿದ್ದರು. ಹೀಗಾಗಿ 'ಗಮಕ ಕಲಾನಿಧಿ' ಎಂದು

ಬಿರುದು ಪಡೆದು, ನಾಡಿನಜನರ ಆದರಾಭಿಮಾನ, ಗೌರವಕ್ಕೆ ಪಾತ್ರರಾಗಲು, ಅವರು ಬಾಲ್ಯದಲ್ಲಿ ಪಡೆದ ಶಿಕ್ಷಣವೇ ಕಾರಣ ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

'ಗೌಡರು' ತುಂಬಾ ಚುರುಕು, ಸುಂದರಕಾಯದ, ಸುಮಧುರ ಕಂಠದ ಜೊತೆಗೆ, ಬಾಲ್ಯದಿಂದಲೇ ಮೈಗೂಡಿಸಿಕೊಂಡ ಅವರ ಸಹಜ ಪ್ರತಿಭೆ ಸುಮ್ಮನೆ ಕೂಡ್ರಗೊಡಲಿಲ್ಲ. ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕೆಂಬ ಅವರ ಕುತೂಹಲ, ಅವರನ್ನು ಭವಿಷ್ಯದಲ್ಲಿ ಬಹುದೊಡ್ಡ ವ್ಯಕ್ತಿಯನ್ನಾಗಿಸಿತು. ಇಂದು ಬಹಳ ಬೇಸರವಾಗಿದೆಯೆಂದರೆ, ರೇಡಿಯೊ ಕೇಳಬಹುದು, ಅಥವಾ ನಮಗಿಷ್ಟವಾದ ಧ್ವನಿಸುರುಳಿಯನ್ನು ಹಾಕಿಕೊಂಡು ಕೇಳಬಹುದು, ಹೀಗೆಯೇ ದೂರದರ್ಶನದ ಕಾರ್ಯಕ್ರಮಗಳನ್ನು ನೋಡಬಹುದು; ನೇರವಾಗಿ ಚಿತ್ರಮಂದಿರಗಳಿಗೆ ಹೋಗಬಹುದು. ಆದರೆ ಗೌಡರ ಆ ಕಾಲದಲ್ಲಿ ಈ ಯಾವ ಸೌಲಭ್ಯಗಳೂ ಅವರನ್ನೂ ಮುಟ್ಟುವಂತಿರಲಿಲ್ಲ ಆ ಹಳ್ಳಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾಗಲಿ, ಜಾತ್ರೆ-ಉತ್ಸವಗಳಾಗಲಿ, ಒಟ್ಟಿನಲ್ಲಿ ಮನರಂಜನೆಯ ಇನ್ನಾವುದೇ ಮಾಧ್ಯಮವಾಗಲಿ ಇರಲಿಲ್ಲ. ಹೀಗಾಗಿ ಊರಿನವರಿಗೆಲ್ಲ ದೊಡ್ಡಹಬ್ಬ - ಉತ್ಸವ ಮತ್ತು ಮನರಂಜನೆಯ ಸಾಧನವೆಂದರೆ, ವರ್ಷಕ್ಕೊಮ್ಮೆ, ವೇಷಹಾಕಿ ಕುಣಿವ 'ಬಯಲಾಟ' ಮಾತ್ರ. ಜನರಿಗೆ ಮೆಚ್ಚುಗೆಯಾಗುವಂತಹ ಆಟವನ್ನು ಆಯ್ದುಕೊಂಡು, ತರಬೇತಿಗೆ ಮಾಸ್ತರರನ್ನು ಕರೆಸಿ, ಕಷ್ಟಪಟ್ಟು ಕಲಿತು, ಆಡುವುದು ಒಂದು ಹೆಮ್ಮೆಯ ಮತ್ತು ಅತ್ಯಂತ ಸಂತಸದ ಸಂಗತಿಯಾಗಿರುತ್ತಿತ್ತು. ಇಂತಹ ಪ್ರಸಂಗದಲ್ಲಿ ಊರಿನ ಜನರಲ್ಲದೆ ಸುತ್ತಮುತ್ತಲ ಹಳ್ಳಿಯ ಪ್ರಮುಖರು, ಅವರ ಜೊತೆಗಾರರು ಸೇರಿರುತ್ತಿದ್ದರು. ಹಾಗೆ ಪರವೂರಿನವರನ್ನು ಬರಮಾಡಿಕೊಳ್ಳುವುದು ಒಂದು ಗೌರವದ ವ್ಯವಸ್ಥೆಯೂ ಆಗಿತ್ತು.

ಇಂತಹ ಪ್ರತಿಷ್ಠಿತ ಬಯಲಾಟದ 'ವೇಷ' ಹಾಕುವುದರಲ್ಲಿ ಗೌಡರ ತಾತಂದಿರು ಪಳಗಿದವರು. ಗೌಡರೇ ಆ ಮಾತನ್ನು ಒಂದೆಡೆ ಹೀಗೆ ಹೇಳಿದ್ದಾರೆ:

"ನನ್ನ ಚಿಕ್ಕತಾತ ದೊಡ್ಡ ತಾತಂದಿರು ಬೈಲಾಟದಲ್ಲಿ ಪ್ರಸಿದ್ಧರಾದವರೆಂದು ಅವರ ಬಗ್ಗೆ ಅನೇಕರು ಮೆಚ್ಚಿ ಹೊಗಳುತ್ತಿದ್ದುದು ನಾನು ಕೇಳಿದ್ದೆ ದೊಡ್ಡಹೊನ್ನನಗೌಡರು ಹೆಣ್ಣುವೇಷದಲ್ಲಿ ಸಣ್ಣಹೊನ್ನನಗೌಡರು ಗಂಡುವೇಷದಲ್ಲಿ ಪ್ರಖ್ಯಾತರು. ದೊಡ್ಡಹೊನ್ನನ ಗೌಡರ ದೌಪದಿ, ಪಾರ್ವತಿ ಪಾತ್ರಗಳು ಪ್ರಸಿದ್ಧವಾದಂತೆ, ಸಣ್ಣಹೊನ್ನನಗೌಡರ 'ದುಶ್ಯಾಸನ', 'ದಕ್ಷಬ್ರಹ್ಮ', 'ಕೀಚಕ'ನ ಪಾತ್ರಗಳು ಜನರ ಮೆಚ್ಚುಗೆಯಾಗಿದ್ದವಂತೆ. ನಾನು ಹುಟ್ಟಿದ ಎರಡು ವರುಷದಲ್ಲಿಯೆ ನನ್ನ ದೊಡ್ಡತಾತ ತೀರಿಕೊಂಡರು. ಸಣ್ಣತಾತನೇ ನನ್ನನ್ನು ಅತ್ಯಂತ ಪ್ರೀತಿಯಿಂದ ಸಾಕಿದನು. ಅಷ್ಟೇ ಅಲ್ಲ ನನ್ನಲ್ಲಿಯ ಸುಪ್ತಕಲೆಯು ವ್ಯಕ್ತವಾಗಲು ಆತನೇ ಕಾರಣನಾದನು" ಎಂದು ಬರೆದಿರುವ ಗೌಡರ ಅಭಿಪ್ರಾಯವನ್ನು ಗಮನಿಸಿದಾಗ, ಕಲಾಕುಶಲತೆ ಗೌಡರಿಗೆ ಅನುವಂಶಿಕವಾಗಿಯೆ ಬಳುವಳಿಯಾಗಿ ಬಂದದ್ದು ಎಂಬುದು ಮನದಟ್ಟಾಗುತ್ತದೆ.

`ಹೀಗೆ ಮೊಮ್ಮಗನನ್ನು ಅತಿಯಾಗಿ ಪ್ರೀತಿಸುತ್ತಿದ್ದ ಸಣ್ಣ ಹೊನ್ನನಗೌಡರು, ಗೌಡರಲ್ಲಿದ್ದ ಕಲಾಸಕ್ತಿಯನ್ನರಿತು, ಬೆನ್ನುಚಪ್ಪರಿಸಿ ಹುರಿದುಂಬಿಸಿದರು. ಈ ಕಾರಣ ಗೌಡರು ಬಾಲ್ಯದಲ್ಲಿಯೇ ಬಣ್ಣಹಚ್ಚಿದರು. ಈ

ಪ್ರಸಂಗವನ್ನು ಕುರಿತು ಅವರು ಬಹಳ ಮಾರ್ಮಿಕವಾಗಿ ಹೀಗೆ ಹೇಳಿದ್ದಾರೆ: "ಪಾಲಿಸೈ ಪಾವನಾಂಗ ಪರಮಗುರುವರ' - ಈ ಗುರುಸ್ತೋತ್ರದೊಂದಿಗೆ ನನ್ನ ನಾಟ್ಯ ಕಲೋಪಾಸನೆಯು ಪ್ರಾರಂಭವಾಯಿತು. ಆಗ ನನ್ನ ವಯಸ್ಸು ೬-೭ ಇರಬಹುದು. ನಾಟಕ 'ಕನಕತಾರ'. ಆ ನಾಟಕದ ಕಥೆಯೇನೋ ತಿಳಿಯದು. ಅದರಲ್ಲಿ ಋಷ್ಯಾಶ್ರಮ. ಅಲ್ಲಿ ಒಬ್ಬ ಋಷಿ. ಆ ಋಷಿಯ ಶಿಷ್ಯರಲ್ಲಿ ನಾನೊಬ್ಬ ಬಾಲಶಿಷ್ಯ. ಪದವನ್ನೇನೂ ಕಲಿತು ಹಾಡುತ್ತಿದ್ದೆ ಆದರೆ ಆ ಪದದಲ್ಲಿಯ 'ಪರಮ ಗುರುವರ' ಎಂದು ಹೇಳುವುದಕ್ಕೆ 'ಪಲಮ ಗುಲುವಲ' ಎಂದು ಹೇಳುತ್ತಿದ್ದೆ. 'ರ'ಕಾರವನ್ನು ನುಡಿಯದೇ ಇದ್ದ ನಾಲಿಗೆ ಎಷ್ಟು ಸಾರಿ ಹೇಳಿಕೊಟ್ಟರೂ 'ಲ'ಕಾರವನ್ನೇ ನುಡಿಯುತ್ತಿದ್ದುದರಿಂದ ನನ್ನ ಓರಿಗೆಯ ಹುಡುಗರೆಲ್ಲಾ ನನ್ನ ಹೆಸರಿಗೆ ಬದಲಾಗಿ 'ಏ ಗುಲುವಲಾ ಬಾರೋ' ಎಂದು ಹಾಸ್ಯ ಮಾಡುತ್ತಿದ್ದರು'. ಬಾಲ್ಯದಲ್ಲಿಯೇ ಪ್ರತಿಭಾವಂತ ನಟರಾದ ಗೌಡರ 'ಬಣ್ಣದ ಬದುಕು' ಹೀಗೆ ಪ್ರಾರಂಭವಾಯಿತು. ಈಗಿನ ಭವ್ಯವಾದ ಸುಂದರ ಕಲಾಮಂದಿರದ ಬುನಾದಿಯನು ಗೌಡರ ಬಾಲ್ಯದಲ್ಲಿಯೇ ತೋಡಲಾಗಿತ್ತೆಂಬುದನ್ನು ಗಮನಿಸಬೇಕು.

ಗೌಡರು ಮೊಟ್ಟಮೊದಲು ರಂಗದ ಮೇಲೆ ಕುಣಿದದ್ದು 'ನಟಿಯ `ವೇಷ'ದಲ್ಲಿ ಆಗ ಗೌಡರಿಗೆ ೮-೧೦ ವರುಷವಿರಬಹುದು. ಹೀಗೆ ಬಯಲಾಟದ ನಟಿಯ ವೇಷದೊಂದಿಗೆ ರಂಗದ ಮೇಲಿನ ಅವರ ಕಲಾಜೀವನ ಪ್ರಾರಂಭವಾಯಿತು. ಅಂದರೆ ಕಾರಣಾಂತರದಿಂದ 'ಕನಕತಾರ' ನಾಟಕವನ್ನು ಆಡಿರಲಿಲ್ಲ. ಊರಿನ ಹನುಮಂತರಾಯನ ಗುಡಿಯಲ್ಲಿ ಗೌಡರ ವಿದ್ಯಾಭ್ಯಾಸ ಸಾಗುತ್ತಿದ್ದಾಗ 'ಲವ-ಕುಶ' ಎಂಬ ಆಟವಾಡಿದರು. ಈ ಆಟದಲ್ಲಿ ಗೌಡರು "ಲವ'ನಾಗಿ ಕಾಣಿಸಿಕೊಂಡಿದ್ದರು.

ಇಂದು ಹಲವಾರು ಕೃತಿಗಳನ್ನು ರಚಿಸಿ ಮಾನ-ಸನ್ಮಾನಗಳನ್ನು ಪಡೆದಿರುವ ಗೌಡರ ಕವಿಹೃದಯ, ಧ್ವನಿಯೆತ್ತಿ ಹಾಡಿಕೊಂಡಿದ್ದು ಕೂಡ ಬಾಲ್ಯದಲ್ಲಿಯೆ. ಆವಾಗಲೆ ಅವರಿಗೆ ಕಾವ್ಯರಚನೆಯತ್ತ ಒಲವು ಮೂಡಿತ್ತು. ಕೆಲವು ಕವನಗಳನ್ನು ಬರೆದು, ಕೆಲವರಿಗೆ ತೋರಿಸಿ, ಮೆಚ್ಚಿಗೆ ಗಳಿಸಿಕೊಂಡದ್ದುಂಟು. ಈ ಸಹಜ ಪ್ರತಿಭೆಯೇ ಮುಂದೆ ಅವರು ದೊಡ್ಡ ಹೆಸರು ಮಾಡುವಲ್ಲಿ ಸಹಕಾರಿಯಾಯಿತು - ಎಂಬುದು ಮನದಟ್ಟಾಗುತ್ತದೆ.

ಉಸುಕಿನಲ್ಲಿ ಬರೆದು ಕಲಿಯುವ, ಕಂಠಪಾಠಮಾಡಿ ಗುರುಗಳಿಗೆ ಒಪ್ಪಿಸುವ ಶಾಲೆಯ ಪರಿಸರದ ಶಿಕ್ಷಣ, ಗೌಡರ ಪಾಲಿಗೆ ನಾಲ್ಕನೇ ತರಗತಿಗೆ ನಿಂತಿತಾದರೂ, ಅವರ ಜ್ಞಾನದಾಹ ಹಿಂಗಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಬಹುತೇಕ ಹಳಗನ್ನಡ ಕಾವ್ಯಗಳ ಪರಿಚಯವಿದ್ದ ಗೌಡರು, ಸ್ವಪ್ರಯತ್ನದಿಂದ ವಿದ್ಯಾಭ್ಯಾಸವನ್ನು ಮನೆಯಲ್ಲಿಯೇ ಮುಂದುವರೆಸಿದರು. ವಚನಸಾಹಿತ್ಯ, ದಾಸಸಾಹಿತ್ಯ, ಕೈವಲ್ಯ ಸಾಹಿತ್ಯವನ್ನು ವಿಶೇಷ ಆಸಕ್ತಿಯಿಂದ ಓದಿ ಪರಿಣತಿ ಪಡೆದರು. ಹರಿಶ್ಚಂದ್ರಕಾವ್ಯ, ಬಸವಪುರಾಣ, ಶೂನ್ಯಸಂಪಾದನೆ, ಪ್ರಭುಲಿಂಗಲೀಲೆ, ರಾಜಶೇಖರ ವಿಲಾಸ, ಮುಂತಾದ ಕೃತಿಗಳನ್ನು ಗಮಕ ಶೈಲಿಗೆ ಅಳವಡಿಸಿ, ಹಾಡಿ, ಮನನ ಮಾಡಿಕೊಂಡರು. ಲೋಕವೇ ಅವರ ಶಾಲೆಯಾಯಿತು. ಕನ್ನಡದ ಅತ್ಯುತ್ತಮ ಪುಸ್ತಕಗಳನ್ನೆಲ್ಲಾ ತಿರಿವಿಹಾಕಿದರು. ವೀರಶೈವ ಸಿದ್ಧಾಂತವನ್ನು ವಿಶೇಷ ಗಮನವಿಟ್ಟು ಅಭ್ಯಾಸ ಮಾಡಿದರು. ಈ ದಿಸೆಯಲ್ಲಿ ಬಳ್ಳಾರಿಯ ಸರ್ವದರ್ಶನ ತೀರ್ಥರೆಂದೇ ಕರೆಯಲ್ಪಡುವ

ವೈ. ನಾಗೇಶ ಶಾಸ್ತ್ರಿಗಳವರು ಗೌಡರಿಗೆ ಗುರುಗಳಾದರು. ಗೌಡರ 'ಬಯಲಗಳಿಕೆ' ಮತ್ತು 'ಬಯಲಗಳಿಕೆಯ ಬೆಳಗು' ಕೃತಿಗಳು ತಾತ್ವಿಕ ಸಿದ್ಧಿಯ ಪ್ರತೀಕದಂತಿವೆ.

'ರಂಗಭೂಮಿ'ಯ ನಟನೆ-ನಿರ್ದೇಶನ ಮೊದಲಾದ ವಿಷಯಗಳಲ್ಲಿ ಬಳ್ಳಾರಿಯ ಟಿ. ರಾಘವರು ಗೌಡರಿಗೆ ಗುರುಗಳಾದರು. ಹೀಗೆ ಗೌಡರು ಒಂದರ್ಥದಲ್ಲಿ 'ಸ್ವಯಂಭೂ', ತಮ್ಮನ್ನು ತಾವೇ ರೂಪಿಸಿಕೊಂಡರು. ಈ ತಳಹದಿಯ ಮೇಲೆ ತಾವು ಪಡೆದ ಅಪಾರ ಜ್ಞಾನದಿಂದ ಅವರು, ಸಾಹಿತಿಗಳಾಗಿ, ಗಮಕಿಯಾಗಿ, ನಾಟಕ ಕಲಾವಿದರಾಗಿ ಬಹುದೊಡ್ಡ ಸ್ಥಾನವನ್ನು ಪಡೆದರು. ಈ ಪ್ರತಿಭಾವಂತ ಕವಿ-ಗಮಕಿ ಮತ್ತು ನಾಟಕಕಾರರ 'ಕೌಟುಂಬಿಕ ಬದುಕು ಕೂಡ ಸಾಮಾನ್ಯವಾದುದಲ್ಲ ಬಹುದೊಡ್ಡ ಅವಿಭಕ್ತ ಕುಟುಂಬದ ಭಾರವನ್ನೇ ಹೊತ್ತ ಗೌಡರು, 'ಕಲ್ಲಲ್ಲಿ ಅರಳಿದ ಹೂವಿನಂತೆ' ಬಾಳಿ ಬದುಕಿದುದೆ ಒಂದು ಸೋಜಿಗವೆನಿಸುತ್ತದೆ.

## ೩. ಕೌಟುಂಬಿಕ ಜೀವನ

ಸ್ವಸಾಧನೆಯಿಂದ ಜೋಳದರಾಶಿಯಂತಹ ಗ್ರಾಮದಲ್ಲಿದ್ದುಕೊಂಡೇ, ಕವಿ ಗಮಕಿ ನಾಟಕಕಾರರಾಗಿ ರೂಪುಗೊಂಡ ಗೌಡರ ಕೌಟುಂಬಿಕ ಜೀವನವೇನು ಯಶಸ್ವಿಯಾದುದಲ್ಲ ಗೌಡರು ಗೃಹಸ್ಥಾಶ್ರಮಕ್ಕೆ ಕಾಲಿರಿಸುವ ಮುನ್ನವೆ ಒಂದು ದುರ್ಘಟನೆ ನಡೆಯಿತು. ಗೌಡರ ತಾತ (ತಾಯಿಯ ತಂದೆ) ಸಣ್ಣ ಹೊನ್ನನಗೌಡರಿಗೆ ಗಂಡು ಸಂತಾನವಿಲ್ಲದ ಕಾರಣ, ತಮ್ಮ ಏಕೈಕ ಸಂತಾನವಾದ ರುದ್ರಮ್ಮನ ಮಗನಾದ, ದೊಡ್ಡನಗೌಡರನ್ನು ತಮ್ಮ ಸಮಸ್ತ ಆಸ್ತಿಯ ಒಡೆಯರನ್ನಾಗಿಸಬೇಕೆಂದು ಹಂಬಲ ಮೂಡಿದುದು ಸ್ವಾಭಾವಿಕವಾದುದು ಆಗಿದೆ. ಸಣ್ಣ ಹೊನ್ನನಗೌಡರ ಅಣ್ಣ ದೊಡ್ಡಹೊನ್ನನಗೌಡರು ತೀರಿಹೋಗಿದ್ದರಿಂದ, ಸಮಸ್ತ ಆಸ್ತಿಯ ಒಡೆತನ ಸಣ್ಣ ಹೊನ್ನನ ಗೌಡರದೇ ಆಗಿತ್ತು. ಈ ವ್ಯವಸ್ಥೆಯನ್ನು ದೊಡ್ಡ ಹೊನ್ನನಗೌಡರ ಮೊದಲ ವಿಧವೆ ನಾಗಮ್ಮನವರು ಒಪ್ಪಿಕೊಂಡಿದ್ದರಾದರೂ, ಕಿರಿಯ ವಿಧವೆ ಗಂಗಮ್ಮ (ಮಿಂಚೇರಿಗೆ ಕೊಟ್ಟಿದ್ದ ಹೊನ್ನನಗೌಡ ಸಹೋದರರ ತಂಗಿಯ ಮಗಳು)ನು ಒಪ್ಪಿಕೊಂಡಿರಲಿಲ್ಲ. ಅಂತೆಯೇ ಈಕೆ ಈ ಮನೆತನದವರ ಜೊತೆಗೆ ಹೊಂದಿಕೊಂಡು ಬಾಳಲೂ ಇಲ್ಲ ಗಂಗಮ್ಮನ ತಮ್ಮನಾಗಿದ್ದ ಮಿಂಚೇರಿ ವಿರೂಪಾಕ್ಷಪ್ಪ ಬಾಲ್ಯದಿಂದ ಜೋಳದರಾಶಿಯ ಸೋದರಮಾವಂದಿರಾದ ದೊಡ್ಡಹೊನ್ನನಗೌಡರ ಮನೆಯಲ್ಲಿಯೇ ಬೆಳೆದವನು. ವಿದ್ಯಾವಂತನಾಗಿದ್ದುದಲ್ಲದೆ ಬುದ್ಧಿವಂತನೂ ಆಗಿದ್ದನು. ಆದರೆ ದೊಡ್ಡಹೊನ್ನನಗೌಡರು ತೀರಿದ ಮೇಲೆ, ಸಣ್ಣಹೊನ್ನನಗೌಡರು ತಮ್ಮ ಆಸ್ತಿಗೆ, ಗೌಡರನ್ನು ಒಡೆಯನನ್ನಾಗಿ ಮಾಡಬೇಕೆಂದು ನಿರ್ಧರಿಸಿ 'ಮರಣ ಪತ್ರ' ಬರೆಸಿದಾಗ, ವಿರೂಪಾಕ್ಷಪ್ಪನ ತಲೆ ತಿರುಗಿತು. ತನಗೆ ಮಾವನ ಆಸ್ತಿಯಲ್ಲಿ ಪಾಲುಸಿಗುವುದಿಲ್ಲವೆಂದು ತಿಳಿದ ಆತ, 'ಮರಣ ಪತ್ರ' ರಿಜಿಸ್ಟರ್ ಆಗುವ ಪೂರ್ವದಲ್ಲಿಯೆ, ಸಣ್ಣ ಹೊನ್ನನ ಗೌಡರನ್ನು ಮುಗಿಸಿಬಿಡಬೇಕೆಂದು ಪ್ರಯತ್ನಿಸಿ ವಿಫಲನಾದ. ಮಾವನ ಮೇಲೆ ಹಾರಿಸಿದ ಗುಂಡು ತಾಗದೆ, ಸಣ್ಣ ಹೊನ್ನನಗೌಡರು ಸಾವಿನಿಂದ ಪಾರಾದರು. ಅದೇ ವೇಳೆಗೆ ಜೋಳದರಾಶಿಗೆ ಆಗಮಿಸಿ ಗೌಡರ ಮನೆಯಲ್ಲಿಯೇ

ಪೂಜೆಗೆ ಕುಳಿತಿದ್ದ ಉರವಕೊಂಡ ಚನ್ನಬಸವ ಸ್ವಾಮಿಗಳವರ ಸಲಹೆಯಂತೆ, ವಿರೂಪಾಕ್ಷಪ್ಪನಿಗೆ ಯಾವ ಶಿಕ್ಷೆಯನ್ನು ಕೊಡದೆ ಕೈಬಿಟ್ಟರಲ್ಲದೆ, ಅವನಿಗೆ ಹೊಲಮನೆಗಳನ್ನು ಕೊಟ್ಟು ಮದುವೆಗೆ ಹಣಕೊಟ್ಟು ಮಿಂಚೇರಿಯಲ್ಲಿ ಇರಲು ಅನುಕೂಲಮಾಡಿಕೊಟ್ಟರು. ಈ ವಿಷಯವನ್ನು ಗೌಡರು ಹೀಗೆ ಹೇಳಿಕೊಂಡಿದ್ದಾರೆ : "ನಮ್ಮ ತಂದೆಯವರಿಗೆ ಈ ಘಟನೆ ನಡೆದ ತರುವಾಯ ತಾತ, ಮೊಮ್ಮಗನನ್ನು ನೋಡಿಕೊಳ್ಳುವ, ದುಷ್ಟರ ಕೈಯಿಂದ ರಕ್ಷಿಸಿಕೊಳ್ಳುವ ಹೊಣೆ ಅತ್ಯಂತ ಭಾರವಾಗಿ ಪರಿಣಮಿಸಿತು. ಅಂದು ಗುಂಡು ಹಾರಿಸಿದ್ದು ಹುಸಿ ಹೋಗದಿದ್ದರೆ ನಾನಿಂದು ಏನಾಗುತ್ತಿದ್ದೆನೋ? ಇಂದು ಬರೆಯುತ್ತಿರುವ ನನ್ನ ಜೀವನದ ಗತಿಯೇ ಬೇರೆಯಾಗಿರುತ್ತಿತ್ತು' ಎಂದಿರುವ ಗೌಡರ ಮಾತಿನಿಂದ, ನಡೆದ ಪ್ರಸಂಗದ ಭೀಕರತೆಯ ಅರಿವಾಗದೆಯಿರದು. ಈ ಘಟನೆಯಿಂದಾಗಿ ಗೌಡರ ವೈವಾಹಿಕ ಬದುಕಿನ ಗತಿಯೇ ಬೇರೆಯಾಯಿತೆಂಬುದು ವಿಷಾದಕರ ಸಂಗತಿಯಾಗಿದೆ. ಮೊಮ್ಮಗನ ಕಲ್ಯಾಣವನ್ನೇ ಬಯಸಿದ ತಾತನ ಹಟದಿಂದ, ಗೌಡರ ಸಂಸಾರನೌಕೆ ಬಿರುಗಾಳಿಗೆ ಸಿಲುಕಿಕೊಂಡಂತಾಯಿತೆನ್ನುವದನ್ನು ನೋಡಬಹುದಾಗಿದೆ.

## ಗೌಡರ ಮೊದಲ ಮದುವೆ :

'ಮೊದಲ ತುತ್ತಿನಲ್ಲಿಯೆ ಕಲ್ಲು' ಎಂಬಂತೆ. ಗೌಡರ ವೈವಾಹಿಕ ಜೀವನದ ಆರಂಭವಾಗಿದೆ. ಗುಂಡಿನಿಂದ ಪಾರಾದ ಗೌಡರ ತಾತ, ಮೊಮ್ಮಗನ ಭವಿಷ್ಯತ್ತಿನ ಬದುಕಿನ ಬಗೆಗೆ ಭಯಗೊಂಡರು. ಗೌಡರ ಮದುವೆ ಮಾಡಿಬಿಡುವುದೆಂದು ನಿರ್ಧರಿಸಿದಾಗ, ದೂರದ ಹೆಣ್ಣನ್ನು ತಂದುಕೊಳ್ಳಲು ಸಂಶಯಗೊಂಡರು. ದುಷ್ಟರು ಮೊಮ್ಮಗನಿಗೆ ಆಸ್ತಿಯ ಆಸೆಗಾಗಿ ವಿಷವನ್ನುಣಿಸಿ ಕೊಲೆಮಾಡಬಹುದೆಂಬ ಭೀತಿಯೂ ಸೇರಿಕೊಂಡಿತ್ತು. ಕಾರಣ, ಮೊಮ್ಮಗನಿಗೆ ಆಸರೆಯಾಗಿ ನಿಲ್ಲಬಲ್ಲ ಈ ಸಂಶಯದಿಂದ ನಿರ್ಲಿಪ್ತರಾಗುಳಿಯಬಲ್ಲ ಕನ್ಯೆಯನ್ನು ತಂದುಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದರು. ಹೀಗಾಗಿ ಅದೇ ಊರಿನ ಪ್ರತಿಷ್ಠಿತ ಕುಟುಂಬದವರಾದ, ಚಿಲುಕರಾಯ ಹನುಮಂತಪ್ಪನವರ ಮೂರನೆಯ ಮಗಳು ಭೀಮಕ್ಕನನ್ನು ಗೌಡರಿಗೆ ತಂದುಕೊಳ್ಳುವುದೆಂದು ನಿಶ್ಚಯಿಸಿದರು. ಆಗ ಗೌಡರಿಗಿನ್ನೂ ಹದಿಹರೆಯ, ಅವರಿಗೇಕೊ ಈ ಸಂಬಂಧ ಬೇಡವಾಗಿತ್ತು. ಅಲ್ಲದೆ ಗೌಡರ ತಂದೆ ಮತ್ತು ಅಜ್ಜಿಯರಾದ ನಾಗಮ್ಮ - ಭೋಗಮ್ಮನವರಿಗೂ ಈ ಸಂಬಂಧ ಬೇಡವಾಗಿತ್ತು. ಆದರೆ ಸಂಶಯಕ್ಕೆ ಎಡೆಮಾಡುವ ಪರವೂರಿನ ಸಂಬಂಧಕ್ಕಿಂತ ಸ್ವಗ್ರಾಮದ ಸಂಬಂಧವೇ ಮೇಲೆಂದು, ಗೌಡರಿಗೆ ಏನೇನೊ ಸಮಜಾಯಿಷಿ ನೀಡಿ, ಒತ್ತಾಯದಿಂದ ಮದುವೆಗೆ ಒಪ್ಪಿಸಿದರು. ಹಿರಿಯರ ಆಸೆಯಂತೆ ಒಲ್ಲದ ವಧುವಿನೊಂದಿಗೆ ಗೌಡರ ಮೊದಲ ಮದುವೆ ನಡೆದು ಹೋಯಿತು.

ಎಷ್ಟಾದರೂ ಒಲ್ಲದ ಮದುವೆಯೆಂದಾಗ ಸಂಸಾರ ಸುಗಮವಾಗಿ ಸಾಗೀತೆ? ವಿರಸದೊಂದಿಗೆ ಗೌಡರ ಗೃಹಸ್ಥಾಶ್ರಮ ಪ್ರವೇಶವಾಯಿತು. ಈ ಮಾತನ್ನು ಗೌಡರು ಆತ್ಮ ಚರಿತ್ರೆಲ್ಲಿ ಹೀಗೆ ಹೇಳಿದ್ದಾರೆ: "ಇಷ್ಟವಿಲ್ಲದ ಸಂಸಾರ ನನ್ನ ಕೊರಳಿಗೆ ಸುತ್ತಿಕೊಂಡಿತು. ಹಿರಿಯರ ಆಸರೆಯಲ್ಲಿ ನಡೆದ (ಪಡೆದ) ನಮ್ಮ ದಾಂಪತ್ಯದ ವಿರಸದ ಬಾಳು ಹೊರಹೊಮ್ಮಿ ಜಗಳಾಟಕ್ಕಿಳಿಯದಿದ್ದರೂ ಒಳಗೊಳಗೇ ಅಯಿಷ್ಟದ ಅಗ್ನಿ ಕುಂಡ ಕುದಿಯುತ್ತಿತ್ತು. ಇಂತಹ

ಸ್ಥಿತಿಗೆ ಪ್ರಬಲ ಕಾರಣಗಳೇನೂ ಇರಲಿಲ್ಲ ನನ್ನ ಹೆಂಡತಿ, ಸಂಪ್ರದಾಯಸ್ಥರ ಮನೆಯಿಂದಲೇ ಬಂದಿದ್ದಳು. ಬಾಲ್ಯದಲ್ಲಿಯೇ ಕಷ್ಟದಲ್ಲಿ ಬೆಳೆದು ಬಂದದ್ದರಿಂದ ಹೆಣ್ಣಿನ ಸಹಜ ಕೋಮಲತೆಗಳಿಗೆ ದೂರಾಗಿ, ನಲ್ಮೆಯ ಸ್ಥಿತಿಗೆ ಪೋಷಕವಾಗಿರಲಿಲ್ಲ. ಪುರುಷಪ್ರಕೃತಿಯ ವರಟುತನಗಳು ಮೈಗೂಡಿದ್ದವು. ಸಾಧಾರಣ ಲಕ್ಷಣವಾಗಿ ಕಾಣುತ್ತಿದ್ದರೂ, ಮಾತನಾಡಿದರೆ ಬಿರುಸು, ಕೊಂಕು... ಗಂಡನ ಮೇಲಿನ ಅಭಿಮಾನಕ್ಕಿಂತ ತಂದೆ ಮೇಲಿನ ಅಭಿಮಾನವೇ ಹೆಚ್ಚೆಂದು ನಂಬಿದ ವರ್ತನೆಯು, ಸಂಸಾರದಲ್ಲಿ ಸರಳತೆ-ಸಮಾಧಾನ, ಪ್ರೀತಿಗಳನ್ನು ತಂದುಕೊಡಲಿಲ್ಲ. ಈ ಎಲ್ಲ ಗುಣಗಳು ಸಾಮಾನ್ಯವಾಗಿ ಹೊಸ ಸಂಸಾರಕ್ಕೆ ಕಾಲಿಕ್ಕುವ ಹೆಣ್ಣಿಗಿರುವುದು ಸಾಮಾನ್ಯವಾದುದಾದರೂ ಪ್ರೀತಿಯಿಂದ ಆ ಗುಣಗಳನ್ನು ತಿದ್ದಿಕೊಂಡು ತನ್ನ ಗುಣಾನುಸಾರ ನಡೆಯಿಸುವ ತಾಳ್ಮೆಯು ಆ ಏರುಂಜವ್ವನದಲ್ಲಿ ನನಗಿರಲಿಲ್ಲ. ನಾಟಕದ ವಿಲಾಸಕ್ಕೆ ಮೈಯೊಡ್ಡಿದ ನನಗದು ಬೇಕಿರಲಿಲ್ಲ ಇಷ್ಟವಿಲ್ಲದ ಅನಿಷ್ಟವನ್ನು ಗಂಟುಹಾಕಿದ ಹಿರಿಯರಲ್ಲಿಯೂ ನನಗೆ ಬೇಸರವಾಯಿತು. ನಮ್ಮ ತಾತ ಒಳಗೊಳಗೆ ಸಂಕಟಕ್ಕೀಡಾದ. ಇದ್ದೂರ ಬಾಂಧವ್ಯವು ಮೊದಲಿದ್ದ .ಸಿಹಿಯಿಂದ ಜಾರಿ ಕಹಿಯಾಗಿ ಮೇಲೇರಿತು..”... ಈ ಮಾತಿನಿಂದ ಒಲ್ಲದ ಹೆಂಡತಿಯೊಂದಿಗೆ ನಡೆಸಿದ ಗೌಡರ ವಿಷಮ ಸಂಸಾರದ ಚಿತ್ರ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ವಿಷಮತೆಗೆ ಗೌಡರ ನಾಟಕದ ವಿಲಾಸಿ ಜೀವನವೂ ಸಹಕಾರಿಯಾಗಿತ್ತೆಂಬುದನ್ನು ಮರೆಯುವಂತಿಲ್ಲ.

**ತಾತನ ಹಿರಿತನ :**

ಆಗರ್ಭ ಶ್ರೀಮಂತ, ಅವಿಭಕ್ತ ರೈತಕುಟುಂಬದ ಕುಡಿಯಾದದ್ದರಿಂದ ಗೌಡರಿಗೆ ಮನೆತನದ ಹೊಣೆಗಾರಿಕೆಗಳಾವವೂ ಇರಲಿಲ್ಲ ಕೃಷಿಕಾರ್ಯದ ಜವಾಬ್ದಾರಿಯನು ಗೌಡರ ಚಿಕ್ಕಪ್ಪ ರುದ್ರಗೌಡನ ಸಹಾಯದೊಂದಿಗೆ, ಗೌಡರ ತಂದೆ ಪಂಪನಗೌಡರು ಸಮರ್ಥವಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಊರ ಯಜಮಾನಿಕೆ, ಗೌಡಿಕೆ ಮನೆತನದ ಹಿರಿತನವನ್ನೆಲ್ಲಾ ಗೌಡರ ತಾತನೇ ನೋಡಿಕೊಳ್ಳುತ್ತಿದ್ದರಿಂದ, ಗೌಡರದೇ ಆದ ಯಾವ ಜವಾಬ್ದಾರಿಯೂ ಇರಲಿಲ್ಲ, ಹೀಗಾಗಿ ಸ್ವಚ್ಛಂದವಾಗಿ ಜೀವನ ನಡೆಸಬಹುದಾದ ಅವಕಾಶ ಅವರಿಗಿತ್ತು. ಆದರೆ ಉಂಡುಟ್ಟು ಸುಖವಾಗಿ ಕಾಲಕಳೆಯ ಬೇಕಾಗಿದ್ದ ಆ ಕಾಲದಲ್ಲಿ ಅವರು ಬದುಕಿನಲ್ಲಿ ವಿಷಮತೆಗೀಡಾದರು.

ಬಾಲ್ಯದಿಂದಲೇ ಮೈಗೂಡಿಕೊಂಡುಬಂದ ನಾಟಕದ ಹುಚ್ಚು ಯೌವ್ವನತ್ತ ಕಾಲಿರಿಸಿದಾಗ ಇನ್ನೂ ಆಕರ್ಷಕವಾಯಿತು. ನಾಟಕದ ವ್ಯಾಸಂಗ ನಡದೇಯಿತ್ತು. ದಾಂಪತ್ಯ ಸುಖ ಮಾತ್ರ ವಿರಸದತ್ತಲೇ ಸಾಗುತ್ತಿತ್ತು. ಮೊಮ್ಮಗನ ಈ ಬಗೆಯ ದಾಂಪತ್ಯ, ತಾತನಿಗೆ ದುಃಖವನ್ನುಂಟು ಮಾಡಿತ್ತು. ಕಾಲಗತಿಸಿದಂತೆ ಗೌಡರ ತಾತ ಹಾಸಿಗೆ ಹಿಡಿದರು. ಇಷ್ಟಾದರೂ ಒಂದುದಿನವೂ ಗೌಡರು ತಾತನ ಕುಶಲವನ್ನು ವಿಚಾರಿಸಲಿಲ್ಲ. ಒಂದೆಡೆ ಗೌಡರೇ ಹೇಳಿರುವಂತೆ, ಅಜ್ಜಿ ನಾಗಮ್ಮನವರ ವಾತ್ಸಲ್ಯಕ್ಕೆ ಮಣಿದು ಊಟದ ಶಾಸ್ತ್ರಕ್ಕೆ ಮಾತ್ರ ಮನೆಗೆ ಬರುತ್ತಿದ್ದ ಗೌಡರನ್ನು ಒಂದುದಿನ ಅವರ ತಾತ ಕರೆದು, ಪಕ್ಕದಲ್ಲಿ ಕೂಡಿಸಿಕೊಂಡು “ನಾನು ಲಗುವಿಲ್ಲದೆ ಮಲಗಿದರೂ ಮಾತನಾಡಿಸದಷ್ಟು ನಾಟಕದ ಹುಚ್ಚೆ? ನನಗಿಂತ ನಾಟಕವೇ ಹೆಚ್ಚೇನಪ್ಪಾ ನಿನಗೆ?' ಎಂದು ಕೇಳಿದರಂತೆ. ಆಗ

ಗೌಡರ ಮನಸಿನಲ್ಲಾದ ಪರಿವರ್ತನೆ ಅವರ ಮಾತಿನಲ್ಲೇ ಹೀಗೆ ವ್ಯಕ್ತವಾಗಿದೆ. ಆಗ ಯಾವ ಸಮಾಧಾನ ನೀಡದಷ್ಟು ತಪ್ಪು ಮಾಡಿರುವೆನೆಂಬ ಅರಿವಾಗಿ ಒತ್ತರಿಸಿ ಬಂದ ದುಃಖವನ್ನು ತಡೆಯಲಾರದೆ ಅತ್ತುಬಿಟ್ಟೆ ಆತನ ಮಮಕಾರ ವಾತ್ಸಲ್ಯಗಳೆಷ್ಟೋ ನನ್ನ ಅಜ್ಞಾನದ ಯೌವನದಲ್ಲಿ ಅರಿಕೆಯಾಗಿರಲಿಲ್ಲ.... "ಇಷ್ಟವಿಲ್ಲಂತ ಹೆಂಡತೀನ ಸೇರದಿದ್ದರೆ ಸಂಸಾರ ಹೆಂಗಾಗ್ತದಪ್ಪ' - ಎಂದು ಬುದ್ಧಿವಾದವನ್ನೂ ಹೇಳಿದಾಗ... ಇದೇ ಕೊರಗು ಅವರ ಬೇನೆಗೆ ಕಾರಣವಾಯಿತೆ ಎಂದು ಭಯಗೊಂಡೆ. ನನ್ನ ವರ್ತನೆಗಾಗಿ ತುಂಬಾ ನಿಂದಿಸಿಕೊಂಡೆ. ಅಲ್ಲಿಗೆ ನನ್ನ ನಾಟಕದ ಅಭ್ಯಾಸ ನಿಲ್ಲಿಸಿದೆ..." ಎಂದು ಹೇಳಿಕೊಂಡಿದ್ದಾರೆ. ಇದನ್ನು ಗಮನಿಸಿದಾಗ, ಅವರು ನಾಟಕದ ಬದುಕಿನ ದಿಶೆಯಲ್ಲಿ ಸಂಸಾರ ಜೀವನದಿಂದ ಎಷ್ಟೋ ದೂರ ಸರಿದು ಹೋಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಮುಂದೆ ಗೌಡರ ತಾತ 'ಕ್ಷಯ' ರೋಗದಿಂದಾಗಿ ತೀರಿಕೊಂಡಾಗ, ಗೌಡರಿಗಾದ ದುಃಖವನ್ನು ಶಬ್ದದಲ್ಲಿ ಹಿಡಿದಿಡಲು ಅಸಾಧ್ಯ. ಮನೆಯ ಮಂದಿಯ ಜೊತೆಗೆ ಆಳು, ಕಾಳು, ಊರಜನತೆ ಕಣ್ಣೀರಿಟ್ಟ ಘಟನೆಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ವಿವರವಾಗಿ ಬರೆದಿದ್ದಾರೆ.

**ಪಂಪನಗೌಡರ ಯಜಮಾನಿಕೆ :**

ತಾತ ಸಾಯುವ ಸೂಚನೆ ತಿಳಿದಾಗಲೆ, ಅವರ ಇಚ್ಛೆಯಂತೆ, ಗೌಡರ ತಂಗಿ ನೀಲಮ್ಮನನ್ನು ಬಾಪುರದ ಹಿರೇಗೌಡರಿಗೆ ಕೊಟ್ಟು ಮದುವೆ ಮಾಡಿದ್ದರು. ಇದಾವುದರ ಜವಾಬ್ದಾರಿಯು ಗೌಡರಿಗಿರಲಿಲ್ಲ ತಾತನ ಮರಣಾನಂತರ, ಗೌಡರ ತಂದೆ ಪಂಪನ ಗೌಡರು ಮನೆತನದ ಯಜಮಾನಿಕೆಯನ್ನು ನಿರ್ವಹಿಸಿಕೊಂಡು ಬಂದರು. ಅವರ ಕೃಷಿಕಾರ್ಯಕ್ಕೆ ಕಿರಿಯ ಸಹೋದರ ರುದ್ರಗೌಡರ ಸಂಸಾರ ಎಂದಿನಂತೆ ಸಹಕಾರಿಯಾಗಿ ಮುಂದುವರೆದುಕೊಂಡು ಬಂದಿತ್ತು. ಆದರೆ ಸಣ್ಣ ಹೊನ್ನನಗೌಡರ ಮರಣಾನಂತರ, ಅವರ ಕಿರಿಯ ಪತ್ನಿ ರುದ್ರಮ್ಮ ಆಸ್ತಿಗಾಗಿ ವ್ಯಾಜ್ಯ ಹೂಡಿದಳು. ಪಂಪನಗೌಡರು ತಮ್ಮ ಮಾವ ಬದುಕಿದ್ದಾಗಲೆ ತಿಳಿಸಿದ ಪ್ರಕಾರ, ರುದ್ರಮ್ಮನಿಗೆ ಆಸ್ತಿಯಲ್ಲಿ ಪಾಲುಕೊಟ್ಟು ಅವಳ ತವರಿಗೆ ಕಳುಹಿಸಿಕೊಟ್ಟರು. ಈಗ ಗೌಡರ ಕುಟುಂಬದ ಸದಸ್ಯರೆಂದರೆ, ಗೌಡರು-ಅಜ್ಜಿ ನಾಗಮ್ಮ-ಭೋಗಮ್ಮ ತಂದೆ ಪಂಪನಗೌಡರು, ಪತ್ನಿ ಭೀಮಕ್ಕ ಗೌಡರ ಚಿಕ್ಕಪ್ಪನ ಸಂಸಾರವಂತೂ ಸರಿಯೆ. ಹೀಗೆ ಗೌಡರ ಬದುಕು ತಂದೆಯವರ ಸಮರ್ಥ ಯಜಮಾನಿಕೆಯಿಂದಾಗಿ ಒಂದು ಹಂತಕ್ಕೆ ಬಂದು ನಿಂತಿತಾದರೂ, ಅವರ ದಾಂಪತ್ಯ ಜೀವನದಲ್ಲಿ ಯಾವ ಬದಲಾವಣೆಗಳೂ ಆಗದೇಯಿದ್ದುದು ಒಂದು ದುರಂತ. ಸಾಲದೆಂಬುದಕ್ಕೆ ತಂದೆಗೆ ಸಹಾಯಕ್ಕೆ ನಿಲ್ಲದೆ, ನಾಟಕಕ್ಕೆ ಅಂಟಿಕೊಂಡ ಮಗನ ನಡುವಳಿಕೆ ಪಂಪನಗೌಡರನ್ನು ಬಹಳಷ್ಟು ನೋಯಿಸಿತ್ತು. ಯಾರು ಯಾರೋ ಆಸ್ತಿಗಾಗಿ ಬಡಿದಾಡಿ ಕಚ್ಚಾಡುತ್ತಿದ್ದಾಗ, ನೇರವಾಗಿ ಆ ಆಸ್ತಿಗೆ ಸಂಬಂಧಪಟ್ಟ ಮಗ ಯಾವ ಕಾಳಜಿಯನ್ನೂ ವಹಿಸದೆ, ಬಣ್ಣದ ಬದುಕಿಗೆ ಇಳಿದುದು ಪಂಪನಗೌಡರ ಮನಸ್ತಾಪಕ್ಕೆ ಕಾರಣವಾದುದು ಸಹಜವೇ ಆಗಿದೆ. ಏಕೆಂದರೆ ಪಂಪನಗೌಡರು ಬಡತನದ ಬಾಳುವೆಯ ಕಷ್ಟ ನಿಷ್ಟುರಗಳನ್ನು ಅನುಭವಿಸಿದವರು. ಹೀಗಾಗಿ ಮಗನ ನಾಟಕದ ಗೀಳು ಅವರನ್ನು ಚಿಂತೆಗೀಡುಮಾಡಿದ್ದು ಸ್ವಾಭಾವಿಕವಾದುದಾಗಿದೆ.

## ಗೌಡರ ಪತ್ನಿಯ ಮರಣ :

ಹೀಗಿರುವಲ್ಲಿ ದೊಡ್ಡನಗೌಡರು ಮನೆಯಲ್ಲಿ ಪತ್ನಿಯ ಜೊತೆಗೆ ಒಳ್ಳೆಯ ಸಂಬಂಧವಿಟ್ಟುಕೊಂಡು, ನಾಟಕದ ಜೀವನವನ್ನು ಮುಂದುವರೆಸಿಕೊಂಡು ಹೋಗಿದ್ದರೆ ಅದೊಂದು ರೀತಿ ಬೇರೆಯೇ ಆಗಿರುತ್ತಿತ್ತು. ದಿನಗಳು ಕಳೆದಂತೆ, ನಾಟಕದಲ್ಲಿ ಪುರುಷರೇ ವಹಿಸುತ್ತಿದ್ದ 'ಸ್ತ್ರೀ' ಪಾತ್ರಕ್ಕೆ ಪುರುಷರ ಬದಲಾಗಿ 'ಸ್ತ್ರೀ' (ನಟಿ)ಯನ್ನೇ ಕರೆತರುವುದೆಂದು ನಿರ್ಣಯಿಸಲಾಯಿತು. ಆ ನಿರ್ಣಯದ ಫಲವಾಗಿ 'ಲಕ್ಷ್ಮಿ' ಎಂಬ ನಟಿಯೋರ್ವಳು ಜೋಳದರಾಶಿಗೆ ಬಂದು 'ಕ್ಯಾಂಪ್' ಮಾಡಿದಳು. ನಾಟಕದ ವ್ಯಾಸಂಗ ಮುಂದುವರೆಯಿತು. ನಾಟಕದ ನಾಯಕ ಪಾತ್ರ ಗೌಡರದಾದರೆ, ನಾಯಕಿಯ ಪಾತ್ರ ಲಕ್ಷ್ಮಿಯದು, ನಾಟಕದ ಶೃಂಗಾರಮಯ ಸನ್ನಿವೇಶಗಳು, ಗೌಡರ ನಿಜಜೀವನದ ಮೇಲೆ ಪರಿಣಾಮ ಬೀರತೊಡಗಿದವು. ಹುಡುಗ ವಯಸ್ಸು, ಶ್ರೀಮಂತಿಕೆ, ರೂಪವಂತರು ಅಂದಮೇಲೆ ಕೇಳುವುದಿನ್ನೇನು? ಗೌಡರ ಆಗಿನ ರೂಪವನ್ನು ಅವರ ಸ್ನೇಹಿತ. ಶ್ರೀ ಶಿವ, ಚೆನ್ನಬಸವೇಶ್ವರರು ಒಂದೆಡೆ ಮಾರ್ಮಿಕವಾಗಿ ಬಣ್ಣಿಸಿದ್ದಾರೆ: "ಅಭಿನಯದಲ್ಲಿ ಸೂಕ್ಷ್ಮತಾ ಸೂಕ್ಷ್ಮಭಾವಗಳನ್ನು ಬಿಂಬಿಸಲು ಅನುವಾದ ಗಂಭೀರಮುಖ, ಧೀರೋದಾತ್ತ ಪಾತ್ರಗಳ ಅಭಿನಯಕ್ಕಾಗಿಯೇ ಮಾಡಿಟ್ಟಂತಿರುವ ಮೈಕಟ್ಟು ಎಷ್ಟು ಹಾಡಿದರೂ, ಯಾವಾಗ ಹಾಡಿದರೂ ಕುಗ್ಗದ ಜಗ್ಗದ ಮಧುರವಾದ, ಗಂಭೀರವಾದ ಕಂಠಶ್ರೀ, ಕಲೆಯ ಔನ್ನತ್ಯವನ್ನೂ ಅಭಿನಯದ ಆಳವನ್ನು ಅರಿತ ತೇಜಪುಂಜವಾದ ಕಣ್ಣುಗಳು, ಸದಾತುಟಿಗಳ ಮೇಲೆ ಒನಪು ಒಯ್ಯಾರಗಳಿಂದ ಕುಣಿಯುವ ತುಂಟುನಗೆ, ಶುಕ್ರಚುಂಚುವಿನಂತೆ ನಸುಬಾಗಿದ ನಾಸಾಪುಟ, ಯಾವಾಗಲು ಅಸ್ತವ್ಯಸ್ತವಾಗದಂತೆ ತಿದ್ದಿತೀಡಿ ಬಾಚಿದ ಕೇಶರಾಶಿ, ಶರೀರ ಸೌಷ್ಟದ ಶಾರೀರ ಗಾಂಭೀರ್ಯಗಳು, ಗೌಡರನ್ನು ಎಲ್ಲಿದ್ದರೂ ಎತ್ತಿ ತೋರುತ್ತವೆ. ಒಮ್ಮೆ ನೋಡಿದರೆ ಸಾಕು, ಕಣ್ಣಿಗೆ ಕಟ್ಟಿಬಿಡುವ ವ್ಯಕ್ತಿತ್ವ, ಒಮ್ಮೆ ಕೇಳಿದರೆ ಸಾಕು ಆ ನಾದ ಮಾಧುರ್ಯದಲ್ಲಿ ಮನ ಮಗ್ನಗೊಳಿಸುವ ಹಾಡುಗಾರಿಕೆ ಗೌಡರದು" - ಎನ್ನುವ ಮಾತಿನಿಂದ ಗೌಡರ ಯೌವನದ ಭಾವಚಿತ್ರ ಸ್ಪಷ್ಟವಾಗಿ ಗೋಚರವಾಗುತ್ತದೆ. ಇಂತಹ ಯೌವನದಲ್ಲಿ, ಅಡಿ-ಹಾಡಿನಲಿಯಲು 'ನಟಿ' ಯ ಸಹಯೋಗವೂ ಬೆರೆತಾಗ ಇನ್ನೇನಾಗಬೇಕು? ಇದರಿಂದಾಗಿ ಪತ್ನಿಯೊಂದಿಗಿನ ಸಂಬಂಧ ಮತ್ತಷ್ಟು ಬಿಗಡಾಯಿಸುವಂತಾಯಿತು. ಇಂತಹ ಪ್ರಸಂಗದಲ್ಲೂ ಮಗನಿಗೆ ಏನನ್ನೂ ಹೇಳದ ಅಸಹಾಯಕಸ್ಥಿತಿ ಪಂಪನಗೌಡರದಾಗಿತ್ತು. ಒಬ್ಬನೆ ಮಗ, ಏನಾದರೂ ಅಂದರೆ ಮನಸ್ಸಿಗೆ ಹಚ್ಚಿಕೊಂಡು ಎಲ್ಲಿಗಾದರೂ ಹೋಗಿಬಿಟ್ಟರೆ! ಇನ್ನೇನೋ ಆಗಿಬಿಟ್ಟರೆ? ಎಂಬ ಭಯ ಗೌಡರ ತಂದೆಯನ್ನು ಕಾಡತೊಡಗಿತು. ಆದರೆ ಅವರಿಗೆ ಯಾವ ಪರಿಹಾರೋಪಾಯಗಳೂ ಹೊಳೆಯಲಿಲ್ಲ.

ಗೌಡರ ಈ ರೀತಿಯ ವರ್ತನೆಯಿಂದಾಗಿ, ಅವರ ಪತ್ನಿ ಒಳಗೊಳಗೆ ಕೊರಗ ತೊಡಗಿದರು. ಮಾವನ ಮನೆಯವರು ಕೂಡ, ಮಗಳ ಸಂಸಾರದ ವಿಷಮತೆ ಮತ್ತು ಗೌಡರ ವರ್ತನೆಗಳನ್ನು ಕಂಡು ಕಳವಳಗೊಂಡರು. ದಿನಗಳು ಕಳೆದಂತೆ ಭೀಮಕ್ಕ ರೋಗಗ್ರಸ್ತಳಾದಳು. ದಿನದಿನಕ್ಕೆ ಕೃಶಳಾಗುತ್ತಿದ್ದ ಮಗಳನ್ನು ತವರಿನವರು, ತಮ್ಮ ಮನೆಗೆ ಕರೆದುಕೊಂಡುಹೋಗಿ ಔಷಧೋಪಚಾರ ಮಾಡಿಸತೊಡಗಿದರು. ಆದರೆ ಅದಾವುದೂ ಪರಿಣಾಮಬೀರಲಿಲ್ಲ ತಾಯಿ-ತಂದೆಯ ಪ್ರೀತಿವಾತ್ಸಲ್ಯಗಳಲ್ಲಿ ಸುಖವಾಗಿ ಬೆಳೆದು, ಹರೆಯದ ಬಾಗಿಲಲ್ಲಿ ಕಾಲಿಡುತ್ತಿರುವಾಗಲೆ, ಅದೇ

ಊರಿನ ಶ್ರೀಮಂತ ಸುಂದರ ಯುವಕನ ಕೈಹಿಡಿದು, ಯಾವ ಸುಖವನ್ನೂ ಕಾಣದೆ ರೋಗಗ್ರಸ್ತಳಾದ ಭೀಮಕ್ಕ ಈ ಲೋಕದ ವ್ಯವಹಾರಗಳೇ ತನಗೆ ಸಂಬಂಧವಿಲ್ಲವೆಂಬಂತೆ ಕಣ್ಣು ಮುಚ್ಚಿದಳು. ಮಗನ ವರ್ತನೆಯಿಂದಾಗಿಯೆ ಸೊಸೆ ಸಾವನ್ನಪ್ಪಿದಳು ಎನ್ನುವ ಹಿರಿಯರು, ಅಳಿಯನ ದುರ್ನಡತೆಯಿಂದಲೆ ಮಗಳು ಸಾವಿಗೀಡಾದಳೆಂದು ರೋಧಿಸುವ ಬೀಗರು, ಇವರಿಬ್ಬರ ಮಧ್ಯೆ ಸಿಲುಕಿದ ಗೌಡರ ಸ್ಥಿತಿ ಏನಾಗಿರಬೇಡ? "ನೀನೆ ತಪ್ಪಿತಸ್ಥ ಎಂದು ನೋಡುವವರೆಲ್ಲ ಬೆರಳು ಮಾಡಿ ತೋರಿಸುವಂತೆ ಅವರಿಗೆ ಭಾಸವಾಗತೊಡಗಿತ್ತು. ಪ್ರಸಂಗ ಬಿಗಡಾಯಿಸಿದ ಮೇಲೆ ಗೌಡರಿಗೆ ವಿವೇಕ ಮೂಡಿತ್ತು. ಆದರೆ ಅದರಿಂದ ಯಾವ ಪ್ರಯೋಜನವೂ ಇರಲಿಲ್ಲ ತಮ್ಮ ಅಂದಿನ ಸಂದಿಗ್ಧ ಸ್ಥಿತಿಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ಮನಮಿಡಿಯುವಂತೆ ಹೇಳಿಕೊಂಡಿದ್ದಾರೆ. "ನನ್ನ ಕುಟುಂಬಕ್ಕೆ (ಭೀಮಕ್ಕನಿಗೆ) ಖಾಯಿಲೆಯಾಗಿ ಇಲ್ಲಿರಲು ಇಷ್ಟವಿಲ್ಲದೆ ತೌರುಮನೆ ಸೇರಿದಳು. ಆಗ ನಾನು ಆಕೆಯ ಔಷಧೋಪಚಾರಕ್ಕಾಗಿ ತಕ್ಕ ವ್ಯವಸ್ಥೆ ಮಾಡಿ ಆರೋಗ್ಯವನ್ನು ಕಾಪಾಡಿಕೊಳ್ಳುವ ಪ್ರಯತ್ನ ಮಾಡಿದೆ. ಬಹುದಿನಗಳಿಂದ ನನ್ನ ಉದಾಸೀನತೆಯ ಕಹಿಯಿಂದ ನನ್ನ ಗೌಡತಿ ನನ್ನಲ್ಲಿ ವಿಶ್ವಾಸವಿರಿಸಲಿಲ್ಲ ಈ ಸಮಯಕ್ಕೆ ನನ್ನಲ್ಲಿ ಪರಿವರ್ತನೆಯಾಗಿ, ನಡೆದುಹೋದುದಕ್ಕೆ ವಿಷಾದಗೊಂಡು ಈಗಾದರೂ ತಿದ್ದಿಕೊಳ್ಳುವ ಎಂದು ಸಮೀಪಕ್ಕೆ ಹೋದಾಗ, ಆಕೆಯು ನನ್ನಿಂದ ಬಹುದೂರ ಹೋಗಿದ್ದಳು. ನನ್ನ ನಾಟಕದ ಅಮಲಿನಲ್ಲಿ ನನಗೆ ತಿಳಿದಿರಲಿಲ್ಲ ಮಕ್ಕಳಾಗಲಿಲ್ಲವೆಂಬ ನೆಪದಿಂದ ಎರಡನೇ ವಿವಾಹವನ್ನು ಮಾಡಿಕೊಳ್ಳುವ ಒತ್ತಾಯ ಹಿರಿಯರಿಂದ ಬಂದಿದ್ದರೂ ನಾನದಕ್ಕೆ ಮಣಿದಿರಲಿಲ್ಲ. ನನ್ನ ಕಲೆಯ ಉದ್ವೇಗವು ಹೆಚ್ಚು ಸಂಸಾರದ ಕಡೆ ಲಕ್ಷ್ಯವನ್ನು ನೀಡಲಿಲ್ಲ ಕೃಶವಾದ ಅಂಗಾಂಗಗಳು, ಕುಗ್ಗಿದ ದನಿಯು, ಗೌಡತಿಯ ಬಗ್ಗೆ ಬಹುದುಃಖವಾಯಿತು. ಆಕೆಯ ತಂದೆ-ಅಣ್ಣಂದಿರು ನನ್ನ ವರ್ತನೆಗಾಗಿ ಅಸಮಾಧಾನಗೊಂಡಿದ್ದರು. ದಿನದಿನಕ್ಕೆ ಬೆಳೆಯುತ್ತಿದ್ದ ಬೇನೆಯು ಹಿಂದಾದ ನನ್ನ ಅನಾದರಣೀಯ ಘೋರಾಪರಾಧವನ್ನು ಎತ್ತಿ ತೋರಿಸುತ್ತಿತ್ತು. ಆಕೆಯಲ್ಲಿ ಒಳ್ಳೆಯ ವರ್ತನೆಯಿಂದ ನಡೆಯದೆ ಇದ್ದ ನನ್ನ ಇಂದಿನ ವರ್ತನೆ ಮಾತು ಪಶ್ಚಾತ್ತಾಪದಿಂದ ಕೂಡಿದ್ದರೂ ಆ ಬೇನೆಯಲ್ಲಿ ಆಕೆಯು ನಂಬುವಂತಿರಲಿಲ್ಲ ನನ್ನಷ್ಟಕ್ಕೆ ನಾನು ಮನೋವ್ಯಾಧಿಯಿಂದ ಬಳಲುತ್ತಿರುವಾಗ, ಆಕೆಯ ದೇಹವು ಮನಸ್ಸು ನೊಂದುಬೆಂದು ಕೊನೆಗೆ ಮೀಟುರೋಗವಾಗಿ ಪರಿಣಮಿಸಿತು. ನಾನು ಗಾಬರಿಯಾದೆ. ನನ್ನ ಸ್ಥಿತಿಯು. ಅಡಕತ್ತಿನ ಅಡಕೆಯಂತಾಯಿತು. ಈ ಕಡೆ ನಮ್ಮವರು ಬೈಯ್ಯುತ್ತಿದ್ದರು. ಆ ಕಡೆ ಆಕೆಯವರು ತಿರಸ್ಕಾರದಿಂದ ನೋಡುತ್ತಿದ್ದರು. ಕೈಮೀರಿ ಹೋದ ಬೇನೆಯಿಂದ ಬಳಲುತ್ತಿದ್ದ ಗೌಡತಿಯ ಪಕ್ಕದಲ್ಲಿ ಕೂತು ಸಂತೈಸುವ ಭಾಗ್ಯವೂ ನನಗಿರಲಿಲ್ಲ, ಮಾತುಗಳು ಬಿದ್ದುಹೋದವು ಆಕೆಯ ಆಸೆಯೂ ಮುಗಿದುಹೋಯಿತು. ಮೂರು ನಾಲ್ಕು ದಿನಗಳು ಮಾತುಗಳಿಲ್ಲದೆ ವಾಯುರೋಗದಿಂದ ಬಳಲಿ ಕೊನೆಗೆ ಕಣ್ಣುಮುಚ್ಚಿದಳು. ನನ್ನ ಜೀವನದ ಸಂಸಾರದ ಘಟ್ಟವೊಂದು ಈ ರೀತಿಯಾಗಿ ನನ್ನ ಹುಡುಗಾಟದ ಉದಾಸೀನದಿಂದ ವಿಷಾದ ಘಟ್ಟವಾಗಿ ಪರಿಣಾಮಗೊಂಡಿತು" ಎಂದು ಗೌಡರು ಬಿಚ್ಚು ಮನಸ್ಸಿನಿಂದ ಹೇಳಿಕೊಂಡಿದ್ದಾರೆ.

**ಗೌಡರ ಎರಡನೆಯ ಮದುವೆ :**

ಈ ದುರಂತ ಘಟನೆಯು ನಡೆದ ಕೆಲವು ದಿನಗಳ ನಂತರ ಹಿರಿಯರು ಗೌಡರಿಗೆ ಎರಡನೆ ಮದುವೆ ಮಾಡುವ ವಿಚಾರ ಮಾಡತೊಡಗಿದರು. ಇದಾವುದೂ ತಮಗೆ ಸಂಬಂಧವೇ ಇಲ್ಲವೆನ್ನುವಂತೆ ಗೌಡರು ನಿರ್ಲಿಪ್ತರಾಗಿಬಿಟ್ಟರು. ನಾಟಕದ ಬದುಕಿನಲ್ಲಿ 'ಪಾರ್ವತಿ' ಎನ್ನುವ ಹೊಸನಾಯಕಿಯ ಪ್ರವೇಶವಾಗಿತ್ತು. ಮನೆಯ ಹಿರಿಯರು ಮಾತ್ರ ಒಳೆಯ ಮನೆತನದ ಕನ್ಯೆಯನ್ನೆ ತಂದುಕೊಳ್ಳಬೇಕೆಂದು ವಿಚಾರಿಸಿ, ಕೊನೆಗೆ ತಿಮ್ಮಲಾಪುರದ ಮರಿಬಸವನಗೌಡರ ಹಿರಿಯಮಗಳು 'ಹನುಮಕ್ಕನನ್ನು ತಂದುಕೊಳ್ಳುವುದೆಂದು ತೀರ್ಮಾನಿಸಿದರು. ಹಿರಿಯರ ತೀರ್ಮಾನದಂತೆ, ಕನ್ಯೆಯ ಸ್ವಗ್ರಾಮ ತಿಮ್ಮಲಾಪುರ(ತಿಮ್ಮಾಪುರ)ದಲ್ಲಿ ದಿ: ೧೧.೨.೧೯೩೫ರ ಗುರುವಾರ ಉದಯ ಘ|| ೧೦.೧೪ರಿಂದ ೨.೬ರವರೆವಿಗಿನ ಪುಷ್ಕರಾಂಶಯುಕ್ತ ವೃಷಭಲಗ್ನದಲ್ಲಿ ವಿವಾಹ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಹೀಗೆ ಹನುಮಕ್ಕನವರು ಹನುಮಕ್ಕಗೌಡತಿಯಾಗಿ ಗೌಡರ ಮನ-ಮನೆ ಪ್ರವೇಶ ಮಾಡಿದರು. ಆಗ ಗೌಡರಿಗೆ ಇಪ್ಪತ್ತೈದರ ಪ್ರಾಯ. ಮೊದಲ ಪತ್ನಿಯೊಂದಿಗೆ ನಡೆದ ದುರಂತವನ್ನು ನೆನಪಿನಲ್ಲಿಟ್ಟುಕೊಂಡು, ಬಹುಜಾಗ್ರತೆಯಿಂದ ಜೀವನ ಸಾಗಿಸುವುದೆಂದು ತೀರ್ಮಾನಿಸಿಕೊಂಡಿದ್ದರು. ಹನುಮಕ್ಕಗೌಡತಿಯವರ ಸ್ವಭಾವವು ಹೊಂದಾಣಿಕೆಯ ಸ್ವಭಾವವಾದುದರಿಂದ, ಗೌಡರ ವೈವಾಹಿಕ ಜೀವನ ಸುಖವಾಗಿಯೆ ಸಾಗಿತೆಂದು ಹೇಳಬಹುದು. ಇದರಿಂದಾಗಿ ಮನೆಯ ಹಿರಿಯರಿಗೂ ನೆಮ್ಮದಿ ದೊರೆತಂತಾಯಿತು. ಗೌಡರ ನಾಟಕದ ಖಯಾಲಿ ಮತ್ತೆ ಯಥಾಸ್ಥಿತಿ ಮುಂದುವರಿಯಿತು.

## ಗೌಡರ ಅಜ್ಜಿ ಮತ್ತು ತಂದೆಯ ಮರಣ :

ಬಾಲ್ಯದಲ್ಲಿಯೆ ತಾಯಿಯನ್ನು ಕಳೆದುಕೊಂಡು ಅನಾಥರಾದ ಗೌಡರನ್ನು ಸಾಕಿ ಸಲುಹಿದ ಅಜ್ಜಿ ಭೋಗಮ್ಮ(ತಾಯಿಯ ತಾಯಿ)ನವರು ತಮ್ಮ ೭೦ನೆಯ ವಯಸ್ಸಿನಲ್ಲಿ ಮರಣವನ್ನಪ್ಪಿದರು. ತಾತನ ತರುವಾಯ ೧೬ ವರುಷಗಳವರೆಗೆ ಮನೆತನದ ಘನತೆ ಗೌರವಗಳಿಗೆ ಕುಂದುಬರದಂತೆ, ಆಸ್ತಿಪಾಸ್ತಿಗಳನ್ನು ಉಳಿಸಿಕೊಂಡು ಬಂದು, ಮಗನ ಕಲ್ಯಾಣವನ್ನೇ ಬಯಸಿದ ಗೌಡರ ತಂದೆ ಪಂಪನಗೌಡರು ಅಸ್ತಮಾರೋಗದಿಂದ ಬಳಲಿ ೧೯೫೨ರ ಮೇ ತಿಂಗಳಿನಲ್ಲಿ ಲಿಂಗೈಕ್ಯರಾದರು. ಗೌಡರ ತಂದೆ ಬಡವರಾಗಿ ಹುಟ್ಟಿ ಬರಗಾಲದಲ್ಲಿ ರೋಡಿಗೆ ಕಲ್ಲು-ಮಣ್ಣು ಹೊತ್ತು ಬಾಳಿದವರೆಂದು ಗೌಡರೇ ಹೇಳಿಕೊಂಡಿದ್ದಾರೆ. ಮಾವನ ತರುವಾಯ, ತಮಗೆ ಬಂದ ದೊಡ್ಡ 'ಜಮೀನದಾರಿಕೆ'ಯ ಮೋಹಕ್ಕೆ ಒಳಗಾದವರಲ್ಲ ಕಷ್ಟಪಟ್ಟು ದುಡಿದು ಹಿರಿಯರ ಘನತೆಯನ್ನು ಉಳಿಸಿ ಕೊಂಡು ಬಂದಿದ್ದರು. ತಂದೆಯವರು ಕಣ್ಮುಚ್ಚಿದಾಗ ಗೌಡರಿಗೆ ೪೨ ವರುಷಗಳು. ಬಾಲ್ಯದಲ್ಲಿ ತಾತನ ಹಿರಿತನ, ಯೌವನದಲ್ಲಿ ತಂದೆಯ ಹಿರಿತನದಲ್ಲಿ ಹಕ್ಕಿಯಂತೆ ಹಾರಾಡಿ ಕಾಲ ಕಳೆದ ಗೌಡರಿಗೆ ಕಿಂಚಿತ್ತೂ ಮನೆತನದ ಜವಾಬ್ದಾರಿಯಿರಲಿಲ್ಲ. ಈಗ ಅನಿವಾರ್ಯವಾಗಿ ಆ ಭಾರವನ್ನು ಅವರೇ ಹೊರಬೇಕಾಗಿ ಬಂತು.

ತಂದೆಯವರು ತೀರಿಹೋದ ಒಂದುವರೆ ವರುಷದಲ್ಲಿಯೆ, ಅಂದರೆ ೬-೧೦-೫೩ರಂದು ಗೌಡರನ್ನು ಸಾಕಿಸಲುಹಿದ ಅಜ್ಜಿ ನಾಗಮ್ಮನವರೂ ತೀರಿಹೋದರು. ತಾಯಿಯಿಲ್ಲದ ಮಗು ಗೌಡರಿಗೆ ತಾಯಿಯಿಲ್ಲವೆಂಬ ಕೊರತೆಯಾಗದಂತೆ ನಾಗಮ್ಮನವರು ಜೋಪಾನ ಮಾಡಿದವರು. ಆಕೆಗೆ ಗೌಡರ ಮನೆತನದಲ್ಲಿ

ರಕ್ತಸಂಬಂಧಿಗಳಾರೂ ಇರಲಿಲ್ಲ, ಎಲ್ಲರೂ ಗಂಡನಕಡೆಯ ಬಳಗದವರು. ಇಲ್ಲಿ ನಾಗಮ್ಮನವರ ಉದಾರತೆ, ತ್ಯಾಗವೆಷ್ಟೆಂಬುದನ್ನು ಮನಗಾಣಬೇಕು. ಇಲ್ಲಿಗೆ ನನ್ನ ಕುಟುಂಬದ ಹಿರಿಯರೂ ನನ್ನನ್ನು ಸಾಕಿ ಸಲುಹಿದ ಪ್ರೇಮಮೂರ್ತಿಗಳೆಲ್ಲಾ ನನ್ನೊಬ್ಬನನ್ನಾಗಿಸಿ ಎಲ್ಲರೂ ತಮ್ಮ ದಾರಿ ಹಿಡಿದುಹೋದರು. ಮನೆಯು ಬರಿದಾಯಿತು, ಮನವೂ ಬರಿದಾಯಿತು. ಹಡೆದವರಿಗಿಲ್ಲದ ವಾತ್ಸಲ್ಯ ಮಮತೆಗಳಿಂದ ಬೆಳೆಸಿಕೊಂಡುಬಂದ ಅವ್ವನು (ಅಜ್ಜಿ) ಆಕೆಯ ಸರ್ವಸ್ವವೂ ನಾನೇ ಎಂದು ಹಂಬಲಿಸುತ್ತಿದ್ದ ಅವ್ವನು (ಅಜ್ಜಿ) ಹೇಗೆ ಹೋದಳು?" ಎಂದು ಗೌಡರು ನಿಟ್ಟುಸಿರಿಟ್ಟಿದ್ದಾರೆ.

## ಮಕ್ಕಳಿಲ್ಲದ ದಾಂಪತ್ಯ :

ಗೌಡರ ಮನೆತನಕ್ಕೆ ಸರ್ವಸೌಭಾಗ್ಯಗಳಿದ್ದರೂ, ಸಂತಾನ ಭಾಗ್ಯದ ಕೊರತೆ ಎಂದಿನಿಂದಲೂ ಇದ್ದೇ ಇದೆ. ಇಬ್ಬರು ತಾತಂದಿರು ಒಬ್ಬೊಬ್ಬರಿಗೆ ಇಬ್ಬರಂತೆ, ನಾಲ್ಕು ಜನ ಹೆಂಡರವರಿಗೆ, ಅವರಲ್ಲಿ ಭೋಗಮ್ಮನವರು ಮಾತ್ರ 'ರುದ್ರಮ್ಮ' (ಗೌಡರ ತಾಯಿ) ನೆಂಬ ಮಗುವನ್ನು ಪಡೆದರು. ವಂಶದ ಕುಡಿಯಾದ ರುದ್ರಮ್ಮನವರ ಮಕ್ಕಳೇ ದೊಡ್ಡನಗೌಡ ಮತ್ತು ನೀಲಮ್ಮ ಗೌಡರ ತಂಗಿ ನೀಲಮ್ಮನನ್ನು ಬಾಪುರಕ್ಕೆ ಕೊಟ್ಟು ಮದುವೆ ಮಾಡಿತ್ತೆಂಬುದನ್ನು ಈ ಮೊದಲೆ ನೋಡಿದ್ದೇವೆ. ಹೊನ್ನನಗೌಡರ ವಂಶಾಭಿವೃದ್ಧಿಯ ಏಕೈಕ ಕುಡಿ. 'ದೊಡ್ಡನಗೌಡ'ರಿಗೂ ಮಕ್ಕಳಾಗಲಿಲ್ಲ ಜೋತಿಷ್ಯ, ಆಯುರ್ವೇದ ವೈದ್ಯ, ದೇವರು ದಿಂಡರು ಮುಂತಾದ ಪ್ರಯತ್ನಗಳೆಲ್ಲವೂ ಮುಗಿದಿದ್ದವು. ಈ ಮಧ್ಯೆ ಗೌಡರ ತಿಮ್ಮಾಪುರದ ಮಾವ ತನ್ನ ಎರಡನೆ ಮಗಳನ್ನು ಕೊಟ್ಟು ಗೌಡರಿಗೆ ಮೂರನೆ ಮದುವೆ ಮಾಡಿಕೊಡುವುದಾಗಿ ಮುಂದಾದರು. ಆದರೆ ಗೌಡರು ಇದಕ್ಕೆ ಸಮ್ಮತಿಸಲಿಲ್ಲ ಹನುಮಕ್ಕಗೌಡತಿಯವರ ನಿರ್ಮಲ ಪ್ರೇಮಮಯ ಬದುಕಿನಲ್ಲಿ ಅವರು ಯಾವ ಕೊರತೆಯನ್ನೂ ಕಾಣಲಿಲ್ಲ ಮಕ್ಕಳಿಗಾಗಿಯೆ ಮತ್ತೊಂದು ಮದುವೆಯಾಗುವುದನ್ನು ಅವರು ಇಷ್ಟಪಡಲಿಲ್ಲ, ಹೀಗಾಗಿ ಸಂತಾನವಿಲ್ಲದ ಮನೆತನಕ್ಕೆ ಸಂಬಂಧಿಕರೇ ಸಂತಾನವಾಗಿ ಸುತ್ತಿಕೊಂಡಂತಾಗಿತ್ತು. ಅದಕ್ಕೆ ಗೌಡರೇ ಕೇಂದ್ರ ವ್ಯಕ್ತಿಯಾಗಿ ನಿಂತುಕೊಂಡಂತಾಗಿತ್ತು.

ಅಪಾರ ಆಸ್ತಿಗೆ ಒಡೆಯರಾದ ಗೌಡರಿಗಂತೂ ಮಕ್ಕಳಿರಲಿಲ್ಲ. ಆ ಚಿಂತೆಯೂ ಅವರಿಗಿರಲಿಲ್ಲ ಆದರೆ ತಾವು ರಚಿಸಿದ ಸಾಹಿತ್ಯ ಕೃತಿಗಳನ್ನು ಉಳಿಸಿಬೆಳೆಸಿಕೊಂಡು ಹೋಗುವವರಿಲ್ಲವೆಂಬ ಕೊರಗು ಅವರನ್ನು ನೋಯಿಸದಿರಲಿಲ್ಲ ಒಂದೆಡೆ –

"ಪ್ರಾಯದಿ ನಿಮ್ಮಕ್ಕ ಮುಪ್ಪಿನಲಿ ನೀನು
ಕನಿಕರವಿಲ್ಲದೆ ಕೈಬಿಟ್ಟೆರಿಯನ್ನ
ಕಲೆಗೊಬ್ಬ ಮಗನ ಕೊಡಲಿಲ್ಲ'

ಎಂದು ಹಾಡಿಕೊಂಡಿದ್ದಾರೆ. ಒಂದೆಡೆ, ತಮ್ಮದು ಪಿಂಡಸಂತಾನವಲ್ಲ ಅದು ಕಲಾಸಂತಾನ, ಅಳಿಯದ ಸಂತಾನವೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ ಆ ಕಲೆಯನ್ನು ಉಳಿಸಿಕೊಂಡು ಹೋಗುವವರಿಲ್ಲದ ಕೊರಗು ಕೊರಗಾಗೆ ಉಳಿದಿದೆ.

ಗಳಿಸಿದೀ ಕಲಾನಿಧಿಯನಾಂಗೀಯಲಿ ॥ ಪ ॥
ಗಳಿತವಾಯಿತೆನ್ನ ಬದುಕು ಕೇಳುವವರಿಲ್ಲ ॥ ಅ ॥

ಎಲ್ಲರಂತಲ್ಲ ನಾ ಪಿಂಡ ಸಂತಾನಿಯಲ್ಲ
ಇಲ್ಲಿರಿಸಿ ಪೋಗುವಾ ಜೀವ ಪೀಳಿಗೆಯಲ್ಲ
ಕಲೆಯ ಸಂತಾನಸಿರಿಕೊಳ್ಳುವವರಾರಿಲ್ಲ

ಎಂದು ನಿರಾಸೆಗೊಂಡು ಹಾಡಿಕೊಂಡಿದ್ದಾರೆ. ಮುಂದುವರೆದು -

ಇಂದೊ ನಾಳೊ ಜೀವನ ಮಣ್ಣು ಪಾಲಾಗುವುದು
ಅಂದಿಗೆ ಕಲೆಯ ನಿಧಿ ಸಮಾಧಿಯಾಗುವುದು
ತಂದೆ ರಾಮೇಶ ನೀನೊಪ್ಪಿಸಿಕೊ ಮುಪ್ಪಿನಲಿ

ಎಂದು ಪ್ರಾರ್ಥಿಸಿಕೊಂಡಿದ್ದಾರೆ. ಹೀಗೆ ಗೌಡರ ಮನೆತನಕ್ಕೆ... 'ಸಂತಾನ ಭಾಗ್ಯ'ದ ಕೊರತೆ ಮಾತ್ರ ಎಂದಿನಿಂದಲೂ ಕಾಡಿದೆ.

## ಗೌಡರನ್ನು ಅವಲಂಬಿಸಿದ ಕುಟುಂಬಗಳು:

ನಾಲ್ಕುನೂರು ಎಕರೆ ಜಮೀನು, ಅರಮನೆಯಂತಹ ಮನೆ, ಕೃಷಿಕಾರ್ಯಕ್ಕೆ ಬೇಕಾಗುವ ಕಾರಣದಿಂದ ಮನೆತುಂಬ ಆಳು-ಕಾಳುಗಳು, ಮಕ್ಕಳಿಲ್ಲದ ಸಂಸಾರ, ಯಾವ ಕೊರತೆಯೂ ಇಲ್ಲದ ಅಗರ್ಭ ಶ್ರೀಮಂತಿಕೆಯಲ್ಲಿ ಯಾರ ಗೊಡವೆಗೂ ಹೊಗದೆ, ಗೌಡರು ಸುಖವಾಗಿ ಇದ್ದುಬಿಡಬಹುದಾಗಿತ್ತು. ಆದರೆ, ಅದು ಹಾಗಿರಲಿಲ್ಲ ಗೌಡರಿಗೂ ಮಕ್ಕಳಿಲ್ಲದ ಕಾರಣ ಸುತ್ತಿಕೊಂಡ ಕಳ್ಳುಬಳ್ಳಿ ಬಹುದೊಡ್ಡದಾಗಿತ್ತು. ಅವರ ಚಿಕ್ಕಪ್ಪನ ಸಂಸಾರವಂತೂ, ಎಂದಿನಂತೆ ಗೌಡರ ಜೊತೆಗೆ ಬಾಳಿಕೊಂಡು ಬಂದಿತ್ತು. ಅಲ್ಲದೆ ಗೌಡರ ಕೃಷಿಕಾರ್ಯದ ಸಂಪೂರ್ಣ ಹೊಣೆ ಚಿಕ್ಕಪ್ಪನ ಸಂಸಾರದ ಮೇಲಿತ್ತು. ಹೀಗೆ ಅವರು ಪರಸ್ಪರ ಪೂರಕವಾಗಿ ಬಾಳಿಕೊಂಡು ಬಂದಿದ್ದರು. ಇದು ಗೌಡರ ತಂದೆಯ ಕಡೆಯ ಸಂಬಂಧದ ಮಾತಾಯಿತು. ಇನ್ನು ಗೌಡರ ತಂಗಿ ಬಾಪುರಗ್ರಾಮದ ನೀಲಮ್ಮನ ಹಿರಿಯಮಗ ಚೆನ್ನವೀರನ ಗೌಡರು, ಬಾಲ್ಯದಿಂದಲೂ ಸೋದರಮಾವನ ಮನೆಯಲ್ಲಿಯೇ ಬೆಳೆದುಬಂದರು. ಅವರ ವಿದ್ಯಾಭ್ಯಾಸವೆಲ್ಲ ಗೌಡರ ನೇತೃತ್ವದಲ್ಲಿಯೇ ನಡೆಯಿತು. ಸೋದರಳಿಯ ಚೆನ್ನವೀರಗೌಡರು ಬೆಳೆದು ದೊಡ್ಡವರಾದ ಮೇಲೆ, ಅವರ ಮದುವೆ ಮಾಡುವ ಪ್ರಸಂಗ ಬಂದೊದಗಿತು. ಆಗ ಸಂಬಂಧ ದೂರಾಗದೆ,

ಸೌಹಾರ್ದದಿಂದ ಬಾಳುವಂತಾಗಲೆಂಬುದು ಗೌಡರ ಅಭೀಷ್ಟೆಯಾಗಿತ್ತು. ತಮಗಂತು ಮಕ್ಕಳಿರಲಿಲ್ಲ ಕಾರಣ ತಮ್ಮ ಚಿಕ್ಕಪ್ಪನ ಹಿರಿಯಮಗನ ಮಗಳನ್ನು (ಒಂದರ್ಥದಲ್ಲಿ ಗೌಡರ ಮಗಳನ್ನು) ಚೆನ್ನವೀರಗೌಡರಿಗೆ ತೆಗೆದುಕೊಂಡು, ಮದುವೆ ಮಾಡಿದರು. ಹೀಗಾಗಿ ಗೌಡರ ಜೊತೆಗಿದ್ದ ಅವರ ಚಿಕ್ಕಪ್ಪನ ಸಂಸಾರದ ಜೊತೆಗೆ, ಸೋದರಳಿಯ ಚೆನ್ನವೀರಗೌಡರ ಸಂಸಾರವು ಸೌಹಾರ್ದದಿಂದ ಕೂಡಿ ಬಾಳಲು ತಾನೇ ತಾನಾಗಿ ಅನುವಾಯಿತು. ಈ ವ್ಯವಸ್ಥೆಗೆ ಚೆನ್ನವೀರಗೌಡರ ತಂದೆ ಹಿರೇಗೌಡರಾಗಲಿ, ತಾಯಿ ನೀಲಮ್ಮನವರಾಗಲಿ ಯಾವ ಆಕ್ಷೇಪವನ್ನೂ ಎತ್ತಲಿಲ್ಲ. ಹೀಗೆ ಮತ್ತೊಂದು ನದಿ ಹರಿದು ಬಂದು ಗೌಡರ ಸಂಸಾರಸಾಗರವನ್ನು ಸೇರಿದಂತಾಯಿತು.

ಇನ್ನು ಹನುಮಕ್ಕ ಗೌಡತಿಯವರಿಗೆ ಮಕ್ಕಳಾಗದೇ ಇದ್ದುದರಿಂದ, ಆ ಸಂಬಂಧ ಅಲ್ಲಿಗೆ ನಿಂತುಹೋಗುತ್ತದೆಂಬ ಕೊರಗು ಉಭಯ ಮನೆತನದವರನ್ನು ಕಾಡತೊಡಗಿತು. ಆಗ ಗೌಡರ ಮಾವ ತಮ್ಮ ಎರಡನೆ ಮಗಳನ್ನು (ಹನುಮಕ್ಕನವರ ತಂಗಿಯನ್ನು) ಕೊಟ್ಟು ಮದುವೆ ಮಾಡಲು ಮುಂದಾದರು. ಅದಕ್ಕೆ ಗೌಡರು ಒಪ್ಪಲಿಲ್ಲವೆಂಬುದನ್ನು ಈ ಮೊದಲೇ ನೋಡಿದ್ದೇವೆ. ಅಂತೂ ಸಂಬಂಧ ಮುಂದುವರೆಯಬೇಕು, ಅಂದಾಗ ಗೌಡರು ಇದಕ್ಕೊಂದು ಪರಿಹಾರವನ್ನು ಕಂಡುಕೊಂಡರು. ಹನುಮಕ್ಕಗೌಡತಿಯ ಸಹೋದರ ಲಿಂಗನಗೌಡರಿಗೆ, ತಮ್ಮ ಚಿಕ್ಕಪ್ಪನ ಮಗಳನ್ನು (ಒಂದರ್ಥದಲ್ಲಿ ಗೌಡರ ತಂಗಿ) ಕೊಟ್ಟು ಮದುವೆ ಮಾಡಿದರು. ಹೀಗಾಗಿ ಹೆಂಡತಿಯ ಕಡೆಯ ಸಂಬಂಧವು ಅಲ್ಲಿಗೆ ನಿಲ್ಲದೆ ಮುಂದುವರೆದಂತಾಯಿತು. ಈ ಲಿಂಗನಗೌಡರ ಮಗಳೇ ಚೆನ್ನಮ್ಮ.

## ಗೌಡರ ಬದುಕಿನಲ್ಲಿ ಮಗು ಚೆನ್ನಮ್ಮನ ಪ್ರವೇಶ :

ಹನುಮಕ್ಕಗೌಡತಿಯವರ ಸಹೋದರ ಲಿಂಗನಗೌಡರ ವೈವಾಹಿಕ ಜೀವನದಲ್ಲಿ ಸ್ವಲ್ಪ ವಿರಸವುಂಟಾಗಿತ್ತು. ಕಾರಣ ಮಗು ಚೆನ್ನಮ್ಮ ಬಾಪುರದ ನೀಲಮ್ಮನವರಲ್ಲಿ ಬೆಳೆಯುತ್ತಿದ್ದಳು. ಒಂದು ಸಲ ಜೋಳದರಾಶಿಗೆ ಆ ಮಗು ಬಂದಾಗ, "ಗೌಡತಿಗೂ ನನಗೂ ಈ ಮಗುವಿನ ಬಗ್ಗೆ ಆಸಕ್ತಿ ಉಂಟಾಯಿತು. ಅಲ್ಲಿ ಇಲ್ಲಿ ಇರುವುದೇಕೆ ನಮ್ಮಲ್ಲೇ ಇರಲೆಂಬ ಬಯಕೆಯಾದ್ದರಿಂದ, ಕಾಲಾನುಸಾರ ಉಂಟಾದ ಪ್ರೀತಿವಾತ್ಸಲ್ಯಗಳು. ಚೆನ್ನಮ್ಮನನ್ನು ನಮ್ಮೊಂದಿಗೆ ಇರುವಂತೆ ಮಾಡಿತು. ಮಕ್ಕಳಿಲ್ಲದ ಬರಡು ಜೀವನದಲ್ಲಿ ಚೆನ್ನಮ್ಮನೊಂದು ಚಿಗುರಾಗಿ, ಎಲೆಯಾಗಿ, ಹೂವಾಗಿ, ಪರಿಮಳಿಸುವ ಮಲ್ಲಿಕಾ ಲತೆಯಂತೆ ಹಬ್ಬಿಕೊಂಡಳು' ಎಂದು ಗೌಡರು ಹೇಳಿಕೊಂಡಿದ್ದಾರೆ. ಮಕ್ಕಳಿಲ್ಲವೆಂಬ ಕೊರತೆಯನ್ನು ಚೆನ್ನಮ್ಮ ತುಂಬಿಕೊಟ್ಟಳು. ಅವಳ ಬಾಲಲೀಲೆಗಳಂತೂ ಗೌಡರ ದಾಂಪತ್ಯ ಜೀವನದ ಸಿಹಿನೆನಹುಗಳಾಗಿ ಉಳಿದಿವೆ. ಚೆನ್ನಮ್ಮ ಋತುಮತಿಯಾದಾಗ, ಹದಿನಾರು ದಿನಗಳವರೆಗೆ ಮನೆಯಲ್ಲಿ ನಡೆದ ಸಂಭ್ರಮದ ವಾತಾವರಣವನ್ನು ಗೌಡರು ತಮ್ಮ ಆತ್ಮಚರಿತ್ರೆಯಲ್ಲಿ ಹೃದಯತುಂಬಿ ವರ್ಣಿಸಿದ್ದಾರೆ.

ಹೀಗೆ ಚೆನ್ನಮ್ಮನು (ಹನುಮಕ್ಕ ಗೌಡತಿಯ ತಮ್ಮನಮಗಳು, ಗೌಡರ ತಂಗಿ (ಚಿಕ್ಕಪ್ಪನ ಮಗಳು)ಯ ಮಗಳು) ಎರಡು ಕಡೆಯ ಸಂಬಂಧವನ್ನು ಒಂದೆಡೆ ಸೇರಿಸಿದಂತೆ, ಸುಖವಾಗಿ ಬೆಳೆದು ದೊಡ್ಡವಳಾದಳು. ಮುಂದೆ ಚೆನ್ನಮ್ಮನ ಮದುವೆ ಪ್ರಸ್ತಾಪ ಬಂದಾಗ, ಅವಳ ತಂದೆ ತಾಯಿಯರ ಒಪ್ಪಿಗೆಯ ಮೇರೆಗೆ, ಹನುಮಕ್ಕ ಗೌಡತಿಯ

ಮೊದಲನೆಯ ತಂಗಿಯ ಮಗನೊಂದಿಗೆ ಮದುವೆ ಮಾಡುವುದೆಂದು ಗೊತ್ತು ಮಾಡಿದರು. ಆ ಪ್ರಕಾರ ಮಮತೆಯ ಮಗು ಚೆನ್ನಮ್ಮ ಮತ್ತು ಚಂದ್ರಮೌಳಿಯರ ಮದುವೆ ೧೯೭೨ರ ಮೇ ತಿಂಗಳಿನಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ನಂತರ ಚೆನ್ನಮ್ಮನ ಸಂಸಾರದ ಹೊಳೆಯು, ಗೌಡರ ಸಂಸಾರ ಸಾಗರವನ್ನು ಸೇರಿಕೊಂಡಿತು.

ಹೀಗೆ ಗೌಡರ ತಂದೆಯ ಸಂಬಂಧದ ಕುಟುಂಬ, ತಂಗಿಯ ಕುಟುಂಬ ಮತ್ತು ಗೌಡರ ಪತ್ನಿಯ ಕುಟುಂಬಗಳು, ಗೌಡರ ಸಂಸಾರದೊಂದಿಗೆ ಬೆರೆತು ಬಾಳುವಂತಾಯಿತು. ಆದರೆ ಹೀಗೆ ಮಾಡುವಲ್ಲಿ ಗೌಡರ ಯಾವ ಸ್ವಾರ್ಥವು ಇದರಲ್ಲಿರಲಿಲ್ಲ "ಈ ಸಂಸಾರ ನಾವು ಬೇಕೆಂದು ಬಯಸಿ ಕಟ್ಟಿಕೊಂಡದ್ದೂ ಅಲ್ಲ ಮಕ್ಕಳಿಲ್ಲವೆಂದು, ನಮ್ಮ ಸಂಬಂಧಿಕರಲ್ಲಿ ಯೋಚಿಸಿ, ಅವರನ್ನು ಕರೆತಂದು, ಅದರ ಭಾರವನ್ನು ಹೊರುವ ಮಾತಿತ್ತುದೂ ಅಲ್ಲ. ನನ್ನ ತಾತ ತನ್ನ ಕಾಲದಲ್ಲಿದ್ದ ತನ್ನ ಕುಟುಂಬಕ್ಕೆ ಪ್ರತ್ಯೇಕವಾಗಿ ಆಸ್ತಿಗಳನ್ನೂ ಹಂಚಿ, ಉಳಿದದ್ದು ನನ್ನ ಹೆಸರಿಗೆ ನೀಡಿದ್ದು, ಅದರಲ್ಲಿ ಯಾವ ಕುಟುಂಬವನ್ನು ಕಟ್ಟಿಕೊಂಡು ಪೋಷಣೆಮಾಡಬೇಕೆಂದು ನಿಯಮಗಳೇನು ಇರಲಿಲ್ಲ." ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಹೀಗೆ ಗೌಡರ ಕುಟುಂಬ, ಉಳಿದ ಮೂರು ಕುಟುಂಬಗಳೊಡನೆ, ಒಂದೇ ಕುಟುಂಬವೆನ್ನುವಂತೆ ಬಾಳಿಕೊಂಡು ಬಂತು. ಆ ಮೂರು ಕುಟುಂಬಗಳು ಗೌಡರ ತಾಯಿಗೆ ಸಂಬಂಧಿಸಿದ ಆಸ್ತಿಯಲ್ಲಿ ಬಾಳುವಂತಾಯಿತೆನ್ನುವದನ್ನು ಗಮನಿಸಬೇಕು.

ಈ ಮಧ್ಯೆ ಗೌಡರ ನಾಟಕದ ಖಯಾಲಿ ಒಂದಾಗಿ, ಆಧ್ಯಾತ್ಮಿಕದತ್ತ ಒಲವು ಮೂಡಿತು. ಬಾಲ್ಯದಿಂದಲೆ ಪರಿಣಿತಿ ಹೊಂದಿದ ಗಮಕ ಶೈಲಿಯಿಂದಾಗಿ, ಗೌಡರು "ಗಮಕ ಕಲಾ ನಿಧಿ' ಎಂಬ ಬಿರುದು ಪಡೆಯುವಷ್ಟು ಎತ್ತರಕ್ಕೆ ಬೆಳೆದಿದ್ದರು. ನಾಟಕ-ಗಮಕ ಎಂದು ಊರೂರು ಸುತ್ತಿ ಆರೋಗ್ಯ ಹಾಳಾಯಿತು. ಅನಿವಾರ್ಯವಾಗಿ ಆರೋಗ್ಯ ಸುಧಾರಣೆಗೆಂದು ಬಳ್ಳಾರಿ ಆಸ್ಪತ್ರೆ ಸೇರಬೇಕಾಯಿತು. ಇದೊಂದು ರೀತಿಯ ವರದಾನವೇ ಆಯಿತು. ಔಷಧೋಪಚಾರದ ಜೊತೆಗೆ ಬಳ್ಳಾರಿ ವೈ. ನಾಗೇಶ ಶಾಸ್ತ್ರಿಗಳವರ 'ವೀರಶೈವ ಸಿದ್ಧಾಂತ'ದ ಬೋಧನೆಯು ನಡೆಯಿತು. ಕಾಲಕಳೆದಂತೆ ಗೌಡರ ಮೈ ಮನಗಳೆರಡು ತುಂಬಿ ವಿಕಾಸಗೊಂಡವು. 'ಶೂನ್ಯ ಸಂಪಾದನೆ'ಯ ಗಮಕಶೈಲಿಯ ಪ್ರವಚನದ ತಳಹದಿ ಇಲ್ಲಿಂದಲೇ ಪ್ರಾರಂಭವಾಗಿತ್ತು.

## ಅವಿಭಕ್ತ ಕುಟುಂಬದಲ್ಲಿ ಬೇಸರ :

ಎಷ್ಟೇ ಪ್ರೀತಿಯಿಂದ ಬಾಳಿಕೊಂಡು ಬಂದರೂ, ಗೌಡರ ಸಂಸಾರದಲ್ಲಿ ಕೆಲವು ಬೇಸರದ ಘಟನೆಗಳು ಜರುಗಿದವು. ಹೀಗಾಗಿ ರಕ್ತ ಸಂಬಂಧದ ವಿನಃ, ಆರ್ಥಿಕಾದಿ ಸಂಬಂಧಗಳಾವುವು ಬೇಡವೆನಿಸಿತು. 'ತಮ್ಮ ಆಸ್ತಿಯಲ್ಲಿ ಅವರವರಿಗೆ ಕೊಡಬೇಕೆಂದಷ್ಟು ಪಾಲು ಕೊಟ್ಟು ಪ್ರತಿಯೊಂದು ಕುಟುಂಬವು ಸ್ವತಂತ್ರವಾಗಿ ಬಾಳುವಂತೆ ವ್ಯವಸ್ಥೆ ಮಾಡಿದರು. ಗೌಡರ ಪಾಲಿನ ಆಸ್ತಿಯ ವಹಿವಾಟನ್ನು ಅವರ ಸೋದರಳಿಯ ಚೆನ್ನವೀರಗೌಡರಿಗೆ ವಹಿಸಿಕೊಡಲಾಯಿತು. ವರ್ಷಕ್ಕಿಷ್ಟೊಂದು ಗೌಡರಿಗೆ ಹಣ ಕೊಡಬೇಕೆಂದು ಗೊತ್ತುಪಡಿಸಲಾಯಿತು. ಈ ಬೇಸರವನ್ನವರು ತಮ್ಮ ವಚನಗಳಲ್ಲಿ ಕಾವ್ಯಗಳಲ್ಲಿ ಹಾಡಿಕೊಂಡಿದ್ದಾರೆ. .

## ಜಮೀನಿನ ಋಣ :

ಗೌಡರು ತಮ್ಮ ಪಾಲಿಗೆ ಬಂದ ಆಸ್ತಿಯಲ್ಲಿ ಬಹುಭಾಗವನ್ನೂ ತಮ್ಮ ಬಂಧು ಬಳಗದವರಿಗೆ ಹಂಚಿಯಾಗಿತ್ತು. ಉಳಿದ ಜಮೀನಿಗು ಸರಕಾರದ ಕಾಯ್ದೆಯ ಅನ್ವಯ ಸಂಚಕಾರ ಬಂತು. ಪ್ರತಿಯೊಂದು ಕುಟುಂಬಕ್ಕೆ ೫೪ ಎಕರೆಗಿಂತ ಹೆಚ್ಚಿಗೆ ಜಮೀನು ಇರಬಾರದೆಂಬುದು ಸರಕಾರದ ನಿಯಮ. ಹಾಗೆಯಿದ್ದ ಪಕ್ಷದಲ್ಲಿ ಆ ಜಮೀನು ಸರಕಾರಕ್ಕೆ ಸೇರಬೇಕೆಂಬ ಕಾಯ್ದೆಯ ಪ್ರಕಾರ, ಗೌಡರ ಜಮೀನೆಲ್ಲಾ ಸರಕಾರದ ವಶಕ್ಕಾಗಿ, ಅವರ ಪಾಲಿಗೆ ಉಳಿದದ್ದು ೫೪ ಎಕರೆ ಮಾತ್ರ. ಇಷ್ಟರಲ್ಲಿಯೇ ಅವರು ಜೀವನ ನಡೆಸುವಂತಾಯಿತು. ಅಲ್ಲಿಗೇ ಗೌಡರೊಂದಿಗಿದ್ದ ಜಮೀನಿನ ಋಣ ತೀರಿದಂತಾಯಿತು. ಜಮೀನುಗಳೇನೊ ಕೈ ಬಿಟ್ಟವು, ಆದರೆ ಹಿರಿಯರ ಕಾಲದಿಂದ ನಡೆದುಕೊಂಡು ಬಂದಿರುವ ಘನತೆ, ಗೌರವ, ರೀವಿಗಳ ಪಾಡೇನು?

ಅನೇಕ ಏರುಪೇರುಗಳನ್ನೂ ಕಂಡ ಗೌಡರಿಗೆ, ಸಂಸಾರವು ತೀರಾ ಬೇಸರ ತಂದಿರುವುದು ಉಂಟು. ಕೃಷಿಮೂಲ ಉತ್ಪನ್ನವು ನಿರ್ಧಿಷ್ಟವಾದುದಲ್ಲ, ಚೆನ್ನಾಗಿ ಮಳೆಯಾದರೆ ಸರಿಯಾಗಿ ಉತ್ಪನ್ನ ಬರುತ್ತದೆ. ಉತ್ಪನ್ನವು ಬಾರದೆ ಹೋದಾಗ, ಉಪವಾಸವಿರುವಂತಿಲ್ಲವಲ್ಲ? ಅದಕ್ಕಾಗಿ ಸಾಲದ ಮೊರೆ ಹೋಗಬೇಕು. ಈ ಸಾಲ ನಿರ್ಧಿಷ್ಟ ಸಮಯದಲ್ಲಿ ತೀರುವಂತಿಲ್ಲ. ಹೀಗಾಗಿ ಸಾಲ-ಸೋಲಗಳಿಂದಾಗಿ ಕೊನೆತನಕವೂ ತೊಳಲಾಡಲೇ ಬೇಕಾಗುತ್ತದೆ. ಕಾರಣ ಕೃಷಿಕರು ಸಾಲ ಮಾಡುವುದು ಎಷ್ಟು ಅನಿವಾರ್ಯ ಮತ್ತು ಅನಿಷ್ಟಕರವಾದುದೆಂಬುದನ್ನು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಹಿಂದಿನಿಂದ ನಡೆದುಕೊಂಡು ಬಂದ ಬದುಕನ್ನು ಬಹಳ ನೋವಿನಿಂದ ಚಿತ್ರಿಸಿದ್ದಾರೆ.

"ಮೊದಲಿನಿಂದಲೂ ತಾತನ ಕಾಲದಿಂದ, ತೂತಿನ ಗಡಿಗೆಯಲ್ಲಿ ನೀರು ತುಂಬುವ ಸಾಹಸ ನಡೆದುಬಂದಿತ್ತು. ಅವರು ಜೀವಮಾನವೆಲ್ಲ ನೀರು ಹೊತ್ತು, ಬರಿದಾದ ಗಡಿಗೆಯನ್ನು ಇದ್ದವರಿಗೆ ಬಿಟ್ಟು ಹೋಗುತ್ತಿದ್ದರು. ಒಬ್ಬೊಬ್ಬರ ಕಾಲದಲ್ಲಿ ಒಂದೊಂದು ತೂತುಗಳಾಗಿ, ನನ್ನ ಕಾಲಕ್ಕೆ ಬರೇ ತೂತಿನ ಗಡಿಗೆಯಾಗಿತ್ತು' ಎನ್ನುವ ಗೌಡರ ಮಾತುಗಳು ಅವರ ಕೌಟುಂಬಿಕ ಜೀವನದ ಆರ್ಥಿಕ ಸ್ಥಿತಿಗೆ ಹಿಡಿದ ಕನ್ನಡಿಯಂತಿವೆ. ಇದಕ್ಕಿಂತೂ ಸೊಗಸಾಗಿ ಇನ್ನೇನು ಹೇಳಲು ಸಾಧ್ಯ? "ಈ ಗಡಿಗೆಯನ್ನು ತುಂಬುವ, ಶಕ್ತಿ ಸಾಮರ್ಥ್ಯಗಳು ನನ್ನಲ್ಲಿರಲಿಲ್ಲ ನನ್ನ ದೈವವೇ ಸಾಕಷ್ಟು ನೀರು ಹೊತ್ತಿತ್ತು' ಎಂದು ವಿಷಾಧಿಸಿದ್ದಾರೆ.

## ಹನುಮಕ್ಕ ಗೌಡತಿಯ ಮರಣ :

ಗೌಡರ ಏಕಾಂಗಿ ಜೀವನದಲ್ಲಿ ಸಂಗಾತಿಯಾಗಿ ಬಂದು, ಅವರ ಸುಖ ದುಃಖಗಳಲ್ಲಿ ಪಾಲುಗಾರಳಾಗಿ, ಗೌಡರ ಕಲಾಜೀವನಕ್ಕೆ ಸ್ಫೂರ್ತಿಯಾಗಿ ನಿಂದು ಬೆಂಬಲಿಸಿದ, ಧರ್ಮಪತ್ನಿ ಹನುಮಕ್ಕ ಗೌಡತಿಯವರ ಮರಣ, ಗೌಡರ ಮನಸ್ಸಿನ ಮೇಲೆ ತೀವ್ರ ಆಘಾತವನ್ನುಂಟು ಮಾಡಿತು. ನನ್ನವರು-ತನ್ನವರು ಎಂಬ ಹಿರಿಯರನ್ನೆಲ್ಲಾ ಎಂದೋ ಒಂದು ಕಾಲಕ್ಕೆ ಕಳೆದುಕೊಂಡು ಒಂಟಿಯಾಗಿದ್ದ ಗೌಡರ ಬಾಳಿನಲ್ಲಿ ಆ ಕೊರತೆಯನ್ನು ಹನುಮಕ್ಕ


ಗೌಡತಿಯವರು ಸಮರ್ಥವಾಗಿಯೇ ತುಂಬಿದರು. ಅವರ ಸಜ್ಜನಿಕೆ ಸೌಜನ್ಯ ವಿಶಾಲ ಮನೋಭಾವದ ಪ್ರವೃತ್ತಿ ಅನುಪಮವಾದುದು. ಒಂದರ್ಥದಲ್ಲಿ ಮನೆಯ ಮಗನಾಗದೆ, ಸಮಾಜದ ಮಗನಾಗಿ ಬೆಳೆದ ಗೌಡರನ್ನು ಹುಡುಕಿಕೊಂಡು, ಅದೆಷ್ಟೋ ಮಹನೀಯರು ಮನೆಬಾಗಿಲಿಗೆ ಬರುತ್ತಿದ್ದರು. ಹೀಗೆ ಬಂದವರ ಆದರೋಪಚಾರ ಮಾಡಿ, ಅತಿಥಿ ಸತ್ಕಾರದಿಂದ ಸಂಪ್ರೀತರನ್ನಾಗಿಸುವ ಹೊಣೆ ಗೌಡತಿಯದಾಗಿರುತ್ತಿತ್ತು. ಅಕಾಲದಲ್ಲಿ ಬಂದ ಅತಿಥಿಗಳಿಗೆ ಆದರದಿಂದ ಅನ್ನವನ್ನಿತ್ತು ಸತ್ಕರಿಸಿದ ಅನ್ನಪೂರ್ಣೆ ಗೌಡತಿಯವರು. ಒಂದಕ್ಷರವನ್ನು ಕಲಿಯದ ಗೌಡತಿ ಗೌಡರ ಸಹಯೋಗದಿಂದ, ವೀರಶೈವ ಸಿದ್ಧಾಂತವನ್ನು ಇತರರಿಗೆ ಹೇಳುವಷ್ಟರ ಮಟ್ಟಿಗೆ ಪರಿಚಯಮಾಡಿಕೊಂಡವರು. ಚೆನ್ನಮ್ಮನ ಹೆರಿಗೆಯಾದ ಸಮಯ. ಮನೆಯಲ್ಲಿ ಮಗುವನ್ನು ತೊಟ್ಟಿಲಲ್ಲಿಟ್ಟು ತೂಗುವ ಸಂಭ್ರಮ. ಅಂದು ಶಿವರಾತ್ರಿ ಬೇರೆ, ಅಂತಹದರಲ್ಲಿ ಗೌಡತಿಯವರು ರಕ್ತದೊತ್ತಡ ಮತ್ತು ವಾಯುವಿಕಾರಕ್ಕೆ ತುತ್ತಾದರು. ಬಳ್ಳಾರಿಗೆ ಕರೆದುಕೊಂಡು ಹೋದರೂ ಫಲ ಸಿಗಲಿಲ್ಲ ದಿ.೨.೩.೧೯೭೩ರಂದು ಗೌಡತಿ ಕೊನೆಯುಸಿರೆಳೆದು, ಗೌಡರ ಮುಪ್ಪಿನ ಬಾಳನ್ನು ಬರಿದಾಗಿಸಿದರು. ದುಃಖತಪ್ತರಾದ ಗೌಡರು ಈ ಪ್ರಸಂಗವನ್ನು ಭಾರವಾದ ಹೃದಯದಿಂದ ಹೇಳಿಕೊಂಡಿದ್ದಾರೆ.

"ಮರುದಿನ ಉದಯ, ದಿನದಂತೆ ಉದಯ, ನನ್ನ ದುಃಖೋದಯದೊಂದಿಗೆ ಇಂದಿನುದಯ, ನನ್ನ ಭಾಗ್ಯದೈಸಿರಿಯನ್ನು ಮಣ್ಣಲ್ಲಿ ಮರೆಮಾಡುವ ಉದಯ. ನಿತ್ಯಕಾರ್ಯಗಳು ಕಾಲಾಧೀನ ಜೀವನದ ಅವಶ್ಯಕತೆಗಳಂತೆ ನಡೆದವು. ಸಣ್ಣ ಗುಡ್ಡದ ಹೊಲದಲ್ಲಿ ನಾಲ್ಕು ರೋಡು ಕಲೆತು ಬೆಳ್ಳಗುರ್ಕಿಗೆ ತಿರುಗುವ ತಿರುವಿನ ಸಮೀಪದಲ್ಲಿ ಸಮಾಧಿ ಮಾಡಲು ಏರ್ಪಾಟಾಯಿತು' ಎಂದು, ಅಂತ್ಯಕ್ರಿಯೆಯನ್ನು ಕುರಿತು ಆಡಿದ ಮಾತುಗಳಲ್ಲಿ ಅವರಲ್ಲಿ ಹುದುಗಿದ ದುಃಖದ ಅರಿವಾಗದೇಯಿರದು. ನಂತರದಲ್ಲಿ ಹೆಂಡತಿಯನ್ನಗಲಿದ ನೋವು ನೋವಾಗಿಯೆ ಉಳಿಯಬಾರದೆಂದು, ತಮ್ಮ ಶೋಕವನ್ನು ಕರುಣರಸವಾಗಿಸಿ, ಕಾವ್ಯಕಟ್ಟಿ ಹಾಡಿಕೊಂಡಿದ್ದಾರೆ. ಅದುವೆ 'ಗೌಡತಿ ಬರಲಿಲ್ಲ ಎಂಬ ಖಂಡ (ಶೋಕ) ಕಾವ್ಯ.

ಹೀಗೆ ಗೌಡರ ಬಾಳರಥದ ಒಂದು ಗಾಲಿ ಉರುಳಿಹೋಗಿ, ಒಗ್ಗಾಲಿ ಸಂಸಾರವಾಯಿತು. ಇಲ್ಲಿಗೆ ಯಾವ ಮೋಹವೂ ಅವರನ್ನು ಬಂಧಿಸುವಂತಿರಲಿಲ್ಲ, ಇದ್ದ ಒಂದು ಋಣ ಸಂಬಂಧ ಹೆಂಡತಿಯದು. ಅವಳೂ ತೀರಿಹೋದಾಗ, ಮುಂದಿನ ದಾರಿ ತೀರ ಅಸ್ಪಷ್ಟವಾಗಿ ತೋರುವಂತಿತ್ತು. ಒಟ್ಟಿನಲ್ಲಿ ಗೌಡರ ಕೌಟುಂಬಿಕ ಜೀವನದಲ್ಲಿ ಗೆಲುವಿಗಿಂತ ಸೋಲುಗಳೇ ಪ್ರಧಾನವಾದುದು ಕಂಡು ಬರುತ್ತದೆ.

ಗೌಡರ ವಂಶವೃಕ್ಷದ ಚಿತ್ರವನ್ನು ಅವರ ತಾತಂದಿರಿಂದ ಪ್ರಾರಂಭಿಸಿ ಗೌಡರವರೆಗೆ ಹೀಗೆ ಕೊಡಬಹುದು :

## ಗೌಡರ ವಂಶವೃಕ್ಷ




ಗೌಡರಿಗೆ ಸಂತಾನವಿಲ್ಲದಿದ್ದರೂ ಅವರನ್ನು ಸುತ್ತಿಕೊಂಡಿರುವ ರಕ್ತಸಂಬಂಧದ ಬಳ್ಳಿ ಬಹು ವಿಶಾಲವಾಗಿ ಬೆಳೆದು ಸುತ್ತುಹಬ್ಬಿಕೊಂಡಿದೆ. ಆ ವಿವರವೆಲ್ಲಾ ಇಲ್ಲಿ ಅಪ್ರಸ್ತುತ. ಗೌಡರ ತಾತಂದಿರಿಗೆ ಇಬ್ಬರು ಸಹೋದರಿಯರಿದ್ದರು. ಒಬ್ಬಳನ್ನು ಜೋಳದ ರಾಶಿಯಲ್ಲಿಯೇ ಮದುವೆ ಮಾಡಿಕೊಟ್ಟಿದ್ದರು. ಇನ್ನೊಬ್ಬ ಸಹೋದರಿಯನ್ನು ಮಿಂಚೇರಿಗೆ ಕೊಟ್ಟು ಮದುವೆ ಮಾಡಿತ್ತು. ದೊಡ್ಡ ಹೊನ್ನನಗೌಡರ ಕಿರಿಯ ಪತ್ನಿ ಗಂಗಮ್ಮ ಮತ್ತು ಸಣ್ಣ ಹೊನ್ನನಗೌಡರ ಕಿರಿಯ ಪತ್ನಿ ರುದ್ರಮ್ಮನವರು, ಗೌಡರ ತಾತಂದಿರ ಸಹೋದರಿಯರ ಮಕ್ಕಳೇ ಎಂಬುದನ್ನು ಗಮನಿಸಬೇಕು.

## ಗೌಡರ ಮನೆ :

ಗೌಡರು ವಾಸವಾಗಿದ್ದ ಅವರ ಮನೆ, ಅವರ ತಾತನವರೇ ಕಟ್ಟಿಸಿದ್ದು, ಒಂದುಸಾರಿ ಆ ಮನೆಯನ್ನೆಲ್ಲಾ ಸುತ್ತಿ, ಸೂಕ್ಷ್ಮವಾಗಿ ನೋಡುತ್ತ ಬಂದರೆ, ಅರ್ಧಗಂಟೆಯಾದರು ಬೇಕು. ಅಂತಹ ದೊಡ್ಡದಾದ ಮಹಡಿಯ ಮನೆ, ಇಂದಿಗೂ ತನ್ನ ಭವ್ಯತೆಯನ್ನು ಉಳಿಸಿಕೊಂಡಿದೆ. ಕೃಷಿಕಾರ್ಯದ ಮನೆಯಾದ್ದರಿಂದ, ದನ-ಕರುಗಳಿಗೆಲ್ಲಾ ಅನುಕೂಲವಾಗುವಂತೆ ಕಟ್ಟಿಸಿದ ಒಂದು ಮನೆ ಮೊದಲೆ ಇತ್ತು. ಈಗಲು ಸುಸಜ್ಜಿತವಾಗಿಯೇ ಇದೆ. ನಂತರದಲ್ಲಿ ಮನೆತನದ ಘನತೆಗೆ ತಕ್ಕಂತೆ ಇರಲೆಂಬ ಕಾರಣದಿಂದ ಕಟ್ಟಿಸಿರುವ ದೊಡ್ಡದಾದ ಮನೆಯು ಒಂದು ಚಿಕ್ಕ ಅರಮನೆಯಂತೆಯಿದೆ. ಭವ್ಯವಾದ ಕಮಾನುಳ್ಳ ಮಹಾದ್ವಾರ, ಉದ್ದನೆಯ ಹುಸಿ, ವಿಶಾಲವಾದ ಪಡಸಾಲೆ, ಅದರ

ಮಧ್ಯದಲ್ಲಿ ತೂಗುವ ಮಂಚದ ಉಯ್ಯಾಲೆ, ಅಲ್ಲಿಂದ ನೇರವಾಗಿ ಒಳಗಡೆಗೆ ಹೋದರೆ ಇನ್ನೂ ವಿಶಾಲವಾದ ಪ್ರಾಂಗಣ, ಮನೆಗೆ ತಕ್ಕಷ್ಟು ಅಡುಗೆಮನೆ, ಊಟದ ಮನೆ, ದೇವರ ಮನೆ, ಸ್ನಾನದ ಮನೆ - ಮುಂತಾದ ಪ್ರತ್ಯೇಕ ವಿಶಾಲ ವ್ಯವಸ್ಥೆಗಳು ಇವುಗಳ ಜೊತೆಗೆ ವಿಶ್ರಾಂತಿ ಖೋಲಿಗಳು. ಇದೇ ಮನೆಯ ಒಂದು ಮೂಲೆಯಲ್ಲಿ ಮಹಡಿಯೇರಲು ಮೆಟ್ಟಲುಗಳು. ಕೆಳಗಿನ ವಿಶಾಲ ಮನೆಯಮೇಲೆ, ಅದೇ ಆಕಾರದ ಮಹಡಿಯಮನೆ. ಮುಂಭಾಗದ ಖೋಲಿಯನ್ನು ದಾಟಿಕೊಂಡು, ಒಳಗೆ ಹೋದರೆ, ಹಲವಾರು ಜನರು ಒಮ್ಮೆಲೇ ಆರಾಮವಾಗಿ ಕುಳಿತು ಸಭೆ ನಡೆಸಬಹುದಾದಷ್ಟು ವಿಶಾಲವಾದ ಪ್ರಾಂಗಣ. ಆ ಪ್ರಾಂಗಣಕ್ಕೆ ಹೊಂದಿಕೊಂಡು ವಿಶ್ರಾಂತಿ ಖೋಲಿಗಳು. ಆಗ ಗೌಡರು ಉಪಯೋಗಿಸುತ್ತಿದ್ದುದು ಇದೇ ಮಹಡಿಯನ್ನು, ಆ ಮಹಡಿಯನು, ಆ ಮಹಡಿಯಲ್ಲಿರುವ ಪ್ರತಿಯೊಂದು ವಸ್ತುವು ತನ್ನ ಗತಗಾಲದ ವೈಭವವನ್ನೂ ಸಾರುವ ಪ್ರತಿನಿಧಿಗಳಂತಿವೆ. ಮನೆಗೆ ಉಪಯೋಗಿಸಿರುವ ಬಹು ಬೆಲೆಬಾಳುವ ಸಾಗುವಾನಿ ಕಂಬ, ತೊಲೆ, ಹಲಗೆಗಳು, ಗೌಡರು ಕೂಡ್ರುವ ಆರಾಮ ಖುರ್ಚಿ, ಪುಸ್ತಕಗಳನ್ನು ಓರಣವಾಗಿ ಇಟ್ಟುಕೊಳ್ಳಲು, ಖುರ್ಚಿಯ ಪಕ್ಕದಲ್ಲಿಯೇ ಇರಿಸಿಕೊಂಡಿರುವ 'ಬುಕ್ ಶೆಲ್', ಮುಂತಾದುವೆಲ್ಲ ಗೌಡರ ಮನೆತನದ ಘನತೆಯನ್ನು ಸಾರಿ ಹೇಳುವಂತಿವೆ. ಆ ಹಜಾರದಲ್ಲಿ ನೇತಾಡುವ 'ಬಸವೇಶ್ವರ', 'ಧಾರವಾಡ ಮೃತ್ಯುಂಜಯಪ್ಪಗಳು', 'ಉರವಕೊಂಡೆ ಚೆನ್ನಬಸವೇಶ್ವರರ', 'ಚೆಳಗುರಿಕೆ ಎರ್ರಿತಾತ' ಮುಂತಾದ ಮಹಾತ್ಮರ ಭಾವಚಿತ್ರಗಳು, ಗೌಡರ ವೀರಶೈವ ಧಾರ್ಮಿಕ ಶ್ರದ್ದೆಯ ಕುರುಹುಗಳಾಗಿವೆ. ವೀರಶೈವ ಧರ್ಮದವರಾದ ಗೌಡರ ಕುಟುಂಬವೆಲ್ಲಾ ಶರಣ ಕುಟುಂಬ. ಶಿವಪೂಜಾ ನಿಷ್ಕರು, ಸಜ್ಜನರು, ಕಾಯಕ ಜೀವಿಗಳು. ಜೋಳದರಾಶಿಯ 'ಶ್ರೀ ರಾಮೇಶ'ನಲ್ಲಿ ಅಪಾರ ಭಕ್ತಿ. ಉರವಕೊಂಡೆಯ ಲಿಂ. ಚನ್ನಬಸವೇಶ್ವರರು ಗೌಡರ ಮನೆತನದ ಪೂಜನೀಯ ಗುರುಗಳು. ಧಾರವಾಡದ ಮುರುಘಾಮಠದ ಮೃತ್ಯುಂಜಯಪ್ಪಗಳೇ ಗೌಡರ ಆಧ್ಯಾತ್ಮಿಕ ಜೀವನದ ಪ್ರೇರಕರು. ಹಾಗಾಗಿ ಗೌಡರಿಗೆ ಶ್ರೀಗಳವರಲ್ಲಿ ಅಪಾರ ಭಕ್ತಿ. ಚೆಳ್ಳಗುರಿಕೆ ಎರ್ರಿತಾತನವರಲ್ಲಿಯೂ ಅಷ್ಟೇ ವಿಶ್ವಾಸ, ಭಕ್ತಿ.

ಗೌಡರ ಅತಿಥಿಸತ್ಕಾರ ಶ್ರದ್ದೆಯಂತೂ ಕೊನೆಯವರೆಗೂ ಹಾಗೆಯೇ ಉಳಿದು ಬಂದುದು ಗಮನಾರ್ಹ. ಅವರ ಮನೆಗೆ, ಅವರನ್ನು ಹುಡುಕಿಕೊಂಡು ಹೋಗುವ ಯಾರೇ ಆಗಲಿ, ಅತಿಥಿ ಸತ್ಕಾರಗಳಿಲ್ಲದೆ ಮರುಳುವಂತಿರಲಿಲ್ಲ. ಗೌಡರ ಸೋದರಳಿಯ ದಿ|| ಚನವೀರಗೌಡರು, ಸ್ವತಃ ಮುಂದಾಗಿ ನಿಂತು ಗೌಡರ ಪರವಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರು. ಆ ಮನೆತನದ ಸರಳ ಸೌಜನ್ಯ ಪೂರ್ಣ ಸ್ವಭಾವ ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ಯಾರಾದರೂ ಕಾಣಬಹುದಾಗಿದೆ.

# ೪. ಕಲಾಜೀವನ

ಗೌಡರು ಹುಟ್ಟಿದ್ದು ಒಂದು ಚಿಕ್ಕಹಳ್ಳಿಯ ರೈತ ಕುಟುಂಬದಲ್ಲಿ ಪಡೆದ ಶಿಕ್ಷಣ ತೀರಾ ಅತ್ಯಲ್ಪ ಇಂತಹದರಲ್ಲಿ ಕಲಾರಂಗದಲ್ಲಿ ಅವರು ಗೈದ ಸಾಧನೆ, ಏರಿದ ಎತ್ತರ ಯಾರನ್ನಾದರೂ ಬೆರಗುಗೊಳಿಸುವಂತಿದೆ. ಹಳ್ಳಿಯ ರೈತನ ಮಗನಿಗೂ, ಕಲೆಗೂ ಯಾವ ಸಂಬಂಧ! "ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ" - ಎನ್ನುವ ಪ್ರಭುದೇವರ ವಚನದ ಸಾಲನ್ನಿಲ್ಲಿ ಸ್ಮರಿಸಿಕೊಳ್ಳಬೇಕು. ಆ ಸಂಬಂಧ ಸೋಜಿಗದ ಸಂಬಂಧವಾದರೂ, ಅದರಲ್ಲಿರುವ ಅನ್ಯೂನ್ಯ ಬಾಂಧವ್ಯ ಅಷ್ಟೆ ಸತ್ಯವಾದುದಾಗಿದೆ. ರೈತನ ಮಗನಿಗೂ - ಕಲೆಗೂ ಇದೇ ರೀತಿಯ ಸಂಬಂಧ ಮೂಡಿ ಬಂದಿರಬೇಕು. ಕುತೂಹಲದಿಂದ ಯಾರಾದರೂ ಈ ಅನುಮಾನವನ್ನು ಪಡಬಹುದಾಗಿದೆ. ಶ್ರೀಮಂತಿಕೆಯ ಸಹವಾಸದಲ್ಲಂತು 'ಕಲೆ'ಗೆ ಅವಕಾಶವಿರುವುದು ತೀರ ವಿರಳವಾದುದು, ಸೋಜಿಗಕ್ಕೆ ಇನ್ನೊಂದು ಕಾರಣ. ಈ ಪ್ರಶ್ನೆಯನ್ನು ಗೌಡರಿಗೆ ಕೇಳಿದಾಗ ಮಾರ್ಮಿಕವಾದ ಉತ್ತರ ಬರುತ್ತದೆ.

"ನಮ್ಮದು ರೈತ ಮನೆತನ ನಿಜ. ರೈತರಿಗೆ ಕಲೆ ಗೊತ್ತಿರಬಾರದೇನು? ಅವರು ನಮಗೆ ಪರಿಚಿತವಿರುವ ಕಲೆ-ಪ್ರತಿಭೆ ಅಭಿನಯ ಇತ್ಯಾದಿ ಶಾಸ್ತ್ರೀಯ ಶಬ್ದಗಳ ಮೂಲಕ ಕಲೆಯನ್ನು ಗುರುತಿಸದೇ ಇರಬಹುದು. ಆದರೆ ಹಾಡುವುದು ಮತ್ತು ಬಯಲಾಟ ಮಾಡುವುದು ಸಾಮಾನ್ಯವಾಗಿ ಎಲ್ಲ ರೈತಮಕ್ಕಳಿಗೆ ಬಳುವಳಿಯಾಗಿ ಬಂದಿರುವ ಒಂದು ಗುಣ.... ಬಯಲಾಟ ಹಳ್ಳಿಗಳ ಏಕೈಕ ಕಲಾಪ್ರಕಾರವಾಗಿತ್ತು. ಅದರ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ, ಹೀಗೆ ಬಯಲಾಟವೇ ನನ್ನ ಕಲೆಯ ಹುಚ್ಚಿಗೆ ನಾಂದಿಯಾಯಿತು." ಎನ್ನುವ ಅವರ ಮಾತು ಸಹಜವಾದುದೇ ಆಗಿದೆ. ಹೀಗೆ ಹಳ್ಳಿಯ ಬಯಲಾಟದ ಹುಚ್ಚು ಹಿಡಿಸಿಕೊಂಡು ಬಾಲ್ಯದಲ್ಲಿಯೇ ರಂಗ ಪ್ರವೇಶಮಾಡಿ ಪ್ರಸಿದ್ಧ ನಾಟಕಕಾರ, ನಟ, ಗಾಯಕ, ನಿರ್ದೇಶಕ ಮತ್ತು ಗಮಕಿಯಾಗಿ ಹೆಸರು ಮಾಡಿರುವ ಗೌಡರ ಕಲಾ ಜೀವನ ಅನುಪಮವಾದುದು, ಸಾಗರಸದೃಶವಾದುದು. ನಾಡಿನ ಕಲೆಯ ಸೇವೆಗೈದು, ಆ ಕಲೆಯ ಕೀರ್ತಿ ವೈಭವಗಳನ್ನು ಉಳಿಸಿ-ಬೆಳೆಸಿಕೊಂಡು ಬಂದಿರುವ ಗೌರವ ಗೌಡರಿಗಿರುವಂತೆ, ಆ ಕಲೆಯ ಸಾಧನೆಯಿಂದ ಅನೇಕ ಬಿರುದು-ಬಿನ್ನಾಣಗಳು, ಪ್ರಶಸ್ತಿ - ಪದವಿಗಳು ಗೌಡರನ್ನರಿಸಿಕೊಂಡು ಬಂದು ಅವರನ್ನು ಗೌರವಿಸಿವೆ. ಕರ್ನಾಟಕ ಸಂಗೀತ-ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದುವು ಗೌಡರ ಕಲಾಸೇವೆಗಾಗಿ ಸಂದಗೌರವಗಳಾಗಿವೆ. ಈ ಎಲ್ಲ ಪದವಿಗಳಿಗೆ ಅಲಂಕರಣವೆಂಬಂತೆ ಗುಲ್ಬರ್ಗಾ ವಿಶ್ವವಿದ್ಯಾಲಯವು, ೧೯೮೫ರಲ್ಲಿ ಗೌರವ ಡಾಕ್ಟರೇಟ್ ಪದವಿನೀಡಿ, ಗೌಡರನ್ನೂ ತನ್ಮೂಲಕ ಅವರ ಕಲೆಯನ್ನೂ ಗೌರವಿಸಿದೆ. ಸಾಧಾರಣ ಬಯಲಾಟದ ಹುಡುಗನೊಬ್ಬ, ಉನ್ನತ ಪದವಿಗಳನ್ನು ಪಡೆಯುವಷ್ಟರ ಮಟ್ಟಿಗೆ ಬೆಳೆದ, ಗೌಡರ ಕಲಾ ಜೀವನ ಒಂದು ಸೋಜಿಗವೂ ಆಗಿರುವಂತೆ, ಅಭ್ಯಸನೀಯವೂ ಆಗಿದೆ. ಅವರ ಕಲಾ ಜೀವನ ಬಹುಮುಖ ಪ್ರತಿಭೆಯಿಂದ ಕೂಡಿದುದಾದುದರಿಂದ, ಪ್ರಧಾನವಾಗಿ ಎರಡು ಭಾಗಗಳಲ್ಲಿ ವಿಂಗಡಿಸಬಹುದಾಗಿದೆ.

೧. ನಾಟಕ ಕಲೆ, ೨. ಗಮಕ ಕಲೆ.

ಮೊದಲು 'ನಾಟಕ ಕಲೆ'ಯಲ್ಲಿ ಗೌಡರು ಗೈದಿರುವ ಸಾಧನೆಯನ್ನು ಕುರಿತೇ ನೋಡಬಹುದು.

**೧. ಗೌಡರ ನಾಟಕ ಕಲೆ :**

'ನಾಟಕ'ದ ರುಚಿ ಜನತೆಗಿನ್ನೂ ಗೊತ್ತಿರದ ಕಾಲದಲ್ಲಿ 'ಬಯಲಾಟ'ವೇ ಮನರಂಜನೆಯ ಸಾಧನವಾಗಿತ್ತು. ಕಾಲಾಂತರದಲ್ಲಿ 'ನಾಟಕ' ಸುಧಾರಿಸಿದವರದು, 'ಬಯಲಾಟ' ಹಳ್ಳಿಯ ಹುಂಬರದು ಎಂಬ ಮನೋಭಾವ ಮೂಡತೊಡಗಿತು. ಆದರೆ ಅವೆರಡು ವಿಭಿನ್ನ ಪ್ರಕಾರಗಳೆಂಬುದನ್ನು ಇಲ್ಲಿ ಮರೆಯುವಂತಿಲ್ಲ, ಗೌಡರು ಗಾಂಢೀವಿಯಂತೆ ಬಯಲಾಟ ಮತ್ತು ನಾಟಕಗಳೆರಡರಲ್ಲಿಯೂ ಕೃಷಿಗೈದವರು. ಆದರೆ ಅವರ ಬಹುಪಾಲು ಸೇವೆ ಸಂದುದು ಬಯಲಾಟಕ್ಕಿಂತಲೂ ನಾಟಕಕ್ಕೆ ಎಂದು ಹೇಳಬಹುದು.

ಚಿಕ್ಕ ಬಾಲಕನಾಗಿರುವಾಗಲೆ, ಅಜ್ಜಿಯ ಕೌದಿಯ ಆಸರೆಯಲ್ಲಿ ಮಂಚದ ಮೇಲೆ ಕುಳಿತು 'ಗಯನ ಕಥೆ' ಬಯಲಾಟವನ್ನು ನೋಡಿ, ಅದರ ಸ್ವಾರಸ್ಯವನ್ನು ಮೆಲುಕುಹಾಕಿದವರು ಗೌಡರು. ತಮ್ಮೂರ ಬಯಲಾಟದ ಮುಂದಾಳು ಮತ್ತು ಪ್ರಮುಖ ಪಾತ್ರಧಾರಿ ಹನುಮಂತಗೌಡರ ಉತ್ಸಾಹ, ಆಟದ ಹುಚ್ಚನ್ನು ಬಹುಸ್ವಾರಸ್ಯಮಯವಾಗಿ, ತಮ್ಮ ಆತ್ಮಚರಿತ್ರೆಯಲ್ಲಿ ನಿರೂಪಿಸಿದ್ದಾರೆ.

ಸುಮಾರು ಎಂಟುವರುಷದ ಬಾಲಕನಾಗಿರುವಾಗಲೆ 'ನಟಿ' ವೇಷದಲ್ಲಿ 'ರಂಗ' ವೇರಿದವರು ಗೌಡರು. ಸಣ್ಣ ಬಾಲಕನಿಗೆ, ದೊಡ್ಡದಾದ ಒಂದು ಪೀತಾಂಬರ ಸುತ್ತಿ, ಮೈತುಂಬ ಆಭರಣಗಳನ್ನು ಹಾಕಿ, ತಾಳಬಾರಿಸುವವರ ಜೊತೆ, ಮನಸ್ಸಿಗೆ ಬಂದಂತೆ ಕುಣಿಯುವುದೆ, ನಟಿ ವೇಷದ ಮಹಿಮೆ ಎಂದು ವಿನೋದವಾಡಿದ್ದಾರೆ.

ಸಮೀಪದ ಚೆಳ್ಳಗುರಿಕೆಯಲ್ಲಿ 'ರಾಮಾಯಣ' ನಾಟಕವನ್ನು ಏರ್ಪಾಡು ಮಾಡಿದಾಗ, ಗೌಡರು ತಮ್ಮ ತಾತನೊಂದಿಗೆ ಹೋಗಿ ಆ ನಾಟಕವನ್ನು ನೋಡಿಬಂದರು. ಮೊದಲು ನೋಡಿದ ಈ ನಾಟಕವು ಗೌಡರ ಮೇಲೆ ತುಂಬಾ ಪ್ರಭಾವವನ್ನು ಬೀರಿತು.

ನಾಟಕವೂ ಅಲ್ಲದ-ಬಯಲಾಟವೂ ಅಲ್ಲದ ಮಾದರಿಯಲ್ಲಿ 'ಲವ-ಕುಶ' ನಾಟಕವು ತಯಾರಾಗಿತ್ತು. ಅದರಲ್ಲಿ ಗೌಡರದು "ಲವ'ನ ಪಾತ್ರ, ನಾಟಕವು ತುಂಬಾ ಯಶಸ್ವಿಯಾಗಿ, ಬಹುಜನ ಮೆಚ್ಚುಗೆಯನ್ನು ಪಡೆಯಿತು. ಗೌಡರ ಅಭಿನಯ ಕಲೆಯನ್ನು ಕಂಡು ಅನೇಕರು ಪ್ರಶಂಸೆ ಮಾಡಿದರು. ಹೀಗೆ ಪ್ರಶಂಸೆಗೊಳಗಾಗಬಹುದಾದ ಅಭಿನಯ ಕಲೆ, ಗೌಡರಿಗೆ 'ರೂಢಿ'ಯಿಂದ ಬಂದುದಾಗಿರದೆ, ವಂಶ ಪಾರಂಪರ್ಯವಾಗಿ ಬಂದುದಾಗಿದೆ. ಹಿಂದೆಯೇ ಹೇಳಿದಂತೆ ಗೌಡರ ದೊಡ್ಡ ತಾತ ಬಯಲಾಟಗಳಲ್ಲಿ ಸ್ತ್ರೀ ವೇಷ ಹಾಕುವುದರಲ್ಲಿ ನಿಸ್ಸೀಮರಾಗಿದ್ದಂತೆ, ಅವರ ಸಣ್ಣತಾತ ಪುರುಷ (ನಾಯಕ) ಪಾತ್ರಗಳನ್ನು ಹಾಕುವುದರಲ್ಲಿ ಪ್ರಸಿದ್ಧರಾದವರು. ಗೌಡರ ತಂದೆಯವರು 'ನಟರಲ್ಲ ದಿದ್ದರು, 'ಕಲೆ'ಗೆ ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು. ಹೀಗೆ ಗೌಡರಿಗೆ ಅವರ ತಾತನ ಪ್ರೋತ್ಸಾಹವು 'ಅಭಿನಯ ಕಲೆ'ಯಲ್ಲಿ ಪರಿಣತಿಯನ್ನು ಪಡೆಯಲು ಕಾರಣವಾಗಿದೆಯೆಂಬುದನ್ನು ಮರೆಯುವಂತಿಲ್ಲ 'ಅಭಿನಯ ಕಲೆ' ಕಲಿತರೆ ಬರುವಂತಹದಲ್ಲವೆಂಬುದು, ಗೌಡರ ಸಹಜ ಅಭಿನಯ ಪರಿಣತಿಯನ್ನು ನೋಡಿದವರಿಗೆ ಅನ್ನಿಸದೆ ಇರಲಾರದು.

ಹೀಗೆ ಆಟ-ಪಾಠಗಳಲ್ಲಿ ಆಟ-ನಾಟಕಗಳಲ್ಲಿ ಗೌಡರ ಬಾಲ್ಯ ಕಳೆದು ಯೌವ್ವನಕ್ಕೆ ಕಾಲಿಟ್ಟಿದ್ದರು. ಆಗ ಅವರಿಗೆ ಹದಿನಾಲ್ಕು ವರುಷವಿರಬಹುದು. ಊರಿನ ಯುವಕರನ್ನು ಸೇರಿಸಿಕೊಂಡು ಹೊಸನಾಟಕ ಆಡುವುದೆಂದು ಯೋಚಿಸಿದರು.

## ಗರುಡ ಗರ್ವಭಂಗ :

ತಮ್ಮ ಯೋಜನೆಯ ಪ್ರಕಾರ 'ಗರುಡ ಗರ್ವಭಂಗ' ಎಂಬ ನಾಟಕವನ್ನು ಆಡುವುದೆಂದು ಗೊತ್ತಾಯಿತು. ಇದುವೇ ಗೌಡರು ಪ್ರದರ್ಶನಕ್ಕೆ ಎತ್ತಿಕೊಂಡ ಮೊದಲ ನಾಟಕ. ಆದರೆ ಮೊದಲ ನಾಟಕಕ್ಕೆ ಅನೇಕ ವಿಪತ್ತುಗಳು ಬಂದು 'ಗರುಡ ಗರ್ವಭಂಗ'ವಾಗದೆ, 'ಗೌಡನ ಗರ್ವಭಂಗ'ವಾಯಿತೆಂದು ಗೌಡರು ಹೇಳಿಕೊಂಡಿದ್ದಾರೆ. ಮೊದಲಸಾರಿ ನಾಟಕದ ಅಭ್ಯಾಸವನ್ನು ಪ್ರಾರಂಭಿಸಿದಾಗ, ಗೌಡರ ಸಣ್ಣತಾತ ಸಣ್ಣಹೊನ್ನನಗೌಡರು ತೀರಿಕೊಂಡರು. ಎರಡನೆಯ ಸಾರಿ ಪ್ರಾರಂಭಿಸಿದಾಗ ಗೌಡರ ತಂಗಿ ನೀಲಮ್ಮನಿಗೆ ಯಾವುದೊ ದೊಡ್ಡಕಾಯಿಲೆ ಬಂದು, ಪ್ರಾಣಾಂತಿಕ ಭಯವನ್ನು ತಂದೊಡ್ಡಿದುದರಿಂದ, ಅಲ್ಲಿಗೆ ನಾಟಕವನ್ನು ಕೈಬಿಡಲಾಯಿತು. ಮೂರನೇ ಸಾರಿ ನಾಟಕವನ್ನು ಕೈಗೆತ್ತಿಕೊಂಡಾಗ, ಗೌಡರ ತಂದೆ ಪಂಪನ ಗೌಡರು ಕಾಯಿಲೆ ಬಿದ್ದರು. ಇದರಿಂದ ಗಾಬರಿಯಾದ ಜನ, ಈ ನಾಟಕವನ್ನು ಆಡುವುದು ಬೇಡ ಎಂದು ಹೇಳತೊಡಗಿದರು. ನಾಟಕದ ಹನುಮಂತ ಗೌಡರು ಮುಂತಾದ ಊರಹಿರಿಯರು ಬಂದು ಬುದ್ಧಿವಾದ ಹೇಳಿದರೂ ಈ ಸಾರಿ ಗೌಡರು ತಮ್ಮ ಛಲ ಬಿಡದೆ ಆಟ ಆಡಿಯೇ ತೀರುವುದೆಂದು ನಿರ್ಧರಿಸಿದರು. ಆ ಪ್ರಕಾರ ಯಾವ ತೊಡಕು ಇಲ್ಲದೆ ನಾಟಕ ಅತ್ಯಂತ ಯಶಸ್ವಿಯಾಗಿ ಪ್ರಯೋಗ ಹೊಂದಿತೆಂದು ಹೇಳಿಕೊಂಡಿದ್ದಾರೆ. ಈ ನಾಟಕವು ಗೌಡರಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟಿತಲ್ಲದೆ; ಶ್ರೀಕೃಷ್ಣನ ಪಾತ್ರದಲ್ಲಿ ಕಾಣಿಸಿಕೊಂಡ ಗೌಡರ ಪಾತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ನಾಟಕ ಬೆಳಗಾಗುವವರೆವಿಗೂ ನಡೆದು, ನಾಟಕ ಮುಗಿದ ಮೇಲೆ ಮನೆಗೆ ಬಂದಾಗ, ಅವರ ಅಜ್ಜಿ ಗೌಡರ 'ದೃಷ್ಟಿ ತೆಗೆದು, ಮೊಮ್ಮಗನ ಅಭಿನಯ ಕಲೆಯನ್ನು ಕಂಡು, ಅಪಾರ ಸಂತಸಪಟ್ಟರಂತೆ.

ಈ ನಾಟಕದ ಯಶಸ್ಸು ಕಲಾವಿದರಿಗೆ ಸಾಕಷ್ಟು ಪ್ರೋತ್ಸಾಹ ನೀಡಿತು. ಬೇರೆಡೆಯು ಈ ನಾಟಕವನ್ನು ಆಡಬೇಕೆಂದು ಕೆಲವರು ತಮ್ಮ ಆಸೆಯನ್ನು ವ್ಯಕ್ತಪಡಿಸಿದರು. ಕೊನೆಗೆ ಗುಂತಕಲ್ಲಿನಲ್ಲಿ ಆಡುವುದೆಂದು ಆದ ನಿಶ್ಚಯದಂತೆ 'ಗರುಡ ಗರ್ವಭಂಗ'ವನ್ನು ಯಶಸ್ವಿಯಾಗಿ ಪ್ರಯೋಗಿಸಿದರು. ಗುಂತಕಲ್ಲಿನಲ್ಲಿ ಆ ನಾಟಕ ಹಣವನ್ನು ತರಲಿಲ್ಲವಾದರೂ, ಅಪಾರ ಕೀರ್ತಿಯನ್ನು ತಂದುಕೊಟ್ಟಿತು. ಹೀಗೆ ಗೌಡರ ನಾಟಕದ ಖಯಾಲಿ ಪರವೂರುಗಳನ್ನು ಸುತ್ತಿಸತೊಡಗಿತು.

ಜೋಳದರಾಶಿ ಗ್ರಾಮದ ಈ ಕಲಾವಿದರೆಲ್ಲಾ ರೈತಮಕ್ಕಳೇ ಆದುದರಿಂದ ನಾಟಕದ ಉತ್ಪತ್ತಿಯ ಮೇಲೆಯೇ ಅವಲಂಬಿಸಬೇಕಾದ ಪ್ರಸಂಗವಿರಲಿಲ್ಲ. ಅಲ್ಲದೆ, ಕೃಷಿಕಾಯಕವನ್ನು ಪೂರೈಸಿಕೊಂಡು, ಸುಗ್ಗಿಮುಗಿದ ಮೇಲೆ ಸಿಗುವ, ಬಿಡುವಿನ ದಿನಗಳಲ್ಲಿ ಅಂದರೆ ವರ್ಷದಲ್ಲಿ ಮೂರು ತಿಂಗಳು ನಾಟಕಗಳಲ್ಲಿ ಪಾಲುಗೊಳ್ಳಲು

ಸಾಧ್ಯವಾಗುತ್ತಿತ್ತು. ಜೊತೆಗೆ, ಕೆಲವು ಪ್ರಮುಖ ಜಾತ್ರೆಗಳು, ಉತ್ಸವಗಳು ಇರುವ ಕಡೆಗೂ ಹೋಗಿ, ಎಂಟು-ಹತ್ತು ದಿನಗಳ ಮಟ್ಟಿಗೆ ನಾಟಕವಾಡಿ ಬರತೊಡಗಿದರು. ಆಗೆಲ್ಲ 'ಸರ್ವಜನ ಮನೋರಂಜನ ಕರ್ನಾಟಕ ನಾಟಕ ಸಭಾ' ಎಂಬ ತಂಡವನ್ನು ಕಟ್ಟಿಕೊಂಡು ತಿರುಗಲಾಗುತ್ತಿತ್ತು. 'ಗರುಡ ಗರ್ವಭಂಗ'ದ ಯಶಸ್ಸಿನ ಜೊತೆಗೆ, ಹೊಸ ಹೊಸ ಬೇರೆ ಬೇರೆ ನಾಟಕಗಳನ್ನು ಕಲಿತು ಆಡತೊಡಗಿದರು. ಅವುಗಳಲ್ಲಿ 'ಜಲಂಧರ' “ಚವತಿ ಚಂದ್ರ' 'ಶಾಪವಿಮೋಚನೆ' ಮುಂತಾದ ನಾಟಕಗಳನ್ನು ಹೆಸರಿಸಬಹುದು. ಈ ನಾಟಕ ತಂಡವು ಬಳ್ಳಾರಿ - ಆದವಾನಿ - ರಾಯಚೂರ - ಕೊಪ್ಪಳ ಉರವಕೊಂಡ ಮುಂತಾದ ಪ್ರಮುಖ ಸ್ಥಳಗಳನ್ನು ಸುತ್ತಿ ಬಂದಿದೆ. ಅಲ್ಲಲ್ಲಿ ಯಶಸ್ವಿ ಪ್ರಯೋಗಗಳನ್ನು ನೀಡಿ ಪುರಸ್ಕಾರಗಳನ್ನು ಪಡೆದುಬಂದಿದೆ.

'ಗರುಡ ಗರ್ವಭಂಗ'ದ ಯಶಸ್ಸು ಜೋಳದರಾಶಿ ಕಲಾವಿದರನ್ನು ಸುಮ್ಮನೆ ಇರಗೊಡಲಿಲ್ಲ 'ಜಲಂಧರ' ಎಂಬ ಇನ್ನೊಂದು ನಾಟಕವನ್ನು ಕಲಿತು, ಮೊದಲ ನಾಟಕದೊಂದಿಗೆ, ಸಮೀಪದ ಉರವಕೊಂಡೆ ಕರಿಬಸವೇಶ್ವರ ಜಾತ್ರೆಯಲ್ಲಿ ಆಡುವುದೆಂದು ತೀರ್ಮಾನಿಸಿದರು. ಆಗ ನಾಟಕ ಕಂಪನಿಯ ಹೆಸರನ್ನು 'ಶ್ರೀ ಗವಿಮಠ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ' ಎಂದು ಬದಲಾಯಿಸಿಕೊಂಡರು. 'ಗರುಡ ಗರ್ವಭಂಗ'ದಲ್ಲಿ ಕೃಷ್ಣನಾಗಿ 'ಜಲಂಧರ'ದಲ್ಲಿ ನಾರದನಾಗಿ ಗೌಡರು ಯಶಸ್ವಿ ಅಭಿನಯ ನೀಡಿ ಅಪಾರ ಜನಮೆಚ್ಚುಗೆ ಪಡೆದರು.

## ನಾಟಕದ ಫಜೀತಿ ಪ್ರಸಂಗಗಳು :

ಈ ಕಲೆಯ ಹುಚ್ಚು ಗೌಡರನ್ನು ಅನೇಕ ಪ್ರಸಂಗಗಳಲ್ಲಿ ಫಜೀತಿಗೀಡು ಮಾಡಿದೆ. ಜೋಳದರಾಶಿಯ ಉತ್ಸಾಹಿ ನಾಟಕದ ಮುಖಂಡ, 'ಹನುಮಂತಗೌಡನು ಗೌಡರಿಗೆ ಬೇತಾಳದಂತೆ ಬೆನ್ನುಹತ್ತಿದ್ದ ಹನುಮಂತಗೌಡನ ಮಗನ ಹೆಂಡತಿ ತೀರಿಹೋದುದರಿಂದ, ಅವನಿಗೆ ಎರಡನೆ ಮದುವೆ ಮಾಡಲು ಗೌಡ ಯೋಚಿಸಿದ. ಮದುವೆ ಸಹಾಯಾರ್ಥ ನಾಟಕಗಳನ್ನು ಆಡಿಕೊಡುವಂತೆ ಗೌಡರನ್ನು ವಿನಂತಿಸಿಕೊಂಡ. ಅವನ ವಿನಂತಿಯ ಮೇರೆಗೆ ನಾಟಕವಾಡಿದ ಪ್ರಸಂಗಗಳಲ್ಲಿ ಎಂದಿಗೂ ಮರೆಯದ ಫಜೀತಿಗೊಳಗಾಗಿ, ಇನ್ನು ನಾಟಕವೇ ಬೇಡ ಎನ್ನಿಸುವಂತಾದ ಪ್ರಸಂಗಗಳನ್ನು ಗೌಡರು ಬಹುಸ್ವಾರಸ್ಯಪೂರ್ಣವಾಗಿ ಹೇಳಿಕೊಂಡಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ನೋಡಬಹುದು.

“ಆ ಮೊದಲು ಸುತ್ತಿದ ಊರುಗಳಲ್ಲಿ 'ನಾಟಕ' ಮತ್ತೆ ಸುತ್ತಿದಾಗ ಸರಿಯಾದ ಪ್ರೋತ್ಸಾಹ ದೊರೆಯಲಿಲ್ಲ ಅಲ್ಲಿಂದ ತಿರುಗಿ 'ಜೋಳದರಾಶಿ'ಗೆ ಹೊರಡುವುದೇ ಉತ್ತಮವೆಂಬ ಗೌಡರ ಸಲಹೆಯನ್ನು ಹನುಮಂತಗೌಡ ಒಪ್ಪಿಕೊಳ್ಳದೆ, ಆದವಾನಿ ಕ್ಯಾಂಪ್ ಮಾಡಿದ. ಅಲ್ಲಿಗೆ ಬರುವ ಪೂರ್ವದಲ್ಲಿ 'ಯಾದಗಿರಿ' ಕ್ಯಾಂಪ್ ಮಾಡಿದಾಗ, ಊಟಕ್ಕೂ ಗತಿಯಿಲ್ಲದ ಪ್ರಸಂಗ ಒದಗಿಬಂದಿತ್ತು. ಅಲ್ಲಿ ಕೆಲವು ನಟರು ಬಿಟ್ಟು ಹೋದರು, ಕಂಟ್ರಾಕ್ಟುದಾರ ಓಡಿಹೋದ. ನಾಟಕ ಮಂದಿರದ ಒಡೆಯ, ಗೌಡರ ನಾಟಕದ ಸಾಮಾನುಗಳನ್ನು ಕೊಡದಾದ. ಇದರಲ್ಲಿ ಊರಿನ ಉಭಯ ಪಕ್ಷಗಳ ರಾಜಕೀಯ ಬೇರೆ ಬೆರೆತುಕೊಂಡಿತು. ಊರಲ್ಲಿ ಹಾಲಿನವರಿಗೆ, ಕಟ್ಟಿಗೆ, ಕಿರಾಣಿಯವರಿಗೆ

ಕೊಡುವ ಬಾಕಿಯಿತ್ತು. ಅವರ ಬಾಕಿ ತೀರಿಸದೆ ಊರುಮುಟ್ಟುವಂತಿರಲಿಲ್ಲ. ಅಂತು ಹೇಗೊ ನಾಟಕದ ಸಾಮಾನುಗಳೊಂದಿಗೆ, ರಾತ್ರಿ ಒಂದು ಗಂಟೆಗೆ ಹೊರಡುವ ರೈಲಿಗೆ 'ಹೇಳದೆ ಕೇಳದೆ ಹೊರಟುಬಂದು ರಾಯಚೂರು ಸೇರಬೇಕಾಯಿತು. ಅಲ್ಲಿ ಅವರಿವರ ನೆರವಿನಿಂದ ಹೇಗೊ 'ಜೋಳದರಾಶಿ'ಗೆ ಬಂದು ಸೇರಲಾಯಿತು' ಎಂದು ಜೀವನದಲ್ಲೇ ಮರೆಯದ ಈ ಘಟನೆಯನ್ನು ಗೌಡರು ವಿವರವಾಗಿ ಹೇಳಿಕೊಂಡಿದ್ದಾರೆ. ಹನುಮಂತಗೌಡನಿಗೆ ಉಪಕಾರಮಾಡಲು ಹೋಗಿ ಫಜೀತಿಗೊಳಗಾದುದು ನಾಟಕದ ಹುಚ್ಚಿನಿಂದಲೇ ಎಂಬುದನ್ನು ಗಮನಿಸಬೇಕು.

ಇನ್ನೊಂದು ಪ್ರಸಂಗ ಬಹುಸ್ವಾರಸ್ಯಕರವಾಗಿದೆ. ಸಂದರ್ಭ 'ಗರುಡ ಗರ್ವಭಂಗ' ನಾಟಕ. ಸತ್ಯಭಾಮೆ ಮುನಿಸಿನಿಂದ 'ಕೃಷ್ಣನನ್ನು ಒಡೆಯುವ ಪ್ರಸಂಗ. 'ಕೃಷ್ಣನ ಪಾತ್ರದಲ್ಲಿ ಗೌಡರು, 'ಸತ್ಯಭಾಮೆ'ಯ ಪಾತ್ರದಲ್ಲಿ ಲಕ್ಷ್ಮಿ ನಾಟಕ ಪ್ರದರ್ಶನದ ಮರುದಿನ ಲಕ್ಷ್ಮಿ ಗೌಡರ ಮನೆಗೆ ನಿತ್ಯದಂತೆ ಊಟಕ್ಕೆ ಬಂದಾಗ, ಗೌಡರ ಅಜ್ಜಿ ನಾಗಮ್ಮಮ್ಮ "ನಮ್ಮ ಮನೆ ಅನ್ನತಿಂದು, ನಮ್ಮ ಹುಡುಗನನ್ನೇ ಒದಿಯುತ್ತಿಯೇನೆ' ಎಂದು ಲಕ್ಷ್ಮಿಯನ್ನು ಹೊಡೆಯಲು ಬಂದಾಗ, ಗೌಡರು ಮಧ್ಯಪ್ರವೇಶ ಮಾಡಿ ಫಜೀತಿಯನ್ನು ತಪ್ಪಿಸಬೇಕಾಯಿತಂತೆ. ನಾಗಮ್ಮವ್ವ ಗೌಡರ ಮೇಲೂ ಕೋಪಗೊಂಡು ಇಂತವಳ ಕಡೆಯಿಂದ ಒದೆಸಿಕೊಳ್ಳುವುದಕ್ಕೆ ನಿನಗೆ ನಾಚಿಕೆ ಆಗೋದಿಲ್ಲೇನೊ' ಎಂದು ಬೈದರಂತೆ. ಅನಂತರ ಆ ಸನ್ನಿವೇಶವನ್ನು ಮಾರ್ಪಡಿಸಿಕೊಳ್ಳಲಾಯಿತು ಎಂದು ಗೌಡರು ಬಹು ಸ್ವಾರಸ್ಯಕರವಾಗಿ ಹೇಳಿಕೊಂಡಿದ್ದಾರೆ.

## ಬಳ್ಳಾರಿ ರಾಘವರ ಸಂಪರ್ಕ :

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಬಳ್ಳಾರಿ ರಾಘವರದು ಬಹುದೊಡ್ಡ ಹೆಸರು. ಅಂದಿನ ಕಾಲದಲ್ಲಿಯೇ ಅವರು ಪ್ರಸಿದ್ಧ ವಕೀಲರು ಆಗಿದ್ದಂತೆ, ಹೆಸರಾಂತ ನಟ ಮತ್ತು ನಿರ್ದೇಶಕರು ಆಗಿದ್ದರು. ಆಕಸ್ಮಿತವಾಗಿ ರಾಘವರು ಒಮ್ಮೆ ಗೌಡರ ಅಭಿನಯವನ್ನು ನೋಡಬೇಕಾಗಿ ಬಂತು. ಗೌಡರ ಪ್ರತಿಭೆಯನ್ನು ಕಂಡು ರಾಘವರು ಬಹುವಾಗಿ ಮೆಚ್ಚಿಕೊಂಡರು. ಅವರಿಬ್ಬರ ಆ 'ಸಂಗಮ' ಕನ್ನಡ ರಂಗಭೂಮಿಯ ಸುದೈವವೆಂದೇ ಹೇಳಬೇಕು. ಅಂದಿನಿಂದ ಗೌಡರು ರಾಘವರನ್ನು ತಮ್ಮ ಗುರುಗಳೆಂದೇ ಸ್ವೀಕರಿಸಿದರು. ರಾಘವರ 'Bellary Art lovers League' ಮೂಲಕ, ತರುವಾಯದಲ್ಲಿ ಅವ್ಯಾಹತವಾಗಿ ನಾಟಕ ಚಟುವಟಿಕೆಗಳು ನಡೆದುಬಂದ 'ಗುರು-ಶಿಷ್ಯ'ರ ೀ ಸಂಬಂಧ ಒಂದು ಯೋಗಾಯೋಗವೇ ಸರಿ.

## ರಾಘವರೊಂದಿಗೆ ಗೌಡರ ಅಭಿನಯ :

ರಾಘವರ ಆಹ್ವಾನದ ಮೇರೆಗೆ ಬಳ್ಳಾರಿಗೆ ಹೋಗಿ 'ಮಾರ್ಕಂಡೇಯ' ನಾಟಕದಲ್ಲಿ ನಾರದನ ಪಾತ್ರವನ್ನು ಗೌಡರು ಯಶಸ್ವಿಯಾಗಿ ಅಭಿನಯಿಸಿದರು. ಈ ಪಾತ್ರದ ಯಶಸ್ಸಿಗೆ 'ಸಂಗೀತ'ವು ಒಂದು ಮುಖ್ಯ ಕಾರಣವಾಗಿತ್ತು.

ಗೌಡರು ಗೌಳಸ್ವರದಿಂದ, ಎತ್ತರದ ಧ್ವನಿಯಲ್ಲಿ ಸುಸ್ತರವಾಗಿ ಹಾಡಬಲ್ಲವರಾಗಿದ್ದರಿಂದ, ನಾರದನ ಪಾತ್ರಕೆ ಹೆಚ್ಚಿನ ಕಳೆಯೇರಿತು. ರಾಘವರೊಂದಿಗಿನ ಮೊದಲ ನಾಟಕದಲ್ಲಿಯೆ ಯಶಸ್ವಿಯಾದರು.

ಇಲ್ಲಿಂದ ಮುಂದೆ, ತಡೆರಹಿತ ರೈಲಿನಂತೆ, ರಾಘವರೊಂದಿಗೆ ಗೌಡರ ನಾಟಕದ ತಿರುಗಾಟ ಸಾಗಿತು. ಅವರೊಂದಿಗೆ ಆಂಧ್ರದ ಅನೇಕ ಊರುಗಳನ್ನು ಸುತ್ತಿ ನಾಟಕ ಪ್ರದರ್ಶನ ನೀಡಬೇಕಾಯಿತು. ಹೋದಲ್ಲೆಲ್ಲಾ ಯಶಸ್ಸು ಕಟ್ಟಿಟ್ಟ ಬುತ್ತಿ ಎನುವಂತಾಯಿತು. ಆಂಧ್ರದ ಊರುಗಳಲ್ಲೆಲ್ಲಾ ತುಳು ನಾಟಕಗಳನ್ನು ಆಡಲಾಗುತ್ತಿತ್ತು. ಗೌಡಗೆ ತೆಲುಗು ಭಾಷೆಯು ಚೆನ್ನಾಗಿ ಬರುತ್ತಿತ್ತಾದ್ದರಿಂದ ಯಾವ ತೊಂದರೆಯೂ ಕಾಡಲಿಲ್ಲ ಬಹುತೇಕ ಕಡೆಗಳಲ್ಲಿ ತೆಲುಗು 'ರಾಮದಾಸ' ನಾಟಕವನ್ನು ಆಡಲಾಗುತ್ತಿತ್ತೆಂದು ಗೌಡರು ಹೇಳಿಕೊಂಡಿದ್ದಾರೆ. ಈ ನಾಟಕದ ಪ್ರಮುಖ ಪಾತ್ರವಾದ 'ರಾಮದಾಸ'ನಾಗಿ ರಾಘವರು ಕಾಣಿಕೊಂಡರೆ, ಇನ್ನೊಂದು ಪ್ರಮುಖ ಪಾತ್ರವಾದ 'ಕಬೀರ್'ನ ಪಾತ್ರದಲ್ಲಿ ಗೌಡರು ಕಾಣಿಸಿಕೊಳ್ಳುತ್ತಿದ್ದರು. 'ರಾಮದಾಸ' ನಾಟಕ ಆಂಧ್ರದಲ್ಲೆಲ್ಲಾ ಜಯಭೇರಿ ಹೊಡೆಯಿತು. ಆಂಧ್ರಪ್ರದೇಶದ ಬಿಜವಾಡ, ಗುಂಟೂರು, ಪೀಠಾಪುರಂ, ತೆನಾಲಿ, ಗುಡಿವಾಡ ಮುಂತಾದ ಪ್ರಮುಖ ಪಟ್ಟಣಗಳಲ್ಲಿ ನಾಟಕ ಪ್ರದರ್ಶನ ನೀಡಲಾಗುತ್ತಿತ್ತು. 'ರಾಮದಾಸ' ನಾಟಕದೊಂದಿಗೆ ಪ್ರಹ್ಲಾದ, ಚಾಣಕ್ಯ, ಸಾರಂಗಧರ, ಪಾದುಕಾ, ಮುಂತಾದ ನಾಟಕಗಳ ಪ್ರದರ್ಶನ ನೀಡಲಾಗುತ್ತಿತ್ತು. ಇವುಗಳಲ್ಲೆಲ್ಲಾ ಕಬೀರ್, ನಾರದ, ರಾಮ, ಸುಬುದ್ಧಿ, ಚಂದ್ರಗುಪ್ತ ಮುಂತಾದ ಪಾತ್ರಗಳಲ್ಲಿ ಗೌಡರು ಕಾಣಿಸಿಕೊಂಡಿದ್ದಾರೆ.

ರಾಘವರ ನಿರ್ದೇಶನದಂತೆ ರಚಿಸಿದ 'ಕನಕದಾಸ' ಎಂಬ ನಾಟಕವನ್ನು ಬಳ್ಳಾರಿಯಲ್ಲಿ ದಿನಾಂಕ: ೧೭-೭-೧೯೪೦ರಲ್ಲಿ ಯಶಸ್ವಿಯಾಗಿ ಅಭಿನಯಿಸಲಾಯಿತು. ಹೀಗೆ ರಾಘವರ ಸಂಪರ್ಕ ಗೌಡರಿಗೆ ವರದಾನವಾಗಿ ಪರಿಣಮಿಸಿತು. ಆಗಾಗ ಬೇರೆ ಕಂಪನಿಯ (ಸ್ನೇಹಿತರ) ನಾಟಕಗಳಲ್ಲಿಯೂ ಗೌಡರು ಅಭಿನಯಿಸುತ್ತಿದ್ದರು. ಆಗ ತಮ್ಮ ಸ್ವಂತ ನಿರ್ದೇಶನದಲ್ಲಿಯೇ ಹಲವಾರು ನಾಟಕಗಳನ್ನು ಪ್ರಯೋಗಿಸಿದುದುಂಟು.

## ರಾಘವರ ಮರಣ :

ಆಂಧ್ರದ ನಾಡಿನೊಂದಿಗೆ, ಕನ್ನಡ ನಾಡಿನಲ್ಲಿಯೂ ರಾಘವರು ನಾಟಕಗಳನ್ನು ಆಡಿ ಗೌಡರೊಂದಿಗೆ ಹೆಸರುಗಳಿಸಿದರು. ಬಳ್ಳಾರಿಯೇ ಅವರ ಕೇಂದ್ರಸ್ಥಳವಾಗಿತ್ತು. ಈ ಮಧ್ಯೆ ಅವರು ವಿದೇಶ ಪ್ರವಾಸವನ್ನು ಕೈಕೊಂಡು ನಾಟಕಕಲೆಯ ಬಗೆಗೆ ಹೆಚ್ಚಿನ ಮಾಹಿತಿ ಮಾಡಿಕೊಂಡು ಬಂದಿದ್ದರು. ಆದರೆ ಅನಾರೋಗ್ಯ ಅವರನ್ನು ಹೆಚುದಿನ ಬಾಳಗೊಡಲಿಲ್ಲ ರಾಘವರು ೧೯೪೬ರ ಆಗಸ್ಟ್‌ನಲ್ಲಿ ಇಹಲೋಕ ಯಾತ್ರೆ ಮುಗಿಸಿದರು. ರಾಘವರ ಮರಣ, ಗೌಡರ ಬದುಕಿನಲ್ಲಿ ತುಂಬಲಾರದ ನಷ್ಟ ಆಯಿತೆಂಬುದು ಉತ್ಪ್ರೇಕ್ಷೆಯ ಮಾತಲ್ಲ

## ಕ್ರಾಂತಿಪುರುಷ ಬಸವಣ್ಣ:

ಕ್ರಿ.ಶ. ೧೯೪೮ರ ಜನವರಿಯಲ್ಲಿ ಗೌಡರು 'ಕ್ರಾಂತಿಪುರುಷ ಬಸವಣ್ಣ' ಎಂಬ ಸ್ವರಚಿತ ನಾಟಕವನ್ನು ಜೋಳದರಾಶಿಯಲ್ಲಿ ಅತ್ಯಂತ ವೈಭವದಿಂದ ಪ್ರಯೋಗಿಸಿದರು. ಆದರೆ ಈ ನಾಟಕಕ್ಕೆ ವಸ್ತು ನಿರ್ದೇಶನ ಮಾಡಿ, ನಾಟಕ ರಚಿಸುವಂತೆ ಪ್ರೋತ್ಸಾಹಿಸಿದ ರಾಘವರೇ ಈ ಸೊಬಗನ್ನು ಕಾಣಲು ಬದುಕಿರಲಿಲ್ಲದಿದ್ದುದು ಒಂದು ದೊಡ್ಡ ಕೊರತೆಯೆನಿಸಿತ್ತು. ಮಹಾಪುರುಷ ಬಸವಣ್ಣನ ನಾಟಕದ ರಚನೆಯ ಕಾಲಕ್ಕೆ ಅನೇಕ ಪಂಡಿತರ ಅಭಿಪ್ರಾಯಗಳನ್ನು ಪಡೆಯಲಾಗಿತ್ತು. ಪ್ರೊ॥ ಶಿ.ಶಿ. ಬಸವನಾಳ, ಪಂ.ವೈ. ನಾಗೇಶಶಾಸ್ತ್ರಿ ಮುಂತಾದವರ ಸಲಹೆಯಂತೆ, ನಾಟಕವನ್ನು ಹೆಣೆಯಲಾಗಿತ್ತು. ಈ ಹಿಂದೆ ಜೋಳದರಾಶಿಯ ನಾಟಕ ತಂಡ ಏಳು-ಬೀಳುತ್ತ ೧೯೨೭ರಿಂದ ೧೯೩೮ ರವರೆಗೆ, ಅಖಂಡವಾಗಿ ೧೧ ವರುಷಗಳವರೆಗೆ, ನಾಟಕಗಳನ್ನಾಡಿ ಮಲಗಿಕೊಂಡಿತ್ತು. ಅದಕ್ಕೀಗ ಮತ್ತೆ ಚಾಲನೆ ದೊರೆತಂತಾಗಿತ್ತು. ಹಿಂದಿನ ಕೆಲವು ನಟರು ತೀರಿಹೋಗಿದ್ದರಿಂದ, ಅವರ ಸ್ಥಾನದಲ್ಲಿ ಹೊಸಬರನ್ನು ಸೇರಿಸಿಕೊಳ್ಳಲಾಯಿತು. ಟಿ.ಕುಮಾರಸ್ವಾಮಿಯವರ ಹಾರ್ಮೋನಿಯಂ, ಸಿಡಿಗಿನಮಳೆ ಚಂದ್ರಯ್ಯನವರ ಉತ್ಸಾಹಗಳೊಂದಿಗೆ ನಾಟಕಕ್ಕೆ ಹೆಚ್ಚಿನ ಕಳೆಮೂಡಿತ್ತು. ಸತತ ನಾಲ್ಕುತಿಂಗಳ ಅಭ್ಯಾಸದೊಂದಿಗೆ, ಕ್ರಿ.ಶ. ೧೯೪೮ರಂದು ಈ ನಾಟಕ ಅತ್ಯಂತ ಯಶಸ್ವಿಯಾಗಿ ಪ್ರಯೋಗವಾಯಿತು. ಈ ನಾಟಕದಲ್ಲಿ ಗೌಡರು 'ಬಸವೇಶ್ವರ'ರ ಪಾತ್ರದಲ್ಲಿ ಕಾಣಿಸಿಕೊಂಡು ಸಮರ್ಥ ಅಭಿನಯ ನೀಡಿದರು.

ನಾಟಕವೇನೂ ಯಶಸ್ವಿಯಾಗಿ ನೆರವೇರಿತಾದರೂ ಆ ಪೂರ್ವದಲ್ಲಿ ಕೆಲವು ಅಹಿತಕರ ಘಟನೆಗಳು ಜರುಗಿ ಯಾವ ದುರಂತವೂ ಸಂಭವಿಸದೆ ಮಂಗಲಮಯವಾಗಿ ಪರ್ಯವಸಾನಗೊಂಡಿದ್ದವು. ಹೆಣ್ಣುಮಕ್ಕಳಿಗೆ ಬಯ್ಯುತ್ತಿದ್ದ ಮನೆಯ ಪಕ್ಕದಾತನನ್ನು ಹೊಡೆದು, ಅವನಿಂದ ಗೌಡರು ತಾವೂ ಹೊಡೆಸಿಕೊಂಡಿದ್ದರು. ಈ ವಾರ್ತೆ ತಿಳಿದು ಗೌಡರ ಪರವಾದ ಜನರು ಗುಂಪುಸೇರಿ, ಹೊಡೆದವನನ್ನು ಮುಗಿಸಿ ಬಿಡುವಷ್ಟು ಕೋಪೋದ್ರಿಕ್ತರಾಗಿದ್ದರು. ಆಗ ಅವರನೆಲ್ಲ ತಡೆಯಬೇಕಾದರೆ ಗೌಡರಿಗೆ ಸಾಕುಸಾಕಾಗಿ ಹೋಯಿತು. 'ಕೋಪ'ವೆಂಬ ವೈರಿಯನ್ನು ನೆನೆದು ಪಶ್ಚಾತ್ತಾಪಗೊಂಡರು. ಇಲ್ಲಿ ನಡೆದ ಪ್ರಸಂಗವನ್ನು ಬಹಳ ಬಿಚ್ಚು ಮನಸ್ಸಿನಿಂದ ಹೇಳಿಕೊಂಡಿರುವುದು, ಗೌಡರ ಪ್ರಾಮಾಣಿಕತೆಯ ದ್ಯೋತಕವಾಗಿದೆ. ನಾಟಕದ ಬಯಲು ಹಿಡಿಯದಷ್ಟು ಜನರು ಸೇರಿದಾಗ, ಎಲ್ಲಿಂದಲೋ ಒಂದು ಹಾವು ನುಸುಳಿ ಬಂತು. ಯಾರಿಗೂ ತೊಂದರೆಯಾಗಲಿಲ್ಲ ಹಾವು ಕೂಡ ಜೀವಂತವಾಗಿ ಪಾರಾಗಿ ಹೋಯಿತು. ನಾಟಕ ನೋಡಲು ಬಂದ ಗೌಡರ ಸ್ನೇಹಿತರ ತಂಗಿಯೋರ್ವಳು, ಮಾಳಿಗೆಯ ಮೇಲಿಂದ ಬಿದ್ದಳಾದರೂ, ಅವಳಿಗೆ ಏನೂ ತೊಂದರೆಯಾಗಲಿಲ್ಲ ನಾಟಕದ ಪಾತ್ರಧಾರಿಯೊಬ್ಬ ಸೈಕಲ್ ಮೇಲಿಂದ ಬಿದ್ದು ಪೆಟ್ಟುತಿಂದನಾದರೂ, ಪಾತ್ರವಹಿಸಲು ಸಮರ್ಥನಾಗಿದ್ದ ಇಂತಹ ಅಡೆತಡೆಗಳು ಸರಮಾಲೆಯಂತೆ ಸಾಲುಗಟ್ಟಿಬಂದರೂ, ಬಂದಂತೆ ಪರಿಹಾರವಾಗಿ ಹೋದುದು, ಒಂದು ಪವಾಡ ಸದೃಶ ಸೋಜಿಗದಂತಾಗಿದೆ - ಎಂದು ಗೌಡರು ಆತ್ಮಚರಿತ್ರೆಯಲ್ಲಿ ಸುದೀರ್ಘವಾಗಿ ಹೇಳಿಕೊಂಡಿದ್ದಾರೆ. ಹೀಗೆ ಗೌಡರ ಮೌನದ ಬಹುಪಾಲು ರಂಗಭೂಮಿ ಸೇವೆಯಲ್ಲಿಯೇ ಕಳೆಯಿತೆಂಬುದನ್ನು ಗಮನಿಸಬೇಕು.

**ಪ್ರಶಂಸೆ-ಪ್ರಶಸ್ತಿಗಳು :**

ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಬಹುಭಾಗಗಳಲ್ಲಿ ಸುತ್ತಿ ನಾಟಕಗಳನ್ನಾಡಿದ ಗೌಡರ ಕಲಾಜೀವನವನ್ನು ಮೆಚ್ಚಿ ಅನೇಕ ಪ್ರಶಂಸೆಯ ಮಾತುಗಳು ಮತ್ತು ಪ್ರಶಸ್ತಿಗಳು ಬಂದಿರುವುದು ಸ್ವಾಭಾವಿಕವಾದುದೇ ಆಗಿದೆ.

**'ಕೈಲಾಸಂ' ಪ್ರಶಂಸೆ :**

ಜೋಳದರಾಶಿಯವರ 'ಜಲಂಧರ' ನಾಟಕದ ರಿಹರ್ಸಲ್ ಬಳ್ಳಾರಿಯಲ್ಲಿ ನಡೆಯುತ್ತಿದ್ದುದು ರಾಘವರಿಗೆ ತಿಳಿದಿತ್ತು. ರಾಘವರು ತಮ್ಮ ಬಂಗಲೆಯಲ್ಲಿ ರಿಹರ್ಸಲ್ ನಡೆಸುವಂತೆ ಆಮಂತ್ರಣ ನೀಡಿದ ಮೇರೆಗೆ, ಹಾಗೆ ಮಾಡಲಾಗಿತ್ತು. ಆಗ ಗೌಡರಿಗೆ ರಾಘವರ ಪರಿಚಯವಿರಲಿಲ್ಲವಾದರೂ ರಾಘವರು ಅಭಿನಯವನ್ನು ನೋಡಿ ಮೆಚ್ಚಿಕೊಂಡು, ಪ್ರೋತ್ಸಾಹಿಸಿ, ಕೆಲವು ಸೂಚನೆಗಳನ್ನು ನೀಡಿ ಕಳುಹಿಸಿಕೊಡುತ್ತಿರುವಾಗ, ಕತ್ತಲಲ್ಲಿ ಕೂತಿದ್ದ ಒಬ್ಬ ವ್ಯಕ್ತಿ ಗೌಡರ ಕೈಹಿಡಿದು ಮೇಲೆದ್ದು ನಿಂತುಕೊಂಡರು. ಅವರು ಬೇರೆಯವರಾಗಿರದೆ ಅಂದಿನ ಪ್ರಸಿದ್ಧ ಹೆಸರಾಂತ ನಾಟಕಕಾರ ಟಿ.ಪಿ.ಕೈಲಾಸಂ ಅವರೇ ಆಗಿದ್ದರು. ಈ ಪ್ರಸಂಗವನ್ನು ಗೌಡರು ಹೀಗೆ ವಿವರಿಸಿದ್ದಾರೆ :

"....ಬಾಗಿಲು ಪಕ್ಕದ ಕತ್ತಲಲ್ಲಿ ಕೂತ ಟಿ.ಪಿ. ಕೈಲಾಸಂರವರು ನನ್ನ ಕೈ ಹಿಡಿದು ನಿಲ್ಲಿಸಿದರು. ನಾನು ಗಾಬರಿಯಾಗಿ 'ಯಾರಪ್ಪಾ ಎಂದು ನೋಡಿದಾಗ 'ನೀವು ದೊಡ್ಡ ಡಾಕ್ಟ್ರು ಗೌಡರೆ' ಎಂದರು. ಅವರನ್ನು ನೋಡಿದ್ದೆ ಮಾತಾಡಿರಲಿಲ್ಲ ... ಸಾರ್ ನನಗೇನೂ ಗೊತ್ತು ನಾನೊಬ್ಬ ಹಳ್ಳಿಯ ಮುಕ್ಕ' ಎಂದೆ. 'ಹೌದು ಅದಕ್ಕೆ ನಿನ್ನ ಯೋಗ್ಯತೆ ನಿಂಗೊತ್ತಿಲ್ಲ. ನಿಜವಾಗಿ ನೀವು ದೊಡ್ಡ ಡಾಕ್ಟ್ರು' ಎಂದು ಪ್ರೀತಿಯಿಂದ ಮಮಕಾರದಿಂದ ಹಿಡಿದ ಕೈಯನ್ನು ಒತ್ತಿ ಹೇಳಿದರು" ಎಂದು ಬರೆದುಕೊಂಡಿದ್ದಾರೆ. ಕೈಲಾಸಂರವರ ಪ್ರಶಂಸೆ, ಕೇವಲ ಪ್ರಶಂಸೆಯಾಗಿರದೆ, ವಾಸ್ತವವಾದ ಮಾತಾಗಿತ್ತು ಎಂಬುದು ಗೌಡರನ್ನು ಬಲ್ಲ ಯಾರಿಗಾದರೂ ಅರ್ಥವಾಗುತ್ತದೆ. ಕೈಲಾಸಂ ಅವರು ಪ್ರಶಂಸಿಸಿದರೆಂದು ಗೌಡರು ಹಿಗ್ಗದೆ, ಆತ್ಮ ನಿರೀಕ್ಷಣೆ ಮಾಡಿಕೊಂಡಿರುವುದುಂಟು.

**ರಾಘವರು ಅಪ್ಪಿಕೊಂಡರು :**

ಮದ್ರಾಸ್ ಗವರ್ನರರ ಆದೇಶದಂತೆ 'ಯುದ್ಧನಿಧಿ'ಗಾಗಿ ಅನಂತಪುರ, ಕರ್ನೂಲ ನಾಟಕಗಳನ್ನು ಮುಗಿಸಿಕೊಂಡು, ಬಳ್ಳಾರಿಯಲ್ಲಿ 'ಕನಕದಾಸ' ನಾಟಕದ ಪ್ರದರ್ಶನ ನೀಡಲು ಬಂದರು. ಆಗ ರಂಗತಯಾರಿ ಸರಿಯಾಗಿ ಆಗಿರಲಿಲ್ಲ ನಾಟಕ ಸರಿಯಾಗಲಾರದೆಂಬುದು ಗೌಡರಿಗೆ ಮನವರಿಕೆಯಾಗಿತ್ತು. ಹೇಗೊ ನಾಟಕ ಪ್ರಾರಂಭವಾಯಿತು. ತಿಮ್ಮಪ್ಪನಾಯಕನು ಕನಕದಾಸನಾಗಿ ಮಾರ್ಪಾಡಾದಾಗಿನ ಸಂದರ್ಭದಲ್ಲಿ ಆ ಸಂದರ್ಭಕ್ಕೆ ತಕ್ಕ ಹಾಡನ್ನು ಹಾಡುತ್ತ ಗೌಡರು ರಂಗದಮೇಲೆ ಬಂದು, ತನ್ಮಯತೆಯಿಂದ ಭಕ್ತಿಯಿಂದ ಹಾಡುತ್ತಿದ್ದಾಗ, ರಾಘವರು ನೇರವಾಗಿ ರಂಗದ ಮೇಲೆಯೇ ಬಂದು ಗೌಡರನ್ನು ಬಿಗಿದಪ್ಪಿಕೊಂಡರು - "...ಹಾಡು ಮುಗಿಯುವ

ದರಲ್ಲಿತ್ತು. ನಾನು ಆಶ್ಚರ್ಯಗೊಂಡೆ. ಪ್ರೇಕ್ಷಕರು ಆ ಘಟನೆಯಿಂದ ಚಕಿತರಾದರು. 'ಇವರು ಗೌಡರಲ್ಲ ಕನಕದಾಸರು. ತಮ್ಮನ್ನು ತಾವು ಮರೆತು ಭಕ್ತಿಯಿಂದ ಭಗವಂತನ ಕೃಪೆಗೆ ಪಾತ್ರವಾದ ಇವರ ಕೀರ್ತನೆಗಳನ್ನು ಕೇಳಿ ನನಗಾದ ಆನಂದವನ್ನು ತಡೆಯಲಾಗಲಿಲ್ಲ. ಇದೊಂದು ನಮ್ಮ ದೇಶದ ಭಕ್ತಿಯ ಕಲಾರತ್ನ ಆಳಿವಿಲ್ಲದ ಬೆಳಗಿನಿಂದ ಸದಾ ಬಾಳಲು ಪ್ರೇಕ್ಷಕರು ಆಶೀರ್ವದಿಸಬೇಕು ಎಂದು ಪ್ರೇಕ್ಷಕರ ಕಡೆಗೆ ತಿರುಗಿ ಆನಂದ ತುಂದಿಲ ಗದ್ಗದದಿಂದ ಹೇಳಿದಾಗ, ತುಂಬಿದ ಸಭೆಯ ಕಣ್ಣಲ್ಲಿ ಆನಂದ ಬಾಷ್ಪಗಳು ತುಳುಕಾಡಿ ಕರತಾಡನದಿಂದ ಆಶೀರ್ವದಿಸಿದರು'' ಎಂದು ಹೇಳಿಕೊಂಡಿರುವ ಗೌಡರು, ಅದೇ ಸಂದರ್ಭದಲ್ಲಿ ರಾಘವರಿಗೆ ಶಿರಬಾಗಿ ಕೈಮುಗಿದು ಕೃತಜ್ಞತೆ ಅರ್ಪಿಸಿದೆ ಎಂದೂ ಹೇಳಿಕೊಂಡಿದ್ದಾರೆ. ಗೌಡರ ಮಾತಿನಲ್ಲಿ ಅವರ ಕಲೆಯ ಹಿರಿಮೆಯನ್ನು ಅದಕ್ಕೆ ಅನುಗುಣವಾದ ವಿನಯಸಂಪನ್ನತೆಯನ್ನು ಗುರುತಿಸಬಹುದಾಗಿದೆ.

ಇನ್ನೊಂದು ಸಲ ರಾಘವರ ಪರೀಕ್ಷೆಗೊಳಗಾಗಬೇಕಾಗಿ ಬಂದುದನ್ನು ಇಲ್ಲಿ ನೋಡಬಹುದು: ರಾಯಚೂರಿನಲ್ಲಿ 'ಮಾರ್ಕಂಡೇಯ' ನಾಟಕ ನಡೆದ ಪ್ರಸಂಗವದು. ಇಲ್ಲದ ಸನ್ನಿವೇಶವನ್ನು ಸೃಷ್ಟಿಸಿಕೊಂಡು ರಾಘವರು ರಂಗದಮೇಲೆ ಬಂದರು. ಇನ್ನೊಂದು ಬದಿಯಿಂದ ಬರುವಂತೆ ಗೌಡರಿಗೆ ಮೊದಲೆ ತಿಳಿಸಿದ್ದರು. ಸುರುವಾಯಿತು ಸನ್ನಿವೇಶ, ನಾಟಕಕ್ಕೆ ಹೊಸ ಪ್ರಸಂಗವಾದುದರಿಂದ ಗೌಡರಿಗೆ ಏನೂ ತಿಳಿಯದು. ಆದಾಗ್ಯೂ ರಾಘವರು ಮಾತನಾಡಿದಂತೆ, ಪ್ರಸಂಗವನ್ನರಿತು ಮಾತನಾಡತೊಡಗಿದರು. ಸನ್ನಿವೇಶ ಯಶಸ್ವಿಯಾಗಿ ನೆರವೇರಿತು. ಈ ಪ್ರಸಂಗ ಹೊಸದೆನ್ನುವುದು ಗೊತ್ತಿದ್ದವರಿಗೆ ಮಾತ್ರ ಗೊತ್ತು. ಉಳಿದವರಿಗೆ, ನಾಟಕದ ಒಂದು ಭಾಗವೇ ಎನ್ನುವಷ್ಟರಮಟ್ಟಿಗೆ ಸಹಜವಾಗಿತ್ತು. ಈ ಪ್ರಸಂಗದ ಮೇಲಿಂದ ಗೌಡರ ಸಮಯ ಪ್ರಜ್ಞೆಯ ಪ್ರತಿಭೆಯನ್ನು ಗುರುತಿಸಬಹುದಾಗಿದೆ.

ಗೌಡರ ಅಭಿನಯದ ಹುಚ್ಚು ಸಾಮಾನ್ಯ ಪ್ರೇಕ್ಷಕನಿಗೂ ಹೊರತಾಗಿರಲಿಲ್ಲ. ಒಂದು ಸಲ ರಾಯಚೂರಿನಲ್ಲಿ ನಾಟಕವಾಡಿದ ಮರುದಿನ ಒಬ್ಬ ವ್ಯಕ್ತಿ "ಗ್ರೀನ್‌ರೂಂ'ನಲ್ಲಿ ನುಸುಳಿಬಂದವನು, ದೊಡ್ಡನಗೌಡರು ಯಾರು ಎಂದು, ದೊಡಗೌಡರನ್ನೇ ಕೇಳಿದಾಗ, ವಿನೋದಕ್ಕಾಗಿ, 'ಅವರಿಲ್ಲ ಎಂದು ಗೌಡರು ಹೇಳಿದರು. ಆಗ ಆತ ತನ್ನೊಳಗೆ ತಾನು ಮೆಚ್ಚಿಕೆಯ ಉತ್ಸಾಹದ ದ್ಯೋತಕವಾಗಿ ತಲೆದೂಗಿ "ಆತ ಆಡ್ತಾನಪ್ಪಾ ಯೇನಾಡ್ತಾನಪ್ಪ.... ಆತ ಆಡ್ತಿದ್ರೆ ರೈಲು ಕೂಗಿದಾಂಗಾಗ್ತದರ್ರಿ'' ಎಂದು ತನ್ನ ಮೆಚ್ಚುಗೆಯನ್ನು ತಟ್ಟನೆ ನುಡಿದ. ....ಅಂದು ಹಾಗೆ ಹಾಡುತ್ತಿದ್ದೆ" ಎನ್ನುವ ಗೌಡರ ಮಾತಿನಲ್ಲಿ ಉತ್ತೇಕ್ಷೆಯೇನಿಲ್ಲ. ಹೀಗೆ ಎಲ್ಲ ವರ್ಗದ ಪ್ರೇಕ್ಷಕರಿಗೂ ಗೌಡರ ಅಭಿನಯದ ಬಗೆಗೆ ಮೆಚ್ಚುಕೆಯಿತ್ತು. ಅಭಿನಯದ ಜೊತೆಗೆ, ಸುಮಧುರವಾದ ಅವರ ಹಾಡುಗಾರಿಕೆ ಬೆರೆತದ್ದು 'ಕಬ್ಬಿನ ಮೇಲೆ ಜೇನಿಟ್ಟಂತಾಗಿತ್ತು' ಅಂದರೆ ಅಂದಿನ ನಾಟಕಗಳಲ್ಲಿ ಸಂಗೀತವೇ ಪ್ರಧಾನವಾಗಿತ್ತೆಂಬುದನ್ನು ಗಮನಿಸಬೇಕು. ಗೌಡರ ರಂಗಭೂಮಿಯ ಸೇವೆ ೧೯೭೨ರ ವರೆಗೂ ನಡೆದುಕೊಂಡು ಬಂದಿದೆ - ಎಂಬುದನ್ನು ಗಮನಿಸಿದಾಗ ಯಾರಿಗಾದರೂ ಆಶ್ಚರ್ಯವಾಗದಿರದು. ಇದರಿಂದಾಗಿ ಅವರ ಆರೋಗ್ಯವು ಸರಿಯುಳಿಯಲಿಲ್ಲ. ಹುಟ್ಟು ಕಲಾವಿದರಾದ ಗೌಡರಿಗೆ ಆರೋಗ್ಯಕ್ಕಿಂತಲೂ ಕಲೆ ಪ್ರಧಾನವಾಗಿತ್ತೆಂಬುದನ್ನು ನೆನೆದಾಗ ಸೋಜಿಗವೆನಿಸುತ್ತದೆ,

ಹೆಮ್ಮೆಪಡುವಂತಾಗುತ್ತದೆ. ಅವರ ರಂಗಭೂಮಿಯ ಸೇವೆಯನ್ನು ಗುರುತಿಸಿ, ಅನೇಕ ಸಂಘ-ಸಂಸ್ಥೆಗಳು ಅವರಿಗೆ ಮೆಚ್ಚುಗೆಯ ಪ್ರಶಸ್ತಿ-ಗೌರವವನ್ನಿತ್ತು ಸನ್ಮಾನಿಸಿವೆ. ಅವೆಲ್ಲವುಗಳನ್ನು ಇಲ್ಲಿ ಹೇಳಲಾಗದಿದ್ದರೂ, ಕೆಲವು ಪ್ರಮುಖವಾದವುಗಳನ್ನು ನೋಡಬಹುದಾಗಿದೆ:

೧. ಕ್ರಿ.ಶ. ೧೯೬೪ರಲ್ಲಿ ಅನಂತಪುರದ 'ಆಂಧ್ರನಾಟಕ ಕಳಾಪರಿಷತ್ತಿನ ಪರವಾಗಿ 'ವಿಜಯಪತ್ರ' ನೀಡಿ ಸನ್ಮಾನಿಸಲಾಗಿದೆ.

೨. ಗೌಡರ ರಂಗಭೂಮಿಯ ಸೇವೆಯನ್ನು ಗುರುತಿಸಿ, ೧೯೬೬ರಲ್ಲಿ "ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯವರು 'ರಾಜ್ಯಪ್ರಶಸ್ತಿ' ನೀಡಿ ಗೌರವಿಸಿದ್ದಾರೆ.

೩. ಇದೇ ಸೇವೆಗೆ ೧೯೮೬ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

೪. ಗುಂತಕಲ್ಲು ರೇಲ್ವೆ ಇಲಾಖೆಯವರು ತಮ್ಮ 'ಕಲಾಸಮಿತಿ'ಯ ಪರವಾಗಿ ಸನ್ಮಾನಿಸಿದ್ದಾರೆ.

೫. ಹೈದರಾಬಾದ್ ತೆಲುಗು ವಿಶ್ವವಿದ್ಯಾಲಯದವರು 'ಗೌಡರನ್ನು ಅವರ ಕಲಾ ಸೇವೆಗಾಗಿ ಸನ್ಮಾನಿಸಿದ್ದಾರೆ. ಕನಕದಾಸರ ನಾಲ್ಕನೆ ಶತಮಾನೋತ್ಸವ (೮.೫.೧೯೬೫) ಸಂದರ್ಭದಲ್ಲಿ ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ಅಂದಿನ ಮೈಸೂರು ರಾಜ್ಯದ ಸಾರಿಗೆ ಮಂತ್ರಿಗಳಾಗಿದ್ದ ದೇವರಾಜ ಅರಸರ ಅಧ್ಯಕ್ಷತೆಯಲ್ಲಿ 'ಕನಕದಾಸ' ನಾಟಕ ರಚನೆಗಾಗಿ, ಗೌಡರನ್ನು ಗೌರವಿಸಿ ಸತ್ಕರಿಸಲಾಗಿದೆ.

## ಗೌಡರು ರಚಿಸಿರುವ ನಾಟಕ ಕೃತಿಗಳು :

ಗೌಡರು ಹಲವು ನಾಟಕ ಕೃತಿಗಳನ್ನು ರಚಿಸಿದ್ದು ಒಂಬತ್ತು ನಾಟಕಗಳು - ಪ್ರಕಟಗೊಂಡಿವೆ. ಒಂದು ಅಪ್ರಕಟಿತ ನಾಟಕವಿದೆ. ಅವುಗಳು ಹೀಗಿವೆ :

* ತುಕಾರಾಮ್ (ಅಪ್ರಕಟಿತ)
* ಕನಕದಾಸ
* ಕ್ರಾಂತಿಪುರುಷ ಬಸವಣ್ಣ
* ದೊಡ್ಡನಗೌಡರ ನಾಟಕಗಳು (ಮಾಯಾಪ್ರಭಾವ, ಶಿವನಾಣೆ, ಜಾಗೃತಿ)
* ಜೋಳದರಾಶಿಯವರ ಮೂರು ನಾಟಕಗಳು

(ನೊಡೋರ ನಾಟಕ, ಅಭಯ, ಸಾಯದವನ ಸಮಾs)

'ಕ್ರಾಂತಿಪುರುಷ ಬಸವಣ್ಣ' ನಾಟಕವನ್ನು ಆಂಧ್ರದ ತೆಲುಗು ವಿಶ್ವವಿದ್ಯಾಲಯದವರು, ಕನ್ನಡ, ತೆಲುಗು ಉಭಯ ಭಾಷೆಗಳುಳ್ಳ ಸಂಯುಕ್ತ ಕೃತಿಯನ್ನಾಗಿ ಪ್ರಕಟಿಸಿದ್ದಾರೆ. ಈ ಕೃತಿಯ ತೆಲುಗು ಅನುವಾದವನ್ನು ಜೋಳದರಾಶಿ ಚಂದ್ರಶೇಖರ ರೆಡ್ಡಿಯವರು ಮಾಡಿದ್ದಾರೆ.

## ಗೌಡರ ಮೆಚ್ಚಿಕೆಯ ಪಾತ್ರಗಳು :

ಗೌಡರು ಪ್ರತಿಯೊಂದು ಪಾತ್ರದಲ್ಲಿಯೂ ತನ್ಮಯತೆಯಿಂದ ಅಭಿನಯಿಸುತ್ತಿದ್ದರಾದರೂ, ವಿಶೇಷ ಮೆಚ್ಚುಗೆಗೆ ಪಾತ್ರವಾದ ಪಾತ್ರಗಳೆಂದರೆ, ಕೃಷ್ಣ, ನಾರದ, ಬಸವಣ್ಣ, ಕನಕದಾಸ, ಕಬೀರದಾಸ, ಕುರುಡನ ಪಾತ್ರ ಮುಂತಾದುವೆಂದು ಹೇಳಬಹುದು.

## ಪ್ರಮುಖ ನಾಟಕಕಾರರಲ್ಲಿ ಗೌಡರು :

ರಂಗಭೂಮಿಯಲ್ಲಿ ಹವ್ಯಾಸಿ ಮತ್ತು ವೃತ್ತಿರಂಗಭೂಮಿ ಎಂಬೆರಡು ಕಂದಕಗಳು ಹಾಗೆ ಉಳಿದುಕೊಂಡು ಬಂದಿವೆ. 'ಹವ್ಯಾಸಿ'ಗಳಲ್ಲಿಯೂ ಪ್ರಯೋಗಶೀಲ, ಕಲಾತ್ಮಕ ಮುಂತಾಗಿ ಪ್ರಕಾರಗಳನ್ನು ಮಾಡಿಕೊಂಡಿರುವುದುಂಟು.

ವೃತ್ತಿರಂಗಭೂಮಿಯ ಅಂದಿನ ಹಿರಿಯರಾದ ಗುಬ್ಬಿ ವೀರಣ್ಣನವರು, ಗರೂಡ ಸದಾಶಿವರಾಯರು, ಆರ್. ನಾಗೇಂದ್ರರಾಯರು - ಮುಂತಾದವರೆಲ್ಲ ಗೌಡರಿಗೆ ಪರಿಚಿತರು. ಇವರೆಲ್ಲರ ನೇತೃತ್ವದಲ್ಲಿ ಗೌಡರು ಬಳ್ಳಾರಿ ಜಿಲ್ಲಾ ನಾಟಕ ಕಳಾಪರಿಷತ್ತುಗಳನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ಈ ಹಿರಿಯರ ಸಾಲಿನಲ್ಲಿ ಗೌಡರ ಹೆಸರನ್ನು ಅಷ್ಟೇ ಎತ್ತರದಲ್ಲಿ ಪರಿಗಣಿಸಲಾಗುತ್ತದೆ.

ಹವ್ಯಾಸಿ - ಪ್ರಯೋಗಶೀಲ ಮನೋವೃತ್ತಿಯ ನಾಟಕಕಾರರಲ್ಲಿ 'ಶ್ರೀರಂಗರು, ಕೈಲಾಸಂ, ಪರ್ವತವಾಣಿ ಮುಂತಾದವರನ್ನು ಹೆಸರಿಸಬಹುದು. ಇವರಲ್ಲಿ ಕೈಲಾಸಂ ರವರಂತೂ ಗೌಡರಿಗೆ ಪರಿಚಿತರು. ಈ ಲೇಖಕರ ಮತ್ತು ಗೌಡರ ಪ್ರಯೋಗಗಳಲ್ಲಿ ಅಂತರ ಇದ್ದೇಯಿದೆ ಎಂಬುದನ್ನು ಗೌಡರೇ ಒಪ್ಪಿಕೊಂಡಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆ ಮತ್ತು ಅದಕ್ಕೆ ಗೌಡರು ನೀಡಿದ ಉತ್ತರ ಹೀಗಿದೆ :

“ನೀವು ರಂಗಭೂಮಿಯಲ್ಲಿ ಮಿಂಚುತ್ತಿದ್ದ ಕಾಲದಲ್ಲಿಯೇ ಕೈಲಾಸಂ ಮತ್ತು ಶ್ರೀರಂಗರು ಹೊಸತರದ ನಾಟಕಗಳನ್ನು ಬರೆದು ಒಂದು ಕ್ರಾಂತಿಯನ್ನೇ ಮಾಡಿದರಲ್ಲ ನಿಮಗೇನನಿಸುತ್ತದೆ?”

“ಕೈಲಾಸಂ ನನಗೆ ತುಂಬಾ ಪರಿಚಿತರು. ಅವರನ್ನು ಹತ್ತಿರದಿಂದ ಬಲ್ಲೆ ನೂತನವಾದ ಅರ್ಥಗರ್ಭಿತವಾದ ಅವರ ನಾಟಕಗಳನ್ನು ನೋಡುವ ಜನರೇ ಬೇರೆ. ಅದೊಂದು 'ಕ್ಲಾಸ್' ಈ ಕ್ಲಾಸಿನ ಜನರನ್ನು ಬಿಟ್ಟು ಅವರ ನಾಟಕಗಳನ್ನು ಸಾಮಾನ್ಯರಿಗೆ ಅರ್ಥಮಾಡಿಕೊಳ್ಳಲಾಗಲಿಲ್ಲ. ಅವು ಅವರಿಗೆ ಹಿಡಿಸಲಿಲ್ಲ, ಹೀಗಾಗಿ ಕೈಲಾಸಂ ನಾಟಕಗಳು ಎಂದೂ ಬಹಿರಂಗ ಮಾರ್ಕಟ್ಟಿಗೆ ಬರದೆ ಕೇವಲ ಸ್ಕೂಲ್ ಹುಡುಗರ ನಾಟಕಗಳಾಗಿ ಉಳಿದವು.” ಎಂದಿರುವ ಗೌಡರ ಮಾತನ್ನು ಯಥಾವತ್ತಾಗಿ ಒಪ್ಪಿಕೊಳ್ಳಲಾಗದಿದ್ದರೂ, ಅದರಲ್ಲಿ ಸತ್ಯಾಂಶವಂತೂ ಇದ್ದೇಯಿದೆ ಎನ್ನುವದನ್ನು ಗುರುತಿಸಬಹುದು.

## ನಾಟಕದ ಮೇಲೆ ಸಿನೇಮಾ ಹಾವಳಿ :

ಸಿನೇಮಾಗಳು ಬಂದು ನಾಟಕಗಳ ಪ್ರಭಾವ ಕುಗ್ಗಿತೆಂಬುದು ಯಾರಾದರೂ ಒಪ್ಪಬಹುದಾದ ಮಾತು. ಈ ಕಾರಣದಿಂದಲೇ ಗೌಡರ ರಂಗಭೂಮಿಯ ಸೇವೆಯು ಕುಂಠಿತವಾಯಿತಲ್ಲದೆ, ಗೌಡರ ನಿರುತ್ಸಾಹದಿಂದಲ್ಲವೆಂದು ಹೇಳಬಹುದು. ಇದಲ್ಲದೆ ಗೌಡರು ಸಿನೇಮಾ ತಯಾರಿಸುವ ಸಾಹಸಕ್ಕಿಳಿದು, ಸಾಕಷ್ಟು ದಣಿದು ಕೈಸುಟ್ಟುಕೊಂಡು ಕೈಬಿಟ್ಟಿದ್ದಾರೆ. ಸಿನೇಮಾ ತಯಾರಿಸುವ ಈ ಕಾರ್ಯದಲ್ಲಿ ಅವರ ನಾಟ್ಯಗುರು ಬಳ್ಳಾರಿ ರಾಘವರು ಮಾತ್ರ ನೆರವಾಗಲಿಲ್ಲ. ಹಾಗೆಂದು ಕೆಲವು ದಿನ ಗೌಡರು ರಾಘವರೊಡನೆ ಮುನಿಸಿಕೊಂಡಿದ್ದರು ಕೂಡ.

## ಗಮಕ ಕಲೆ :

ಗೌಡರು ನಾಟಕಕಾರರಾಗಿ ಹೆಸರು ಮಾಡಿರುವಂತೆ, ಗಮಕಿಗಳಾಗಿಯು ಅಷ್ಟೇ ದೊಡ್ಡ ಹೆಸರು ಮಾಡಿದ್ದವರು. ಅವರ ಸಾಧನೆಯ ಫಲವಾಗಿ ಅವರಿಗೆ 'ಗಮಕ ಕಲಾನಿಧಿ', 'ಗಮಕ ಗಂಧರ್ವ' ಎಂಬ ಬಿರುದುಗಳನ್ನಿತ್ತು ಸನ್ಮಾನಿಸಲಾಗಿದೆ. 'ಗಮಕಕಲಾನಿಧಿ - ಜೋಳದ ರಾಶಿ ದೊಡ್ಡನಗೌಡ'ರೆಂದೇ ಅವರು ಪ್ರಸಿದ್ದರಾಗಿದ್ದರು.

ಗಮಕ ಕಲೆ ಗೌಡರಿಗೆ ಬಾಲ್ಯದಿಂದಲೇ ಮೈಗೂಡಿಕೊಂಡು ಬಂದುದು ಎಂಬುದನ್ನು ಈಗಾಗಲೇ ನೋಡಲಾಗಿದೆ. ಮಠಪತಿ ರುದ್ರಯ್ಯನವರೇ ಗೌಡರ ಗಮಕಕಲೆಯ ಮೊದಲ ಗುರುಗಳು. ಆದರೆ ಆ ಕಲೆಯನ್ನು ಒಂದು ಹವ್ಯಾಸಿ ಪ್ರವೃತ್ತಿಯನ್ನಾಗಿಸಿಕೊಂಡದ್ದು ಮಾತ್ರ ಬಾಲ್ಯದಿಂದಲ್ಲ ನಾಟಕದ ಬಗೆಗಿನ ಅಪಾರ ಪ್ರೇಮವೆ 'ಗಮಕ ಕಲೆ'ಯನ್ನು ಮೊದಮೊದಲು ಕೈಬಿಡಲು ಕಾರಣವಾಗಿದೆ. ನಾಟಕಕ್ಕೆ ಸಂಗೀತ ಅವಿಭಾಜ್ಯ ಅಂಗವಾಗಿರುವುದರಿಂದ, ಹಾಡುಗಾರಿಕೆಯ ರೂಢಿ ಮೊದಲಿನಿಂದಲೂ ಗೌಡರಿಗಿತ್ತು. ಅವರು ಕೇವಲ ನಾಟಕಕಾರರಾಗಿರದೆ, ಸಾಹಿತಿಗಳು, ಆಗಿರುವುದರಿಂದ, ಕಾವ್ಯವಾಚನ ಮಾಡುತ್ತ ಆನಂದಪಡುತ್ತಿದ್ದರು. ಅಕಸ್ಮಾತ ಕೆಲವು ಸ್ನೇಹಿತರು ಗೌಡರ ಈ ಅದ್ಭುತ ಕಲೆಯನ್ನು ಕೇಳಿ ಮೆಚ್ಚಿ, ತಮ್ಮಂತೆ ಆಸಕ್ತರಾದ ಇತರರಿಗೂ ಕೇಳಿಸಬೇಕೆಂದು ಆಸೆಪಟ್ಟರು. ಅವರೆಲ್ಲರ ಆಸೆಯ ಫಲವಾಗಿ, ಗೌಡರು ಅಲ್ಲಲ್ಲಿ ಕಾವ್ಯವಾಚನ ಮಾಡತೊಡಗಿದರು. ನಾಡಿನ ತುಂಬ ಈ ವಿಷಯ ಮನೆವಾರ್ತೆಯಾಗಿ, ಜನರ ಒತ್ತಾಯಕ್ಕೆ ಮಣಿದು, ಗೌಡರು ನಾಡನ್ನೆಲ್ಲಾ ಸುತ್ತಿ, ಗಮಕ ಸೇವೆ ಮಾಡಬೇಕಾಗಿ ಬಂದುದು, ನಮ್ಮ ನಾಡಿನ ಸುದೈವವೆಂದೇ ಹೇಳಬೇಕು.

ಗೌಡರು ಮೂಲತಃ ನಾಟಕದ ಮನುಷ್ಯರಾದುದರಿಂದ, ಕಾವ್ಯವಾಚನ ಕಾಲದಲ್ಲಿ ಸ್ಪಷ್ಟ ಉಚ್ಚಾರ ಪದಗಳ ವಿಭಜನೆ, ಭಾವಕ್ಕೆ ತಕ್ಕ ರಾಗ ಜೋಡಣೆ ಮುಂತಾದವು, ಸಹಜವಾಗಿಯೇ ಮೂಡಿಬಂದು, ತುಂಬಾ ಪರಿಣಾಮಕಾರಿಯೆನಿಸಿದವು. ಕೆಲವೇ ದಿನಗಳಲ್ಲಿ ಗೌಡರು ನಾಡಿನ ಸುಪ್ರಸಿದ್ಧ ಗಮಕಿಗಳ ಸಾಲಿನಲ್ಲಿ ಒಬ್ಬರಾದರು.

## ಗಮಕಕ್ಕೆ ಅಳವಡಿಸಿಕೊಂಡ ಪ್ರಮುಖ ಕಾವ್ಯಗಳು :

ಗೌಡರು ಗಮಕಕ್ಕೆ ಅಳವಡಿಸಿಕೊಂಡಿದ್ದ ಪ್ರಮುಖ ಕಾವ್ಯಗಳೆಂದರೆ, ರನ್ನನ 'ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರಕಾವ್ಯ' ಭೀಮಕವಿಯ 'ಬಸವಪುರಾಣ', ಕುಮಾರವ್ಯಾಸನ 'ಗದುಗಿನ ಭಾರತ', ಷಡಕ್ಷರಿಯ 'ರಾಜಶೇಖರ ವಿಳಾಸ', ಕುವೆಂಪು ಅವರ 'ರಾಮಾಯಣದರ್ಶನಂ' ಮುಂತಾದುವು. ಇವೆಲ್ಲವುಗಳಿಗಿಂತ ವಿಶಿಷ್ಟ ಶೈಲಿಯಲ್ಲಿ ಅಳವಡಿಸಿಕೊಂಡ 'ಶೂನ್ಯಸಂಪಾದನೆ'ಯು ಗೌಡರಿಗೆ ತುಂಬಾ ಹೆಸರು ಮತ್ತು ಕೀರ್ತಿಯನ್ನು ತಂದುಕೊಟ್ಟಿದೆ. ಇವುಗಳಲ್ಲಿ 'ಗದಾಯುದ್ದ 'ಹರಿಶ್ಚಂದ್ರಕಾವ್ಯ'ಗಳು ಗೌಡರಿಗೆ ಬಹಳಷ್ಟು ಹಿಡಿಸಿವೆ. ಅದಕ್ಕೆ ಕಾರಣವನ್ನು ಅವರು ಹೇಳಿರುವುದು ಹೀಗೆ :

"ನಾನು ಇವೆರಡನ್ನೂ ಬಹಳಷ್ಟು ಮೆಚ್ಚಲು ಕಾರಣವೇನೆಂದರೆ, ಇವುಗಳಲ್ಲಿರುವ ಅದ್ಭುತ ನಾಟಕೀಯ ಗುಣ. ಎಲ್ಲಿ ನಾಟಕೀಯತೆ ಇರುತ್ತದೊ ಅಲ್ಲಿ ಜೀವಂತಿಗೆ ಇರುತ್ತದೆ.... ಸಂವಾದದಲ್ಲಿ ನಾಟಕೀಯತೆ ಇರುತ್ತದೆ. ಇದರಲ್ಲಿ ಲವಲವಿಕೆ ಇರುತ್ತದೆ, ಆಸಕ್ತಿ ಇರುತ್ತದೆ. 'ಗದಾಯುದ್ಧ ಮತ್ತು 'ಹರಿಶ್ಚಂದ್ರ ಕಾವ್ಯ'ಗಳಲ್ಲಿರುವ ಈ ನಾಟಕೀಯ ಗುಣ ನಾಟಕದವನಾದ ನನಗೆ ಹುಚ್ಚು ಹಿಡಿಸಿರುವುದು ಸಹಜ' ಎಂದಿದ್ದಾರೆ. ಗಮಕಕ್ಕೆ ಸಂವಾದ ಶೈಲಿಯ ಕಾವ್ಯ ಹೆಚ್ಚು ಸೂಕ್ತವಾದುದೆಂಬ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.

## ಶೂನ್ಯ ಸಂಪಾದನೆಯ ಪ್ರವಚನ :

ಗೌಡರ ಗಮಕ ಸೇವೆಯಲ್ಲೆಲ್ಲ 'ಶೂನ್ಯಸಂಪಾದನೆ'ಯ ಪ್ರವಚನ ವಿಶಿಷ್ಟವಾದುದು. ಇದೊಂದು ಆಧ್ಯಾತ್ಮಿಕ ಗ್ರಂಥವಾದುದರಿಂದ ಉದ್ದಕ್ಕೂ ಗಂಭೀರ-ತತ್ವ ಪ್ರಧಾನವಾದ ವಿಷಯಗಳೇ ಬರುತ್ತವೆ. ಆದಾಗ್ಯೂ ಗೌಡರು ಈ ಕೃತಿಯನ್ನು ಅಧ್ಯಯನ ಮಾಡಿದಂತೆಲ್ಲಾ ಅದನ್ನು ಗಮಕಕ್ಕೆ ಅಳವಡಿಸಬೇಕೆಂಬ ಹಂಬಲ ಹೆಚ್ಚಾಗ ತೊಡಗಿತು. ಅದರಲ್ಲಿರುವ ಸಂಭಾಷಣೆಯ ಶೈಲಿ ಗೌಡರಿಗೆ ಬಹುವಾಗಿ ಮೆಚ್ಚುಗೆಯಾಯಿತು. ಅದನ್ನು ಪಟ್ಟುಹಿಡಿದು ಗಮಕಕ್ಕೆ ಅವಳಡಿಸುವಲ್ಲಿ ಯಶಸ್ವಿಯಾದರು. "ಪ್ರಥಮ ಕಾರ್ಯಕ್ರಮ ಬಸವಜಯಂತಿಯಂದು ಬಸವನ ಬಾಗೇವಾಡಿ ಬಸವೇಶ್ವರ ದೇವಾಲಯದಲ್ಲಿ ಯಶಸ್ವಿಯಾಗಿ ನಡೆಯಿತು. ಧಾರವಾಡ ಮೃತ್ಯುಂಜಯಪ್ಪ ಗಳವರಿಗೆ ಇದು ಬಹಳ ಮೆಚ್ಚುಗೆಯಾಯಿತು. ಅವರು ಪ್ರತಿವರ್ಷ ಧಾರವಾಡ ಮುರುಘಾಮಠದ ಜಾತ್ರೆಗೆ ನನ್ನನ್ನು ಕರೆಸಿಕೊಂಡು ನನ್ನಿಂದ ಶೂನ್ಯ ಸಂಪಾದನೆ ಓದಿಸಲಾರಂಭಿಸಿದರು. ಅಲ್ಲದೆ ಅವರು ಪರವೂರುಗಳಿಗೆ ಹೋದಲ್ಲೆಲ್ಲಾ ನನ್ನ ಶೂನ್ಯಸಂಪಾದನೆಯ ಗಮಕ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಹೀಗೆ ನನ್ನ ಈ ಶೂನ್ಯಸಂಪಾದನೆಯ ವಾಚನ ಪ್ರವಚನ ಕಾರ್ಯಕ್ರಮ ಪ್ರಚಾರಗೊಳ್ಳಲು ಆ ಪೂಜ್ಯರು ಕಾರಣರಾಗಿದ್ದಾರೆ' ಎಂದಿರುವ ಗೌಡರ ಮಾತಿನಿಂದ ಅವರ ಗಮಕ ಕಲೆಯ ಯಶಸ್ವಿನ ಮೂಲದ ಕಲ್ಪನೆ ಮೂಡಿನಿಲ್ಲುತ್ತದೆ.

**ಕೆಲವು ಸ್ಮರಣೀಯ ಘಟನೆಗಳು :**

ಹರಪನಹಳ್ಳಿಯಲ್ಲಿ ಗೌಡರ "ಗಮಕ'ದ ಕಾರ್ಯಕ್ರಮ ಏರ್ಪಾಟಾಗಿತ್ತು. ಅದು ಅವರ ಗಮಕ ಜೀವನದ ಪ್ರಾರಂಭಕಾಲ. ಅಲ್ಲಿ ಲಕ್ಕುಂಡಿ ಶ್ಯಾಮರಾಯರು ಮತ್ತು ವೆಂಕೋಬರಾಯ ಸಹೋದರರು ಒಳ್ಳೆಯ ಗಮಕಿಗಳು. ಕಾರ್ಯಕ್ರಮದ ಮೊದಲ ದಿನ ಯಶಸ್ವಿಯಾಗಿ ಮುಗಿಯಿತು. ಎರಡನೆಯ ದಿನವೂ ಅತ್ಯಂತ ಯಶಸ್ವಿಯಾಗಿ ಮುಗಿಯಿತು. ಆಗ ಶ್ಯಾಮರಾಯರು ಬಂದು "ಗೌಡ್ರೆ ಮೋಸ ಮಾಡಿದಿರಿ, ನಿನ್ನೆ ರಾತ್ರಿ ನೀವು ಓದಿದುದಕ್ಕೂ ಇದಕ್ಕೂ ಸಂಬಂಧವೇ ಇಲ್ಲ ನಾನು ಸಾಧಾರಣವೆಂದುಕೊಂಡಿದ್ದೆ ಇಂದು ಅಸಾಧಾರಣವಾದ ನಿಮ್ಮ ಗಮಕ ಶಕ್ತಿಯನ್ನು ಕಂಡು ಮರುಳಾದೆ" ಎಂದರು. ಮತ್ತೆರಡು ದಿನಗಳ ನಂತರ ಹರಪನಹಳ್ಳಿಯಲ್ಲಿಯೇ ಕಾರ್ಯಕ್ರಮವಾಯಿತು. ಕಾರ್ಯಕ್ರಮ ಮುಗಿದ ತರುವಾಯ ಶ್ಯಾಮರಾಯರು ಗೌಡರನ್ನು ಬಿಡಲಿಲ್ಲ ತಮ್ಮ ಮನೆಗೆ ಕರೆದೊಯ್ದರು. ಒಂದು ಗ್ಯಾಸ್ ಹಚ್ಚಿ ಕಾವ್ಯವಾಚನ ಪ್ರಾರಂಭಿಸಿದರು. ಆ ಆನಂದದಲ್ಲಿ ವೇಳೆಹೋದುದು ಅರಿವಾಗಲಿಲ್ಲ ಎಚ್ಚರಿಸಲೆಂದೇ 'ಗ್ಯಾಸ್' ದೀಪ ನಂದುತ್ತಿರುವಂತೆ, ಸೂರ್ಯೋದಯವು ಆಯಿತೆಂದು, ಹೃದಯ ತುಂಬಿ ಹೇಳಿಕೊಂಡಿದ್ದಾರೆ. ಇನ್ನೊಂದು ಸಲ ಬಳ್ಳಾರಿಯಲ್ಲಿ ಒಂದು ಹೃದಯಸ್ಪರ್ಶಿ ಘಟನೆ ನಡೆಯಿತು. "ಆಂಧ್ರದ ಒಬ್ಬ ಹೈಸ್ಕೂಲ ಶಿಕ್ಷಕರು, ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ಬಳ್ಳಾರಿಗೆ ಬಂದಿದ್ದರು. ಪರಸ್ಪರ ಪರಿಚಯವಾಗಿ, ಕುಳಿತ ಮಾಳಿಗೆಯ ಮೇಲೆಯೇ 'ನಮ್ಮ ಹಂಪೆ' ಕಾವ್ಯವಾಚನ ಮಾಡಲು ಕೇಳಿಕೊಂಡರು. ಗೌಡರು ವಾಚನಕ್ಕೆ ಮೊದಲು ಮಾಡಿದರು. ಕುಮಾರಸ್ವಾಮಿ ಹಾರ್ಮೋನಿಯಂ ನುಡಿಯ ತೊಡಗಿತು. ಮಾಸ್ತರರಿಗೆ ಕನ್ನಡಬಾರದು. ತೆಲುಗಿನಲ್ಲಿ ಅರ್ಥವಿವರಣೆ ಬೇಡ, ಸುಮ್ಮನೆ ಓದಿ ಎಂದರು. 'ಪಂಪಾಪತಿಯನ್ನು ನಿಷ್ಠುರತೆಯಿಂದ ವಿಜಯನಗರ ಸಾಮಾಜ್ಯ ಹಾಳಾದುದಕ್ಕೆ "ಕಲ್ಲಾಗಿರುವ ನಿನ್ನನು ದೂರಿ ಫಲವೇನೆಂದು ನೀನತಿ ಕಠಿನ ಮಾನಸನು.' ಎಂದು ನಿಂದಿಸಿ 'ಮಾತೇ ಪಂಪಾಂಬಿಕೆಯೇ ನೀನಿರಲೀ ತೆರನಲಾ...' ಎಂದು ತೋಡಿಯಲ್ಲಿ ಓದುತ್ತಿದ್ದಾಗ, ಆ ಮಾಸ್ತರರು ಗಟ್ಟಿಯಾಗಿ ಅತ್ತು ಬಿಟ್ಟರು. ಕುಮಾರಸ್ವಾಮಿಯ ಕೈನಿಂತಿತು. ನನ್ನ ಬಾಯಿ ನಿಂತಿತು. ನಾವಿಬ್ಬರೂ ಬೆಪ್ಪಾಗಿ ಒಬ್ಬರನ್ನೊಬ್ಬರು ನೋಡಿ ಕೊಂಡು ಬೆಚ್ಚಿಬಿದ್ದವು; ಒಂದು ನಿಮಿಷ ಸುಮ್ಮನಿದ್ದು ಮತ್ತೆ ಮುಂದೆ ಓದಲುದ್ಯುಕ್ತನಾದಾಗ ಗಂಟಲು ಬಿಗಿದು ಅಳುತ್ತಿದ್ದವರು ಮಾತಾಡಲು ಸಾಧ್ಯವಾಗದೆ ಕೈಯಿಂದ ವಾಚನವನ್ನು ತಡೆದರು..!" ಎಂದಿರುವ ಗೌಡರ ಮಾತಿನಿಂದ, ಅವರ ಗಮಕ ಶೈಲಿ ಎಷ್ಟು ಪರಿಣಾಮಕಾರಿಯಾದುದು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇಂತಹ ಅನೇಕ ಸ್ಮರಣೀಯ ಸನ್ನಿವೇಶಗಳು ಜರುಗಿರುವವಾದರು, ಅವೆಲ್ಲವನ್ನು ಇಲ್ಲಿ ಪ್ರಸ್ತಾಪಿಸಲು ಸಾಧ್ಯವಾಗುವುದಿಲ್ಲ.

ಗೌಡರು ಕರ್ನಾಟಕದಲ್ಲಿ ನಾಟಕಕಾರರಾಗಿ ಸುತ್ತಿರುವುದಕ್ಕಿಂತಲೂ, ಗಮಕಿಗಳಾಗಿ ಸುತ್ತಿ ಹೆಸರುವಾಸಿಯಾಗಿದ್ದವರು. ಇಂತಹ ಸಂದರ್ಭಗಳಲ್ಲಿ ಅವರ ಗಮಕಕಲೆಯನ್ನು ಮೆಚ್ಚಿಕೊಂಡು, ಅನೇಕ ಬಿರುದು-ಪ್ರಶಸ್ತಿ-ಮೆಚ್ಚಿಕೆಗಳು ಬಂದಿವೆ.

## ಮಾನ-ಸನ್ಮಾನ-ಬಿರುದುಗಳು :

೧. ಕ್ರಿ.ಶ. ೧೯೪೩ರಲ್ಲಿ ಬಳ್ಳಾರಿಯ ವೀರಶೈವ ಕಾಲೇಜಿನವರು, ಗೌಡರ ಗಮಕ ಕಲಾ ಪ್ರಾವೀಣ್ಯಕ್ಕಾಗಿ ಅವರನ್ನು ಸತ್ಕರಿಸಿ, 'ಗಮಕ ಕಲಾ ಪ್ರವೀಣ' ಎಂದು ಬಿರುದನ್ನಿತ್ತು ಗೌರವಿಸಿದ್ದಾರೆ.

೨. ಕ್ರಿ.ಶ. ೧೯೪೫ರಲ್ಲಿ ಧಾರವಾಡದ ಮರುಘಾಮಠದಲ್ಲಿ ಮೃತ್ಯುಂಜಯಪ್ಪಗಳಿಂದ 'ಗಮಕ ಕಲಾನಿಧಿ' ಎಂಬ ಬಿರುದಿತ್ತು ಸನ್ಮಾನ ನಡೆದಿದೆ. ಮೊಟ್ಟಮೊದಲು ಗೌಡರು ಇಲ್ಲಿ ಕಾರ್ಯಕ್ರಮ ಕೊಟ್ಟುದು ೧೯೪೨ರಲ್ಲಿ

೩. ಕ್ರಿ.ಶ. ೧೯೬೯ರಲ್ಲಿ ಗದುಗಿನ ತೋಂಟದಾರ್ಯಮಠದಲ್ಲಿ ಸತ್ಕರಿಸಿ “ಗಮಕ ಗಂಧರ್ವ' ಎಂಬ ಬಿರುದಿನೊಂದಿಗೆ ಗೌರವಿಸಲಾಗಿದೆ.

೪. ಕ್ರಿ.ಶ. ೧೯೮೩ರಲ್ಲಿ ಗಮಕ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಪ್ರಶಸ್ತಿ ಲಭಿಸಿದೆ. ೫. ಕ್ರಿ.ಶ. ೧೯೮೭ - ಬೆಂಗಳೂರಿನ ಗಾನ ಕಲಾ ಪರಿಷತ್ತಿನಿಂದ ಸನ್ಮಾನ.

೬. ಕ್ರಿ.ಶ. ೧೯೫೨ - ದಾವಣಗೆರೆ ವೀರಶೈವ ಮಹಾದ್ಯೆವದವರಿಂದ 'ಮಾನಪತ್ರ'

೭. ಕ್ರಿ.ಶ. ೧೯೭೦ - ಶ್ರೀ ಮುರುಘಾಮಠ, ಧಾರವಾಡ, ಸದ್ಭಕ್ತರ ಪರವಾಗಿ 'ಸನ್ಮಾನ ಪತ್ರ'.

ಇಲ್ಲಿ ಗಮಕ ಕಲೆಗೆ ಸಂಬಂಧಿಸಿದ ಕೆಲವು ಪ್ರಮುಖವಾದ ಪ್ರಶಸ್ತಿಗಳನ್ನು ಮಾತ್ರ ಹೆಸರಿಸಲಾಗಿದೆ.

## ಸಭೆ ಸಮಾರಂಭಗಳು :

“ಗಮಕಿ'ಯಾಗಿ ಗೌಡರು ಹಲವಾರು ಸಭೆ ಸಮಾರಂಭಗಳಲ್ಲಿ ಪಾಲುಗೊಂಡಿದ್ದಾರೆ. ಅವುಗಳನ್ನೆಲ್ಲಾ ಇಲ್ಲಿ ಹೆಸರಿಸುವುದು ಸೂಕ್ತವಲ್ಲದಿದ್ದರು, ಪ್ರಮುಖವಾದ ಕೆಲವು ಪ್ರಸಂಗಗಳನ್ನು ಮಾತ್ರ ಗಮನಿಸಲಾಗುವುದು:

೧. ದಿ: ೧೭-೧೨-೧೯೫೦ರಲ್ಲಿ ನಡೆದ ಸೊಲ್ಲಾಪುರದ ಸಾಹಿತ್ಯ ಸಮ್ಮೇಳನದ ಗಮಕ ಗೋಷ್ಠಿಯ ಅಧ್ಯಕ್ಷತೆಯನ್ನು ಗೌಡರು ವಹಿಸಿದ್ದರು.

೨. ದಿ: ೧೯-೨೦ ಫೆ. ೧೯೭೨ರಲ್ಲಿ ಬೆಂಗಳೂರು ಸಾಹಿತ್ಯ ಪರಿಷತ್ತಿನವರುವ ಅಖಿಲ ಕರ್ನಾಟಕ ಪ್ರಥಮ ಗಮಕ ಕಲಾ ಸಮ್ಮೇಳನವನ್ನು ನೆರವೇರಿಸಿದರು. ಈ ಸಮ್ಮೇಳನದ ಅಧ್ಯಕ್ಷತೆ ಗೌಡರದೇ ಆಗಿತ್ತೆಂಬುದು ಹೆಮ್ಮೆ ಪಡಬೇಕಾದ ವಿಷಯವಾಗಿದೆ. ಈ ಸಮಾರಂಭದ ಪ್ರಾರಂಭ ಭಾಷಣವನ್ನು ದಿ| ಡಿ.ವಿ. ಗುಂಡಪ್ಪನವರು ನೆರವೇರಿಸಿಕೊಟ್ಟರು. ಈ ಸಮಾರಂಭದಲ್ಲಿ ಡಾ|| ಮಾಸ್ತಿ, ವಿ. ಸೀತಾರಾಮಯ್ಯ, ಸಂಪದ್ಗಿರಿ ರಾಯರು ಮುಂತಾದವರು ಭಾಗವಹಿಸಿದುದಲ್ಲದೆ, ಸುಮಾರು ೨೦ ಜನ ಗಮಕಿಗಳು, ಗಮಕವಾಚನ ಮಾಡಿದರು. ವಿಚಾರಗೋಷ್ಠಿಗೆ ಬಿ. ಶಿವಮೂರ್ತಿಸ್ವಾಮಿಗಳವರು ಅಧ್ಯಕ್ಷತೆ ವಹಿಸಿದ್ದರು. ಜವರೇಗೌಡರ ಉಪಸಂಹಾರ, ಗೌಡರ ಅಧ್ಯಕ್ಷೀಯ ಭಾಷಣದೊಂದಿಗೆ ಈ ಪ್ರಥಮ ಗಮಕಕಲಾ ಪರಿಷತ್ತು ಅತ್ಯಂತ ಯಶಸ್ವಿಯಾಗಿ ನಡೆಯಿತು.

ಇದೇ ಪ್ರಸಂಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರವಾಗಿ, ಭಾರತೀಯ ಭವನದಲ್ಲಿ ಗೌಡರ ಕಾರ್ಯಕ್ರಮ ಏರ್ಪಡಿಸಿದ್ದರು. ಡಾ|| ಜಿ.ಎಸ್. ಶಿವರುದ್ರಪ್ಪ ಡಾ|| ಎಂ. ಚಿದಾನಂದಮೂರ್ತಿಗಳವರು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಇಲ್ಲಿ ಹರಿಶ್ಚಂದ್ರಕಾವ್ಯದ ವಾಚನವನ್ನು ಮಾಡಲಾಯಿತು. ಅಂದಿನ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಮ. ಕೃಷ್ಣಮೂರ್ತಿಯವರು ಕಾರ್ಯಕ್ರಮವನ್ನು ಬಹುವಾಗಿ ಮೆಚ್ಚಿಕೊಂಡರು.

ಹೊಸಗನ್ನಡದ ಕಾವ್ಯಗಳನ್ನು ಗಮಕಕ್ಕೆ ಅಳವಡಿಸಲು ಬರುವುದಿಲ್ಲವೆಂಬುದು ಕೆಲವರವಾದ. ಆದರೆ ಗೌಡರು ಈ ಮಾತನ್ನು ಒಪ್ಪುವುದಿಲ್ಲ. ರಾಷ್ಟ್ರಕವಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕಾವ್ಯವನ್ನು ಗಮಕಕ್ಕೆ ಅಳವಡಿಸಿ ಚೆನ್ನಾಗಿ ವಾಚನ ಮಾಡುತ್ತಿದ್ದರು. ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಹೋದ ಪ್ರಸಂಗ, 'ಕುವೆಂಪು' ಅವರ ಮನೆಯಲ್ಲಿಯೇ 'ರಾಮಾಯಣದರ್ಶನಂ' ಕಾವ್ಯದ ವಾಚನದ ಏರ್ಪಾಟು, ಕೊ. ಚನ್ನಬಸಪ್ಪನವರದು. ಅಂದಿನ ಆ ಸಂದರ್ಭದಲ್ಲಿ ವರಕವಿ ಬೇಂದ್ರೆಯವರು ಉಪಸ್ಥಿತರಿದ್ದರು. ಎಲ್ಲರು ತುಂಬಾ ಮೆಚ್ಚಿಕೊಂಡರು. ಆಗ ಕುವೆಂಪು ಅವರು ನನ್ನ ಕಾವ್ಯವನ್ನು ಹೇಗೆ ಓದುವರೊ ಎಂಬ ಸಂಶಯ ನನಗಿತ್ತು. ಅದು ಇಂದು ನಿವಾರಣೆಯಾಯಿತು' ಎಂದು ಸಂತಸವ್ಯಕ್ತಪಡಿಸಿದರಂತೆ. 'ಶೂನ್ಯ ಸಂಪಾದನೆಯ' ಪ್ರವಚನ ಸಮಾರಂಭಗಳಂತೂ, ಜನರನ್ನು ಭಕ್ತಿ ಸಾಗರದಲ್ಲಿ ಮೈಮರೆಯುವಂತೆ ಮಾಡಿವೆ. ಅಂತಹ ಸಂದರ್ಭಗಳಲ್ಲಿ ಭಾಗವಹಿಸಿದ ಲೆಕ್ಕ ಸ್ವತಃ ಗೌಡರಿಗೆ ಇರಲಿಕ್ಕಿಲ್ಲವೆನಿಸುತ್ತದೆ. ಬದುಕಿನುದ್ದಕ್ಕೂ ಅವರು ಈ ಗಮಕಸೇವೆಯಲ್ಲಿಯೆ ತೊಡಗಿದ್ದರೆಂದು ಹೇಳಬಹುದು.

ಬಾಲ್ಯದಲ್ಲಿ ಇತರ ಬಾಲಕರಂತೆ ಅಭ್ಯಾಸ ಮಾಡಿದ 'ಗಮಕ' ಇತರರಿಗಿಂತ ವಿಶಿಷ್ಟವಾಗಿ ಅಂಟಿಕೊಂಡು, ನಾಡಜನತೆಯನ್ನು ರಂಜಿಸಿ, ಹಳ್ಳಿಯ ಬಾಲಕನೊಬ್ಬನನ್ನು ಇಷ್ಟೊಂದು ಎತ್ತರಕ್ಕೆ ತಂದ ಪ್ರಸಂಗ ಸೋಜಿಗವೆನಿಸದಿರಲಾರದು.

ಹೀಗೆ ಗೌಡರು ನಾಟಕ ಕಲೆ ಮತ್ತು ಗಮಕಕಲೆಯಲ್ಲಿ ಅದ್ಭುತ ಸಾಧನೆಗೈದು, ಉಭಯ ರಂಗದಲ್ಲೂ ಪ್ರಸಿದ್ಧಿ ಪಡೆದವರಾಗಿದ್ದರು.

## ೫. ಗೌಡರ ಸಾಹಿತ್ಯಕ ಜೀವನ

ಗೌಡರದು ಬಹುಮುಖವಾದ ಪ್ರತಿಭೆ. ನಾಟಕಾಭಿನಯ, ಸಂಗೀತ, ಗಮಕ, ಕಾವ್ಯರಚನೆ ಮುಂತಾದ ಮಾಧ್ಯಮಗಳಲ್ಲಿ ಅವರ ಪ್ರತಿಭೆ ಅರಳಿರುವುದನ್ನು ಕಾಣಬಹುದಾಗಿದೆ. ನಾಟಕ ಮತ್ತು ಗಮಕ ಕಲೆಯಲ್ಲಿ ಅವರು ಸಾಧಿಸಿದ ಹಿರಿಮೆಯನ್ನು ಈಗಾಗಲೆ ನೋಡಿದ್ದೇವೆ. ಕೇವಲ ನಾಲ್ಕನೆ ತರಗತಿಯವರೆಗೆ ಶಾಲೆಯಲ್ಲಿ ಓದಿದ ಗೌಡರು, ಸ್ವಪರಿಶ್ರಮದಿಂದ ಆಳವಾದ ಅಧ್ಯಯನ ಕೈಕೊಂಡು, ತಮಗಾದ ಅನುಭವಗಳಿಗೆ ಶಬ್ದರೂಪಕೊಟ್ಟು ಕನ್ನಡ ಮತ್ತು ತೆಲುಗು ಭಾಷೆಯ ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚಿಸಿ ಹೆಸರು ಗಳಿಸಿದ್ದವರು.

'ಉಭಯಭಾಷಾ ಪಂಡಿತ' ಎಂಬ ಬಿರುದಿಗೆ ಪಾತ್ರರಾಗಿದ್ದವರು. ಅವರ ಅಪಾರವಾದ ಅನುಭವ, ಅವರ ಹಲವಾರು ಕೃತಿಗಳಲ್ಲಿ ವ್ಯಕ್ತವಾಗಿದೆ. ಹಳ್ಳಿಯಲ್ಲಿ ಹುಟ್ಟಿಬೆಳೆದು, ಸ್ವಪರಿಶ್ರಮದಿಂದ ಸಾಹಿತ್ಯ ಕೃಷಿಗಿಳಿದ ಗೌಡರು ೧೯೮೪ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಮೊದಲೆ ನೋಡಿರುವಂತೆ ೧೯೮೫ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು, ಗೌಡರ ಸಾಹಿತ್ಯಕ ಸಾಧನೆಯನ್ನು ಅನುಲಕ್ಷಿಸಿ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇಂತಹ ಪ್ರತಿಭಾ ಸಂಪನ್ನ ಗೌಡರ ಸಮಗ್ರ ಕೃತಿಗಳ ಪರಿಚಯಕ್ಕೆ ಇನ್ನೊಂದು ಅಧ್ಯಾಯವೇ ಬೇಕಾಗುತ್ತದೆ. ಆದ್ದರಿಂದ ಇಲ್ಲಿ ಅವರು ರಚಿಸಿದ ಒಟ್ಟು ಕೃತಿಗಳ ಸಂಖ್ಯೆಯನ್ನು ಮಾತ್ರ ತಿಳಿಸಲಾಗಿದೆ. ಜೊತೆಗೆ ಗೌಡರು ತಮ್ಮನ್ನು ತೊಡಗಿಸಿಕೊಂಡ ಸಾಹಿತ್ಯಕ ಚಟುವಟಿಕೆಗಳ ಸಮೀಕ್ಷೆ ಮಾಡಲಾಗುವದು.

ಕಾವ್ಯ ರಚನೆ ಗೌಡರಿಗೆ ಬಾಲ್ಯದಿಂದಲೇ ಬೆಳೆದುಕೊಂಡು ಬಂದದ್ದೆಂದು ಈ ಮೊದಲೆ ನೋಡಲಾಗಿದೆ. ಯೌವನಕ್ಕೆ ಕಾಲಿಟ್ಟ ಮೇಲೆ ಅವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವುಗಳನ್ನು ಪ್ರಧಾನವಾಗಿ ಹೀಗೆ ವಿಂಗಡಿಸಬಹುದು :

| | | | |
|---|---|---|---|
| ೧. ಕಾವ್ಯಗಳು | ೩. ಜೀವನ ಚರಿತ್ರೆ | ೫. ವಿಮರ್ಶೆ | ೭. ಇತರ |
| ೨. ನಾಟಕಗಳು | ೪. ಆತ್ಮಚರಿತ್ರೆ | ೬. ಸಂಪಾದಿತ | ೮. ತೆಲುಗು ಕೃತಿಗಳು |

## ೧. ಕಾವ್ಯಗಳು :

೧. ನಮ್ಮ ಹಂಪೆ (ಖಂಡಕಾವ್ಯ)

೨. ರಸವರ್ಷ (ಭಾವಗೀತೆಗಳು)

೩. ತಾತನಗೀತಾಂಜಲಿ (ಎರ್ರಿತಾತನ ಚರಿತ್ರೆ)

೪. ಲಾವಣಿ (ಚೆನ್ನಬಸವ ಸ್ವಾಮಿಗಳ ಚರಿತ್ರೆ)

೫. ರಾಮೇಶ ವಚನಗಳು (ವಚನಗಳು)

೬. ದೇಶೀಯ ವಚನಗಳು ಭಾಗ - ೧ (ವಚನಗಳು)

೭. ದೇಶೀಯ ವಚನಗಳು ಭಾಗ - ೨ (ವಚನಗಳು)

೮. ದೇಶೀಯ ವಚನಗಳು ಭಾಗ - ೩ (ವಚನಗಳು)

೯. ಗೌಡತಿ ಬರಲಿಲ್ಲ (ಖಂಡಕಾವ್ಯ)

೧೦. ಜೋಳದರಾಶಿ ಕಾವ್ಯ (ಸಮಗ್ರ ಕವನಗಳು)

೧೧. ಭಕ್ತಿ ಸಂಜೀವಿನಿ (ಸಂಪಾದಿತ).

೧೨. ಮೃತ್ಯುಂಜಯ ಭಕ್ತಿಗೀತೆಗಳು (ಸಂಪಾದಿತ)

೧೩. ಶಿವಮಯ ಜೀವನ ಚರಿತ್ರೆ (ಸಂಗ್ರಹ)

**೨. ಕನ್ನಡ ನಾಟಕಗಳು :**

**ಪ್ರಕಟಿತ**

೧. ಕನಕದಾಸ

೨. ಕ್ರಾಂತಿಪುರುಷ ಬಸವಣ್ಣ

೩. ದೊಡ್ಡನಗೌಡರ ನಾಟಕಗಳು (ಮಾಯಾಪ್ರಭಾವ, ಶಿವನಾಣೆ, ಜಾಗೃತಿ)

೪. ಜೋಳದರಾಶಿಯವರ ಮೂರು ನಾಟಕಗಳು (ನೋಡೋರ ನಾಟಕ, ಅಭಯ, ಸಾಯದವನ ಸಮಾಧಿ)
**ಅಪ್ರಕಟಿತ** : ತುಕಾರಾಮ್, ಸ್ವಾರ್ಥತ್ಯಾಗ, ಕಾಯಕವೇ ಕೈಲಾಸ, ಭಕ್ತ ರಾಮದಾಸ (ಅನುವಾದಿತ) ಬಗೆಹರಿಯದ ಪ್ರಶ್ನೆ (ಅನುವಾದಿತ), ವಿಶ್ವಾಮಿತ್ರ (ಅನುವಾದಿತ)

**೩. ಜೀವನ ಚರಿತ್ರೆ :**

೧. ನಾಟ್ಯಯೋಗಿ ಬಳ್ಳಾರಿ ರಾಘವ

೨. ನಾಟ್ಯಕಲಾಪ್ರಪೂರ್ಣ ರಾಘವರು

೩. ಚೆಳ್ಳಗುರಿಕೆ ಎರ್ರಿತಾತ (ಮಕ್ಕಳಿಗಾಗಿ)

೪. ಪಂಡಿತ ವೈ. ನಾಗೇಶ ಶಾಸ್ತ್ರಿಗಳು

**೪. ಆತ್ಮಚರಿತ್ರೆ :** 'ನಂದೇನಾನೋದಿದೆ'

**೫. ವಿಮರ್ಶೆ :** ಬಯಲಗಳಿಕೆಯ ಬೆಳಗು

**೬. ಸಂಪಾದಿತ :** ಕಲಾ, ಬೆಳ್ಳಗುರ್ಕಿ ಎರ್ರಿತಾತನವರ ಭಕ್ತಿಗೀತೆಗಳು

**೭. ಇತರೆ :**

೧. ಬಯಲುಗಳಿಕೆ ಭಾಗ-೧  ಬಯಲಗಳಿಕೆ - ೨.

೩. ನೀವೇನಂತೀರಿ?

## ೮. ತೆಲುಗು ಕೃತಿಗಳು :

೧. ಗೇಯಗುಂಜಾರವಮು

೨. ಅನುಭವಾಲು - ಜ್ಞಾಪಕಾಲು

೩. ವಚನಾಮೃತಮು

೪. ಬಯಲಗೊನ್ನವೆಲಗು

ಇಲ್ಲಿ ಸೂಚಿಸಿದ ಕೃತಿಗಳ ಸಂಖ್ಯೆಯನ್ನು ನೋಡಿದರೆ ಅವರ ಪ್ರತಿಭೆ ಮತ್ತು ಸಾಧನೆಯ ಬಗೆಗೆ ಅಭಿಮಾನವೆನಿಸುತ್ತದೆ. ಗೌಡರು ತಮ್ಮನ್ನು ಅನೇಕ ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರು. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ಗಮನಿಸಬಹುದು. ಅವುಗಳ ಜೊತೆಗೆ ಅವರಿಗೆ ದೊರೆತ ಕೆಲ ಸನ್ಮಾನಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಸ್ವಾತಂತ್ರ ಹೋರಾಟಗಾರರಾದ ಸಂಪಗಾವಿಯ ಶ್ರೀ ಚೆನ್ನಪ್ಪ ವಾಲಿಯವರು, ೧೯೪೭ರಲ್ಲಿ ಗೋಕಾಕದಲ್ಲಿ ರೈತಸಮ್ಮೇಳನ ಕರೆದಿದ್ದರು. ಈ ಸಮ್ಮೇಳನದ ಅಂಗವಾಗಿ 'ಜನಪದ ಗೀತಾ ಪರಿಷತ್'ನ ಏರ್ಪಾಟು ಮಾಡಲಾಗಿತ್ತು. ಈ ಗೀತಾ ಪರಿಷತ್ತಿನ ಏರ್ಪಾಡೆಲ್ಲ ತಲ್ಲೂರ್ ರಾಯನಗೌಡರದಾಗಿದ್ದು ಆ ಪರಿಷತ್ತಿನ ಅಧ್ಯಕ್ಷತೆಯನ್ನು ಗೌಡರು ವಹಿಸಿದ್ದರು. ಈ ಸಭೆಯ ಅಧ್ಯಕ್ಷೀಯ ಭಾಷಣ (ಗೌಡರದು) ಹಾಡಿನಲ್ಲಿಯೆ ಇತ್ತೆಂಬುದನ್ನು ಗಮನಿಸಬೇಕು. ಆ ಹಾಡಿನ ತುಂಬೆಲ್ಲಾ ಸಮಕಾಲೀನ ವೈಪರೀತ್ಯಗಳ ವಿಡಂಬನೆ ತುಂಬಿಕೊಂಡಿತ್ತು. ಈ ಸಮಾರಂಭ ಅತ್ಯಂತ ಯಶಸ್ವಿಯಾಗಿ ಜರುಗಿತೆಂದು ಗೌಡರು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ.

ಪ್ರೊ|| ಶಿ.ಶಿ. ಬಸವನಾಳರ ಅಧ್ಯಕ್ಷತೆಯಲ್ಲಿ ನಡೆದ ರಬಕವಿ ಸಾಹಿತ್ಯ ಸಮ್ಮೇಳನದಲ್ಲಿ ಗೌಡರು ಭಾಗವಹಿಸಿದ್ದರು. ಅವರ ಪ್ರಾರ್ಥನೆಯಿಂದಲೆ ಕಾರ್ಯಕ್ರಮ ಪ್ರಾರಂಭವಾಯಿತು. ಸಾಂಗಲಿಯ ದೊರೆಗಳು ಈ ಕಾರ್ಯಕ್ರಮವನ್ನು ಉದ್ಘಾಟಿಸಿದ್ದೊಂದು ವಿಶೇಷವಾಗಿತ್ತು.

ಅಖಿಲ ಕರ್ನಾಟಕ ಜಾನಪದ ಸಮ್ಮೇಳನ'ವನ್ನು ೧೯೬೭ರ ಡಿಸೆಂಬರ್‌ನಲ್ಲಿ ತರೀಕೆರೆಯಲ್ಲಿ ಕರೆಯಲಾಗಿತ್ತು. ಖ್ಯಾತ ಜಾನಪದ ವಾಗ್ಮಿ ನ್ಯಾಯವಾದಿ ಕೆ.ಆರ್. ಲಿಂಗಪ್ಪನವರು ನೇತೃತ್ವವಹಿಸಿದ್ದರು. ನಾಡಿನ ಬಹುತೇಕ ಸಾಹಿತಿಗಳು ಆಗಮಿಸಿದ್ದರು. ಮೈಸೂರು ಮಹಾರಾಜ(ಅಂದಿನ ಗವರ್ನರ್)ರಿಂದ ಉದ್ಘಾಟನೆ ಕಾರ್ಯಕ್ರಮ ನೆರವೇರಿತು. 'ಹೊನ್ನಬಿತ್ತೇವ ಹೊಲಕೆಲ್ಲ' ಎಂಬ ಕೃತಿ ಇದೇ ಸಮಾರಂಭದಲ್ಲಿ ಬಿಡುಗಡೆಯಾಯಿತು. ಗೌಡರ 'ಗಮಕ ಸೇವೆ ಇಲ್ಲಿ ವೈಶಿಷ್ಟ್ಯ ಪೂರ್ಣವಾಗಿ ನಡೆಯಿತು. ಸಭೆಯಲ್ಲಿ ಗಲಾಟೆ ನಡೆದುದಕ್ಕೆ ರೇಗಿ, ಗೌಡರು ಕೈಯಲ್ಲಿಯ ಪುಸ್ತಕವನ್ನು ಎತ್ತಿ ಸಭಿಕರ ಮೇಲೆ ಎಸೆದಿದ್ದರಂತೆ. ಆಗ ಲಿಂಗಣ್ಣನವರು ಬಂದು ಪ್ರಸಂಗವನ್ನು ಹಿಡಿತದಲ್ಲಿ ತಂದರಂತೆ. ನಂತರ ಕಾವ್ಯವಾಚನ ಸರಾಗವಾಗಿ ನಡೆಯಿತೆಂದು, ಈ ಪ್ರಸಂಗವನ್ನು ಗೌಡರು ನೆನಸಿಕೊಂಡಿದ್ದಾರೆ.

ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದ ಪರವಾಗಿ, ೧೯೭೦ರಲ್ಲಿ ಡಾ|| ಪಿ.ಬಿ. ದೇಸಾಯಿಯವರ ನೇತೃತ್ವದಲ್ಲಿ ಸನ್ಮಾನಿಸಲಾಗಿದೆ.

೧೯೭೧ರಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಪಾಲುಗೊಂಡಿದ್ದಾರೆ.

ಖ್ಯಾತನಾಟಕಕಾರಾದ ಶ್ರೀ ಗುಬ್ಬಿ ವೀರಣ್ಣನವರು, ೧೯೭೧ರಲ್ಲಿ ಗುಬ್ಬಿಗೆ ಜೋಳದರಾಶಿಯವರನ್ನು ಕರೆಸಿಕೊಂಡು 'ಶರಣ ಕವಿ' ಎಂಬ ಬಿರುದಿತ್ತು ಸನ್ಮಾನಿಸಿದ್ದಾರೆ.

೧೯೭೪ರಲ್ಲಿ ಚೆಳ್ಳಗುರಿಕೆಯಲ್ಲಿ ನೆರವೇರಿದ ಕರ್ನಾಟ ವಿಶ್ವವಿದ್ಯಾಲಯದ ಉಪನ್ಯಾಸ ಶಿಬಿರದ ಅಧ್ಯಕ್ಷತೆಯನ್ನು ಗೌಡರು ವಹಿಸಿದ್ದರು.

೧೯೭೭ರಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಗೊಂಡವರಲ್ಲಿ ಗೌಡರೂ ಒಬ್ಬರಾಗಿದ್ದಾರೆ.

೧೯೮೧ರಲ್ಲಿ ಹುಬ್ಬಳ್ಳಿ ಮೂರುಸಾವಿರಮಠದ ಪುಸ್ತಕ ಬಹುಮಾನ ಯೋಜನೆ ಅಂಗವಾಗಿ 'ನಂದೇನಾನೋದಿದೆ' ಕೃತಿಗೆ ಪ್ರಶಸ್ತಿ ಸಹಿತ ಬಹುಮಾನ ದೊರೆತಿದೆ.

೧೯೭೫ರಲ್ಲಿ ಗುಲಬರ್ಗಾದಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾಲಯದ ೫ನೇ ಅಖಿಲಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷತೆ ಗೌಡರದೇ ಆಗಿತ್ತು.

ಹೀಗೇ ಗೌಡರು ತಮ್ಮ ಬದುಕಿನುದ್ದಕ್ಕೂ ಅನೇಕ ಸಾಹಿತ್ಯಕ ಸಭೆ - ಸಮಾರಂಭಗಳಲ್ಲಿ ಭಾಗಿಗಳಾಗಿದ್ದು ಬದುಕಿನುದ್ದಕ್ಕೂ ಕ್ರಿಯಾಶೀಲ ಸಾಹಿತ್ಯಕ ಚಟುವಟಿಕೆಯಲ್ಲಿ ತೊಡಗಿದ್ದರೆಂಬುದು ಅಭಿಮಾನದ ಸಂಗತಿಯೇ ಸರಿ.

—

## ೬. ಸಾಂಸ್ಕೃತಿಕ ಜೀವನ

ಗೌಡರ ಸಾಂಸ್ಕೃತಿಕ ಜೀವನದ ಹರವು ಕೂಡಾ ಬಹು ವಿಶಾಲವಾದುದು. ಇಲ್ಲಿ 'ಸಾಂಸ್ಕೃತಿಕ ಜೀವನ' ಎಂಬುದರ ಅರ್ಥವನ್ನು 'ಸೀಮಿತ'ಗೊಳಿಸಿಕೊಂಡು, 'ಸಾಂಸ್ಕೃತಿಕ ಕಾರ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ಬಳಸಿಕೊಳ್ಳಲಾಗಿದೆ. ಗೌಡರು 'ತಮ್ಮ ಹಳ್ಳಿಯ ಜನತೆಯ ಬೌದ್ಧಿಕ, ನೈತಿಕ ಆಧ್ಯಾತ್ಮಿಕ ಜೀವನದ ವಿಕಾಸಕ್ಕಾಗಿ ನಿರ್ವಹಿಸಿ ವಿವಿಧ ಬಗೆಯ ಚಟುವಟಿಕೆಗಳು ಇದರಲ್ಲಿ ಸಮಾವೇಶಗೊಳ್ಳುತ್ತವೆ.

ಗೌಡರಿಗೆ ಬಾಲ್ಯದಿಂದಲೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿಯಿತ್ತೆಂಬುದು, ಅವರ ಬಾಲ್ಯ ಜೀವನದ ಚರಿತ್ರೆಯಿಂದ ತಿಳಿದುಬರುತ್ತದೆ. ಅಲ್ಲದೆ ಅವರು ಆಯ್ದುಕೊಂಡ 'ಕಲಾ ಜೀವನ'ದ ಸಂಬಂಧವು 'ಸಾಂಸ್ಕೃತಿಕ ಜೀವನ'ದ ಬಹುಸಾಮೀಪ್ಯವನ್ನು ಹೊಂದಿರುವುದು ಕೂಡ, ಗೌಡರ ಅಭಿರುಚಿಯನ್ನು ಸ್ಪಷ್ಟಪಡಿಸುತ್ತದೆ. ಚಿಕ್ಕಂದಿನಲ್ಲಿಯೇ ಶಾಲೆಯ ಆಟಗಳಲ್ಲಿ ಪಾತ್ರ ಹಾಕುವುದು, ಸುಶ್ರಾವ್ಯವಾಗಿ ಹಾಡುವುದು ಗೌಡರಿಗಂಟಿಕೊಂಡ 'ಗೀಳಾಗಿತ್ತು. ಅಂದಿನ ಆ ಖಯಾಲಿ ಅವರ ಬದುಕಿನುದ್ದಕ್ಕೂ ಸಾಗಿ ಬಂದಿರುವುದಕ್ಕೆ ನಿದರ್ಶನಗಳಿವೆ. ಅಲ್ಲದೆ ಗೌಡರ ಅಭಿನಯ, ಸಂಗೀತ, ಗಮಕ ಕಲೆಗಳು ಒಂದರ್ಥದಲ್ಲಿ 'ಸಾಂಸ್ಕೃತಿಕ ಚಟುವಟಿಕೆ' ಗಳಿಗೆ ಹೊರತಾಗಿಲ್ಲವೆಂಬುದನ್ನು ಗಮನಿಸಬೇಕು. ಆದರೆ ಇವುಗಳು ಗೌಡರ ಬದುಕಿನ ಬಹುಭಾಗವನ್ನು ವ್ಯಾಪಿಸಿ ಕೊಂಡಿರುವುದರಿಂದ, ಇವುಗಳಿಗೆ ಹೊರತಾದ ಚಟುವಟಿಕೆಗಳನ್ನು ಮಾತ್ರ ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗುವುದು.

## ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಪರಿಷತ್ತು :

'ರಂಗಭೂಮಿ'ಯ ಅಭಿವೃದ್ಧಿ ಮತ್ತು ಕಲಾವಿದರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಪರಿಷತ್ತನ್ನು ದಿ: ೨-೯-೧೯೪೮ರಂದು ಸ್ಥಾಪಿಸಲಾಯಿತು. ಹೀಗೆ ಸ್ಥಾಪನೆಯಾದ ಪರಿಷತ್ತಿಗೆ, ಗೌಡರನ್ನೇ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಹೀಗೆ ಪ್ರಾರಂಭವಾದ ಪರಿಷತ್ತಿನ ಮೊದಲ ಕಾರ್ಯಕ್ರಮ 'ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಸಮ್ಮೇಳನ' ದಿ: ೫-೧೨-೪೮ರಂದು, ಅತ್ಯಂತ ವಿಜೃಂಭಣೆಯಿಂದ ಜೋಳದರಾಶಿಯಲ್ಲಿಯೆ ಜರುಗಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಅಂದಿನ ರಂಗ ಭೂಮಿಯ ಪ್ರಸಿದ್ಧ ಕಲಾವಿದ ಶ್ರೀ ಗರುಡ ಸದಾಶಿವ ರಾಯರು ವಹಿಸಿದ್ದರು. ಉದ್ಘಾಟಕರಾಗಿ ನಾಟ್ಯ ಕಲಾರತ್ನ ಗುಬ್ಬಿ ವೀರಣ್ಣನವರು ಆಗಮಿಸಿದ್ದರು. ಬಳ್ಳಾರಿ ಜಿಲ್ಲೆಯ ಅನೇಕ ಕಲಾವಿದರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಇಲ್ಲಿ ಒಂದು ವಿಶೇಷ ಘಟನೆಯನ್ನು ಸ್ಮರಿಸಿಕೊಳ್ಳಬೇಕು. ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳು, ಪ್ರತಿನಿಧಿ ಶುಲ್ಕಕೊಟ್ಟು ಊಟ-ತಿಂಡಿಯ 'ಟಿಕೇಟ್' ಪಡೆಯುವ ಏರ್ಪಾಟುಮಾಡಲಾಗಿತ್ತು. ಆದರೆ ಗೌಡರ ತಂದೆಯವರು ಈ ವ್ಯವಸ್ಥೆಯನ್ನು ಒಪ್ಪಲಿಲ್ಲ. ತಮ್ಮ ಮನೆತನದ ಘನತೆಗೆ ಹೊರತಾದ ನಡೆಯಿದೆಂದು ಅವರು ಭಾವಿಸಿ, ಪ್ರತಿನಿಧಿಗಳಿಗೆಲ್ಲಾ ಗೌಡರ ಮನೆಯಿಂದಲೇ ಊಟದ ವ್ಯವಸ್ಥೆಯಾಗಬೇಕೆಂದು ಆಜ್ಞಾಪಿಸಿದರು. ತಂದೆಯ ಮಾತನ್ನು ಮೀರಲು ಬರುವಂತಿರಲಿಲ್ಲ. ಆಗ ಸಮಿತಿಯ ಹಿರಿಯರೆಲ್ಲ ಸೇರಿ ಒಂದು ಪರಿಹಾರೋಪಾಯ ಕಂಡುಕೊಂಡರು. ಮೂರು ದಿನ ನಡೆಯಬೇಕಾದ ಸಮೇಳನದ ಕಾರ್ಯಕ್ರಮಗಳನ್ನು ಸಂಕ್ಷಿಪ್ತಗೊಳಿಸಿ, ಒಂದೇ ದಿನದಲ್ಲಿ ಮುಗಿಸುವುದು ಎಂದು ತೀರ್ಮಾನಿಸಿ ಅದರಂತೆಯೇ ಮಾಡಿದರು. ಸಮ್ಮೇಳನಕ್ಕೆ ಆಗಮಿಸಿದ್ದ ಪ್ರತಿಯೊಬ್ಬ ಪ್ರತಿನಿಧಿಗೂ ಗೌಡರ ಮನೆಯ ಅತಿಥ್ಯ ಸಂಪ್ರೀತರನ್ನಾಗಿ ಮಾಡಿತಲ್ಲದೆ, ಜಿಲ್ಲಾ ಮಟ್ಟದ ಕಾರ್ಯಕ್ರಮ ದಿನವಿಡೀ ಬಿಡುವಿಲ್ಲದೆ ನಡೆದು, ಅತ್ಯಂತ ಯಶಸ್ವಿಯಾಗಿ ಮಂಗಲ ಹೊಂದಿತು.

ಈ ಕಾರ್ಯಕ್ರಮದ ಅಂಗವಾಗಿ, ಅಂದಿನ ರಾತ್ರಿಯಿಡೀ ಸಾಂಸ್ಕೃತಿಕ ಕಾರ್‍ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಒಂದು ಚಿಕ್ಕ ಹಳ್ಳಿಯಲ್ಲಿ ಕೈಗೊಂಡ ಗೌಡರ ಈ ಸಾಹಸಕಾರ್ಯ ನಿಜವಾಗಿಯು ಅಭಿಮಾನ ಪಡುವಂತಹದು.

ರೈತ ಮಕ್ಕಳು ನಾಟಕಗಳಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕು, ರಂಗಭೂಮಿಯ ಅಭಿವೃದ್ಧಿಗಾಗಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂಬ ನಿರ್ಣಯಗಳನ್ನು ಅಂದಿನ ಸಭೆಯಲ್ಲಿ ಅಂಗೀಕರಿಸಲಾಯಿತು. ಆ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು, ಒಂದು ಸಮಿತಿಯನ್ನು ನೇಮಿಸಲಾಯಿತು. ಆ ಸಮಿತಿಯಲ್ಲಿ ಗೌಡರದೆ ಪ್ರಮುಖ ಪಾತ್ರವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

## ಬಳ್ಳಾರಿ ಜಿಲ್ಲಾ ಮಟ್ಟದ ೨ನೆಯ ನಾಟಕ ಸಮ್ಮೇಳನ :

ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾದ ಗೌಡರು, ಸ್ನೇಹಿತರೊಡಗೂಡಿ ಬಳ್ಳಾರಿ ಜಿಲ್ಲಾ ಮಟ್ಟದ ಎರಡನೇ ನಾಟಕ ಪರಿಷತ್ತನ್ನು ಬಳ್ಳಾರಿಯಲ್ಲಿ ನಡೆಸುವುದೆಂದು ನಿರ್ಣಯಕೈಕೊಂಡರು. ಆ ನಿರ್ಣಯದಂತೆ ದಿ: ೩೦-೧೨-೧೯೫೦ರಂದು ಸಮ್ಮೇಳನ ಕನ್ನಡದ ಅಂದಿನ ಖ್ಯಾತ ಕಲಾವಿದ ಶ್ರೀ ಆರ್. ನಾಗೇಂದ್ರರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಪರಿಷತ್ತಿನ ಅಭಿವೃದ್ಧಿ ನಿಧಿ ಸಂಗ್ರಹಕ್ಕಾಗಿ, ನಾಡಿನ ಬೇರೆ ಬೇರೆ ಕಡೆಗಳಲ್ಲಿ ನಾಟಕಗಳನ್ನಾಡಬೇಕೆಂಬ ನಿರ್ಣಯಕೈಕೊಂಡರು.

## ಬಳ್ಳಾರಿ ಜಿಲ್ಲಾ ಮಟ್ಟದ ೩ನೆಯ ನಾಟಕ ಸಮ್ಮೇಳನ :

ಪರಿಷತ್ತಿನ ಕಾರ್ಯವು ಉತ್ಸಾಹದಿಂದ ಮುಂದುವರೆದುಕೊಂಡು ಬಂದು, ಈಗಿನ ಆಂಧ್ರಪ್ರದೇಶದಲ್ಲಿ ಸೇರಿರುವ 'ಕಣೇಕಲ್ಲಿ'ನಲ್ಲಿ ಮೂರನೆ ಸಮ್ಮೇಳನದ ಏರ್ಪಾಟುಮಾಡಲಾಯಿತು. ದಿ: ೩೦-೩-೧೯೫೨ರಂದು ಜರುಗಿದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಕನ್ನಡದ ಖ್ಯಾತ ಸಾಹಿತಿ ಅ.ನ. ಕೃಷ್ಣರಾಯರು ವಹಿಸಿದ್ದರು.

ಈ ಸಮ್ಮೇಳನಗಳ ಸವಿನೆನಪಿಗಾಗಿ 'ಕಲಾ' ಎಂಬ ಪುಸ್ತಕವನ್ನು ಗೌಡರು ಸಂಪಾದಿಸಿ ಪ್ರಕಟಿಸಿದ್ದಾರೆ. ರಂಗಭೂಮಿಯ ಇತಿಹಾಸದ ಅಭ್ಯಾಸದ ದೃಷ್ಟಿಯಿಂದ ಇದು ಬಹುಮೌಲ್ಯವುಳ್ಳ ಕೃತಿಯಾಗಿದೆ.

## ರಾಘವ ಕಲಾಮಂದಿರದ ಸ್ಥಾಪನೆ :

ಬಳ್ಳಾರಿಯ ಸುಪ್ರಸಿದ್ಧ ನಾಟಕಕಾರ, ಶ್ರೀ ಟಿ. ರಾಘವರು ೧೯೪೬ರಲ್ಲಿ ತೀರಿ ಹೋದ ಮೇಲೆ, ಅವರ ಸ್ಮರಣಾರ್ಥ, ಬಳ್ಳಾರಿಯಲ್ಲಿ ಒಂದು ಕಲಾಮಂದಿರ ಸ್ಥಾಪಿಸಬೇಕೆಂದು, ಅವರ ಸ್ನೇಹಿತರು, ಹಿತೈಷಿಗಳು ಯೋಜಿಸಿದರು. ಇದರ ಫಲವಾಗಿ, 'ರಾಘವ ಸ್ಮಾರಕ ಸಮಿತಿ'ಯ ರಚನೆಯಾಯಿತು. ಆ ಸಮಿತಿಯ ಪ್ರಮುಖರಲ್ಲಿ ಗೌಡರೂ ಒಬ್ಬರೆಂಬುದನ್ನು ಗಮನಿಸಬೇಕು. ಗೌಡರು ತಮ್ಮ ಗುರುಗಳ ಸೇವೆಯನ್ನು ಈ ರೀತಿಯಿಂದಲಾದರೂ

ಮಾಡಬೇಕೆಂದು ನಿರ್ಧರಿಸಿಕೊಂಡರು. ಏಕೆಂದರೆ 'ರಂಗಭೂಮಿಯ ಅಭಿವೃದ್ಧಿ ಮತ್ತು ಉತ್ತಮ ಕಲಾವಿದನಾಗಿ ರೂಪುಗೊಳ್ಳುವ ಬಗೆಯನ್ನೆಲ್ಲಾ ಗೌಡರು, ರಾಘವರಿಂದಲೆ ಕಲಿತುಕೊಂಡಿದ್ದರು. ಅವರ ಜೊತೆ ದೀರ್ಘಕಾಲ ನಾಡನ್ನೆಲ್ಲಾ ಸುತ್ತಿ ನಾಟಕಗಳನ್ನಾಡಿದ್ದರು. ಎಷ್ಟೋ ಸಂದರ್ಭಗಳಲ್ಲಿ ರಾಘವರು ಹೃದಯತುಂಬಿ, ಭಾವತುಂಬಿ 'ಗೌಡರೇ! ನನ್ನ ನಂತರ ನೀವು' ಎಂದು ಉದ್ಗಾರ ತೆಗೆದು ಅಪ್ಪಿಕೊಂಡಿರುವುದುಂಟು. ಅಂತಹ ಗುರುವಿನ ಋಣವನ್ನು ಕಿಂಚಿತ್ತಾದರೂ ತೀರಿಸಬೇಕೆಂಬುದು ಗೌಡರ ಹಂಬಲವಾದುದು ಸಹಜವೇ ಆಗಿದೆ. ಈ ಮೂಲಕ ಗುರುವಿನ ಋಣತೀರಿಸಬೇಕೆಂಬ ಸಂಕಲ್ಪ ಮಾಡಿಕೊಂಡು, 'ರಾಘವ ಸ್ಮಾರಕ ಸಮಿತಿ'ಯ ಸದಸ್ಯರಾಗಿ, ಬಳ್ಳಾರಿಯಲ್ಲಿ 'ರಾಘವ ಕಲಾ ಮಂದಿರ'ವನ್ನು ಸ್ಥಾಪಿಸಬೇಕೆಂಬ ಹೋರಾಟವನ್ನು ಪ್ರಾರಂಭಿಸಿದರು. ಈ ಸಮಿತಿಯಲ್ಲಿ ಬಳ್ಳಾರಿ ಜಿಲ್ಲಾ ನ್ಯಾಯಾಧೀಶರು, ಜಿಲ್ಲಾಧಿಕಾರಿಗಳು ಕೂಡ ಸದಸ್ಯರಾಗಿದ್ದರು. ಸಮಿತಿ ಸದಸ್ಯರ ಅಭಿಪ್ರಾಯದಂತೆ, ಅಲ್ಲಲ್ಲಿ ನಾಟಕಗಳನ್ನಾಡಿ, ಕಟ್ಟಡದ ಸಲುವಾಗಿ ಹತ್ತು ಸಾವಿರ ರೂಪಾಯಿ ಹಣವನ್ನು ಕೂಡಿಸಲಾಯಿತು. ಆದರೆ ಇಷ್ಟರಿಂದಲೇ ಕಾರ್ಯಕೈಗೂಡುವಂತಿರಲಿಲ್ಲ. ಯಾವುದೊ ಉದಾಸೀನತೆಯಿಂದ ಹಿಡಿದ ಕಾರ್ಯ ಅಲ್ಲಿಗೆ ನಿಂತುಹೋಯಿತು. ಇದು ಗೌಡರ ಮನಸ್ಸಿಗೆ ತುಂಬ ಬೇಸರ ತಂದಿತೆಂದು ಬೇರೆ ಹೇಳಬೇಕಾಗಿಲ್ಲ, ಇದ್ದಕ್ಕಿದ್ದಂತೆ ಈ ಕಾರ್ಯಕ್ಕೆ ಹೇಗೊ ಜೀವಬಂದು, ರಾಘವ ಕಲಾ ಮಂದಿರ ಕಟ್ಟಡದ ಶಂಕುಸ್ಥಾಪನೆಯ ಕಾರ್ಯ, ದಿ: ೧೩-೧೨-೧೯೪೯ರಂದು ನೆರವೇರಿತು. ಮುಖ್ಯ ನ್ಯಾಯಾಧೀಶರು ಮತ್ತು ಅಂದಿನ ಕಂದಾಯಮಂತ್ರಿ ಸೀತಾರಾಮರೆಡ್ಡಿಯವರು ಈ ಕಾರ್ಯ ಪೂರೈಸಿದರು. ಅಂದುರಾತ್ರಿ 'ಚಿತ್ರನಳೀಯ' ಎಂಬ ನಾಟಕವನ್ನಾಡಲಾಯಿತು. ಶಂಕುಸ್ಥಾಪನೆಯೇನೂ ಆಯಿತಾದರೂ, ಕಟ್ಟಡದ ಕಾರ್ಯಪ್ರಾರಂಭವಾಗಲೇಯಿಲ್ಲ. ಹೀಗೆ ವರುಷಗಳ ಮೇಲೆ ವರುಷಗಳು ಉರುಳಿ ಸಮಾಜದ ಜನತೆಯ ಸಹಕಾರದಿಂದ, ಕಟ್ಟಡದ ಕಾರ್ಯ ಪೂರ್ತಿಯಾಗಿ ದಿ: ೧೬-೨-೧೯೬೪ರಂದು, ಅಂದಿನ ಮೈಸೂರು ರಾಜ್ಯದ ಗೃಹಮಂತ್ರಿಗಳಿಂದ ಉದ್ಘಾಟಿಸಲ್ಪಟ್ಟಿತು. ಅನೇಕ ಜನ ಮಹನೀಯರು ಕಲಾವಿದರು ಈ ಸಮಾರಂಭದಲ್ಲಿ ಪಾಲುಗೊಂಡಿದ್ದರು. ಕಟ್ಟಡ ಸಿದ್ಧವಾದ ಈ ಪ್ರಸಂಗವನ್ನು ಗೌಡರು ಮನತುಂಬಿ ಸ್ಮರಿಸಿಕೊಂಡಿದ್ದಾರೆ. "ನನ್ನ ಅಂದಿನ ಆನಂದ ಅಪಾರ. ಬಳ್ಳಾರಿಯಲ್ಲಿ ನಾಟಕ ಭವನವಾದುದೊಂದು ಪವಾಡ, ಬಳ್ಳಾರಿಯ ಕೀರ್ತಿಶಾಲಿಗಳೆಷ್ಟೋ ಜನರು ಗತಿಸಿ ಹೋಗಿದ್ದಾರೆ. ಆದರೆ ಅವರಲ್ಲಿ ಸ್ಮಾರಕವಾಗಿ ನಿಂತುದೆಂದರೆ ರಾಘವ ಕಲಾ ಮಂದಿರ" ಎಂದು ಗೌಡರು ಆತ್ಮಚರಿತ್ರೆಯಲ್ಲಿ ಉದ್ಘಾರ ತೆಗೆದಿದ್ದಾರೆ. ಹೀಗೆ ಇಂದು ತಲೆ ಎತ್ತಿ ನಿಂತಿರುವ ಬಳಾರಿಯ 'ರಾಘವ ಕಲಾ ಮಂದಿರ' ಗೌಡರ ಹೆಮ್ಮೆಯ ಕಾಣಿಕೆ ಎಂಬುದನ್ನೂ ಮರೆಯುವಂತಿಲ್ಲ ಅವರ ಜೊತೆಗೆ ಸಹಕರಿಸಿದ ಮಹನೀಯರೆಲ್ಲರೂ ಅಭಿನಂದನಾರ್ಹರಾಗಿದ್ದಾರೆ.

**ಜೋಳದರಾಶಿ ರಾಮೇಶ ಕಲಾಮಂದಿರದ ಸ್ಥಾಪನೆ :**

ಹಳ್ಳಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವುದು ತುಂಬಾ ಅಪರೂಪದ ಸಂಗತಿ. ಈಗ ಸುಧಾರಿಸಿದ ಭಾರತದ ಹಳ್ಳಿಗಳ ಮಾತು ಬೇರೆ. ಅಂದಿನ ಕಾಲದ ಕುಗ್ರಾಮವಾದ ಜೋಳದರಾಶಿ, ಗೌಡರ

ಸಾಧನೆಯಿಂದ, ಅನೇಕ ಪ್ರಗತಿಯನ್ನು ಕಾಣುವಂತಾಯಿತು. ಊರಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದ 'ರಾಮೇಶ ಕಲಾಮಂದಿರ'ವನ್ನು ಕಟ್ಟಬೇಕೆಂದು ಗೌಡರು ಯೋಚಿಸಿಕೊಂಡರು. ಈ ಕಾರ್ಯಕ್ಕೆ ಅವರು ಯಾರ ಸಹಾಯವನ್ನೂ ಪಡೆಯಲಿಲ್ಲ, ತಾವೇ ತಮ್ಮ ಸ್ವಂತ ಖರ್ಚಿನಿಂದ, 'ರಾಮೇಶ ಕಲಾ ಮಂದಿರ'ದ ಕಟ್ಟಡದ ಕಾರ್ಯವನ್ನು ಕೈಗೆತ್ತಿಕೊಂಡು, ಯಶಸ್ವಿಯಾಗಿ ಪೂರೈಸಿದರು. ಇದಲ್ಲದೆ ಇದೇ ಭವನದಲ್ಲಿ ಮಕ್ಕಳ ಶಿಕ್ಷಣ ಚೆನ್ನಾಗಿ ಸಾಗಲೆಂಬ ಉದ್ದೇಶದಿಂದ ಶಾಲೆಯು ನಡೆಯುವಂತೆ ಏರ್ಪಾಟು ಮಾಡಿದರು. ಕಟ್ಟಡದ ಮುಂಭಾಗದಲ್ಲಿ ಬಯಲು ರಂಗಭೂಮಿ ಮಾದರಿಯ ಕಟ್ಟಡ ವಿನ್ಯಾಸವಿದ್ದು ನಾಟಕ ಮುಂತಾದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಬರುವಂತಿದೆ.

ಇಲ್ಲಿಯ ಚಟುವಟಿಕೆಗಳು ನಿರಂತರವಾಗಿ ನಿರಾತಂಕವಾಗಿ ಸಾಗಿಕೊಂಡು ಬರಲೆಂಬ ಉದ್ದೇಶದಿಂದ 'ಶ್ರೀರಾಮೇಶ ಟ್ರಸ್ಟ್ ಕಮಿಟಿಯನ್ನು ಸ್ಥಾಪಿಸಿ, ಆ ಕಮಿಟಿಗೆ ತಮ್ಮ ೧೫ ಎಕರೆ ಜಮೀನನ್ನು ದಾನವಾಗಿ ಕೊಟ್ಟಿದ್ದಾರೆ. ಈ ಜಮೀನಿನಿಂದ ಬರುವ ಉತ್ಪತ್ತಿಯಿಂದ ಸಾಂಸ್ಕೃತಿಕ ಚಟುವಟಿಕೆಗಳು ಸರಾಗವಾಗಿ ಸಾಗಿಕೊಂಡು ಬರಲೆಂಬುದು ಗೌಡರ ಘನ ಉದ್ದೇಶ. ಈ ದಿಶೆಯಲ್ಲಿ ಅವರು ಮಾಡಿರುವ ತ್ಯಾಗ ಅನುಪಮವಾದುದು.

ಗೌಡರ ಅಭಿಮಾನದ ತ್ಯಾಗದ ಸಂಕೇತವಾದ 'ಶ್ರೀ ರಾಮೇಶ ಕಲಾಮಂದಿರ' ಭವನದ ಉದ್ಘಾಟನಾ ಕಾರ್ಯಕ್ರಮವು ದಿ: ೧೨-೧೨-೫೩ರಂದು ನೆರವೇರಿತು. ಅಂದಿನ ಜಿಲ್ಲಾ ಬೋರ್ಡ್ ಅಧ್ಯಕ್ಷ ವೈ. ಮಹಾಬಲೇಶ್ವರಪ್ಪನವರು ಅಧ್ಯಕ್ಷತೆವಹಿಸಿದ್ದರು. ಪಂ.ವೈ. ನಾಗೇಶ ಶಾಸ್ತ್ರಿಗಳವರು ಉದ್ಘಾಟಕರಾಗಿದ್ದರು.

**ಜೋಳದರಾಶಿ ಗ್ರಾಮ ಪಂಚಾಯತಿ ಅಧ್ಯಕ್ಷ :**

ಗೌಡರು ರಾಜಕೀಯ ಜೀವನದಲ್ಲಿಯು ಸೇವೆ ಸಲ್ಲಿಸಿದ್ದು ಜೋಳದರಾಶಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಸತತ ೧೫ ವರುಷ ಕಾರ್ಯ ನಿರ್ವಹಿಸಿಕೊಂಡು ಬಂದಿದ್ದಾರೆ. ಆದರೆ ರಾಜಕೀಯ ಜೀವನ, ಇಂದಿನ ಹೊಲಸು ರಾಜಕಾರಣಿಗಳಂತಿರದೆ, ಅನುಕರಣೀಯವಾದುದಾಗಿತ್ತು. ಅದು ರಾಜಕೀಯ ಹುದ್ದೆಯಾದರೂ, ಗೌಡರು ಕೈಗೊಂಡ ಬಹುತೇಕ ಸುಧಾರಣೆಗಳಲ್ಲಿ ಗ್ರಾಮಸುಧಾರಣೆ, ಸಾಮಾಜಿಕ ಸುಧಾರಣೆ ಮತ್ತು ಸಾಂಸ್ಕೃತಿಕ ಸುಧಾರಣಾ ಕಾರ್ಯಗಳು. ಅಂದಿನ ಪಂಚಾಯತಿಗಳಿಗೆ ಬರುತ್ತಿದ್ದ 'ಗ್ರ್ಯಾಂಟ್' ಅತ್ಯಲ್ಪವಾದುದು. ಅದರಲ್ಲಿ ಯಾವ ಸುಧಾರಣಾ ಕಾರ್ಯವೂ ನಡೆಯುವಂತಿರಲಿಲ್ಲ ಪಂಚಾಯತಿಗಾಗಿ ಪ್ರತ್ಯೇಕ ಆಫೀಸ್ ಇರಲಿಲ್ಲ ಗೌಡರ ಮನೆಯೇ ಆಫೀಸು. ಅವರು ತಿರುಗಾಡುವಾಗ, ಅವರೇ ಆಫೀಸು, ಇಂತಹ ದಿನಗಳಲ್ಲಿ ಗೌಡರು ಹಲವಾರು ಸುಧಾರಣಾ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆನ್ನುವುದು ಸೋಜಿಗದ ಸಂಗತಿಯೇ ಸರಿ.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶಾಲೆ ತೀರ ಅವಶ್ಯ. ತಾವು ಹನುಮಂತದೇವರ ಗುಡಿಯ ಎದುರಿನ, ಮರದ ಅಡಿಯಲ್ಲಿ ಉಸುಕಿನಲ್ಲಿ ಅಕ್ಷರ ಬರೆದು .ಶಾಲೆ ಕಲಿತ ಅನುಭವದ ಪಾಠ ಗೌಡರಿಗಿತ್ತು.

ಆದ್ದರಿಂದ, ಯಾವ ನಿರ್ದಿಷ್ಟ ಆದಾಯವೂ ಇಲ್ಲದ, ಗ್ರಾಮಪಂಚಾಯತಿ ವತಿಯಿಂದ, ತಾವು ಸ್ವಂತ ಖರ್ಚುಮಾಡಿ, ಶಾಲೆಯನ್ನು ನಡೆಸುತ್ತಿದ್ದರೆಂಬುದು ಹೆಮ್ಮೆ ಪಡಬೇಕಾದ ಸಂಗತಿ. ಇದರ ಜೊತೆಗೆ ಪಂಚಾಯತಿಗೆ ಒಂದು ಸುಸಜ್ಜಿತ ಗ್ರಂಥಾಲಯವನ್ನು ಒದಗಿಸಿಕೊಟ್ಟರು. ಇದರಿಂದ ಶಾಲೆಯ ಮಕ್ಕಳ ಜೊತೆಗೆ ಗ್ರಾಮದ ಆಸಕ್ತರು ಓದಿ ಮುಂದು ಬರಲು ಅನುಕೂಲ ವಾದಂತಾಯಿತು. ಇಂತಹ ಆರ್ಥಿಕ ಮುಗ್ಗಟ್ಟಿನಲ್ಲಿಯೇ 'ಪಂಚಾಯತ ಭವನ'ವನ್ನು ಕಟ್ಟಿಸಿದರು. ಸರಕಾರದ ವತಿಯಿಂದ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಿ, ಅಲ್ಲಿ ಸುಸಜ್ಜಿತ ಆಸ್ಪತ್ರೆ ನಡೆಯುವಂತೆ ಏರ್ಪಾಟುಮಾಡಿದರು. ಹೀಗೆ ಹತ್ತು ಹಲವು ಸುಧಾರಣಾ ಕಾರ್ಯಕ್ರಮಗಳನ್ನು ಕೈಕೊಂಡ ಗೌಡರು, ೧೯೫೭ರಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟರು.

## ಗೌಡರ ಷಷ್ಟ್ಯಬ್ದ ಸಮಾರಂಭಗಳು :

ಗೌಡರು ಗೈದ ಮಹತ್ ಸಾಧನೆಯನ್ನು ಅನುಲಕ್ಷಿಸಿ, ೧೯೭೦ರಲ್ಲಿ ಅವರಿಗೆ ಅರವತ್ತು ವರುಷಗಳು ತುಂಬಿದಾಗ, ಅನೇಕ ಸಂಘ-ಸಂಸ್ಥೆಗಳವರು, ವ್ಯಕ್ತಿ-ಮಿತ್ರರು ಅವರನ್ನು ಸನ್ಮಾನಿಸಿ-ಸತ್ಕರಿಸಿ ಗೌರವಿಸಿ ಸಂತೋಷ ಪಟ್ಟಿದ್ದಾರೆ. ನಿಜವಾಗಿಯೂ ಒಬ್ಬ ಹಳ್ಳಿಯ ರೈತನ ಮಗ ಗೈದಸಾಧನೆ ಇತರರಿಗಿಂತ ಸಣ್ಣದೇನಾಗಿರಲಿಲ್ಲ ಕಾರಣ ಅವರ ಷಷ್ಟ್ಯಬ್ದ ಸಮಾರಂಭಗಳು ಅತ್ಯಂತ ವೈಭವದಿಂದ ನೆರವೇರಿದವು. ಸಾಧಾರಣ ಸಂವತ್ಸರ, ಆಷಾಢ-ಬಹುಳ ಪಂಚಮಿಯಂದು ಗೌಡರಿಗೆ ಅರವತ್ತು ವರುಷಗಳು ತುಂಬುವ ವಾರ್ತೆ, ಬೆಂಗಳೂರಿನ ಅವರ ಸ್ನೇಹಿತ ಎ.ಎಸ್. ಚಂದ್ರಶೇಖರಪ್ಪನವರಿಗೆ ಮೊದಲೆ ತಿಳಿದಿತ್ತು. ಅರವತ್ತು ವರುಷ ತುಂಬಿದ ಮರುದಿನವೇ ಗೌಡರಿಗೆ ತಲುಪುವಂತೆ, ಅಂಚೆ ಮೂಲಕ, ಗೌಡರಿಗೊಂದು ಶಾಲು, ಗೌಡತಿಗೊಂದು ಕುಬಸದ ಖಣ ಕಳುಹಿಸಿಕೊಟ್ಟಿದ್ದರೆಂಬ ವಿಷಯ ಅಭಿಮಾನದ ದ್ಯೋತಕವಾಗಿದೆ. ಗೌಡರ ಸ್ನೇಹದ ಬಳ್ಳಿಯ ಪ್ರೀತಿಯ ಪುಷ್ಪ ಸಿಡಿಗಿನಮಳೆ ಚಂದ್ರಯ್ಯ, ಗೌಡರನ್ನು ದಂಪತಿ ಸಮೇತ ಬರಮಾಡಿಕೊಂಡು ತೃಪ್ತಿಯಾಗುವಂತೆ ಸತ್ಕರಿಸಿ, ಖುಷಿ ಪಟ್ಟಿದ್ದರು.

ಬಳ್ಳಾರಿ ಮೃತ್ಯುಂಜಯ ಕುಟೀರದಲ್ಲಿ ಶಿವಾನುಭವ ಸಂಘದ ಸಹಯೋಗದೊಂದಿಗೆ, ಪಂಡಿತ ವೈ. ನಾಗೇಶಶಾಸ್ತ್ರಿಗಳವರು ಸತ್ಕರಿಸಿ ಗೌರವಿಸಿದ್ದಾರೆ. ಉರ ಕೊಂಡೆಯ ಪೂಜ್ಯ ಶ್ರೀಗಳವರು, ಅದವಾನಿಯ ಚೌಕಿಮಠದಲ್ಲಿ ಭಕ್ತರ ಪರವಾಗಿ ಸತ್ಕರಿಸಿ ಆಶೀರ್ವದಿಸಿದ್ದಾರೆ. ಇದೇ ರೀತಿ ಕಂಪಲಿಯಲ್ಲಿಯೂ ಸನ್ಮಾನವಾಗಿದೆ.

ಯಾರೇ ಉಡುಗೊರೆ ಕೊಟ್ಟರು, ತವರಿನವರು ಕೊಟ್ಟ ಉಡುಗೊರೆಗೆ ಸಮನಾಗಲಾರದು ಎನ್ನುತ್ತಾರೆ. ಹಾಗೆಯೆ ಎಲ್ಲ ಕಡೆ ಸತ್ಕಾರ ಸಮಾರಂಭಗಳು ಜರುಗಿದರೂ, ಜೋಳದ ರಾಶಿಯ ಸತ್ಕಾರಕ್ಕೆ ಸಮನಾಗಿ ನಿಲ್ಲಲಾರವು. ಜೋಳದರಾಶಿ ಗ್ರಾಮದ ಗೌಡರ ಅಭಿಮಾನಿಗಳೆಲ್ಲಾ ಸೇರಿ, ಅತ್ಯಂತ ಅಭಿಮಾನದಿಂದ, ತಮ್ಮೂರ “ಕಲಾ ನಿಧಿ'ಯನ್ನು ಸತ್ಕರಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ಗದುಗಿನ ಶಿವಕವಿ, ಶ್ರೀ ಬಸವೇಶ್ವರ ತುಪ್ಪದವರು ಗೌಡರ ಗುಣಗಾನವನು 'ಸ್ನೇಹ ಸಮರ್ಪಣೆ'ಯಲ್ಲಿ ಹೀಗೆ ಮಾಡಿದ್ದಾರೆ. (೬-೯-೧೯೭೦).

…………………………….

ಬಂಧು ಬಳಗವು ರಾಶಿ ಗೆಳೆಯರಿಷ್ಟರು ರಾಶಿ

ಸುಂದರದ ರಸಿಕತೆಯ ನುಡಿಮುತ್ತುಗಳು ರಾಶಿ

ಒಂದೆಂಬ ಭಾವನೆಯ ಸುವಿಚಾರಗಳು ರಾಶಿ

ನಾಂದಿಯುತ್ತವವಿಂದು ಬರಲಿಹುದು ಶತರಾಶಿ - ಎಂದು, ಗೌಡರು ಶತಾಯುಸಿಗಳಾಗಿ ಬಾಳಲಿಯೆಂದು ಹಾರೈಸಿದ್ದಾರೆ.

ಆಂಧ್ರ ಮತ್ತು ಕರ್ನಾಟಕ ಹೀಗೆ ಉಭಯ ರಾಜ್ಯಗಳಿಗೂ ಗೌಡರು ಸಲ್ಲಿಸಿದ ಕಲಾಸೇವೆಯನ್ನು ಹೊಸಪೇಟೆಯ ರಂಗೋಪಂತ ನಾಗರಾಜರಾಯರು - 'ಶಬ್ದಾಂಜಲಿ' ಯಲ್ಲಿ ಬಣ್ಣಿಸಿದ್ದಾರೆ -

ಆಂಧ್ರ ಪಾವನವಣ್ಣ ಕರುನಾಡು ಪಾವನವು

ಬಂಧು ನಿನ್ನಿಂದದ ಕಲಾವಿದರ ಜೀವನವು

ನಿತ್ಯಧನ್ಯ ಕೃತಾರ್ಥ ಸತ್ಯವೇ ಶಿವನೆಂಬ

ನಿತ್ಯಾತ್ಮ ನಿನಗೀಯಲಾಯುಷ್ಯವನ್ನು ತುಂಬ......

ಎಂದು ಗೌಡರಿಗೆ ಹೆಚ್ಚಿನ ಆಯುರಾರೋಗ್ಯವನ್ನು ಬಯಸಿದ್ದಾರೆ.

ಹೀಗೆ ಸಾಂಸ್ಕೃತಿಕ ರಂಗದಲ್ಲಿ ಬಹುಮುಖ ಸೇವೆಗೈದ ಗೌಡರ ಅನುಪಮ ಜೀವನವನ್ನು ಬಲ್ಲವರು; ಅವರನ್ನು ಹೃದಯತುಂಬಿ ಬಣ್ಣಿಸಿದ್ದಾರೆ. ಗೌಡರ ಕಾರ್ಯರಂಗ ಕೇವಲ ಕಲಾ ಸೇವೆಗೆ ನಿಲ್ಲದೆ, ಸಾಂಸ್ಕೃತಿಕ ರಂಗದಲ್ಲಿಯೂ ಕೃಷಿಗೈದು, ಆಧ್ಯಾತ್ಮಿಕ ರಂಗದತ್ತ ದಾಂಗುಡಿಯಿಟ್ಟಿರುವುದನ್ನು ಇನ್ನು ಮುಂದೆ ನೋಡಬಹುದಾಗಿದೆ.

## ೭. ಆಧ್ಯಾತ್ಮಿಕ ಜೀವನ

ಬಹುಪುರಾತನ ಕಾಲದಿಂದಲೂ, ಭರತಭೂಮಿಯ ಹೆಗ್ಗಳಿಕೆ ಉಳಿದುಕೊಂಡು ಬಂದಿರುವುದು, ಆಧ್ಯಾತ್ಮಿಕತೆಯ ನೆಲಗಟ್ಟಿನ ಮೇಲೆ. ಮಹಾವೀರ - ಬುದ್ಧ ಬಸವೇಶ್ವರ ಮುಂತಾದ ಪುಣ್ಯ ಪುರುಷರ ಸಾಧನೆ, ಒಂದೊಂದು ಬಗೆಯದಾಗಿದೆ. ತಮ್ಮ ಸಂಕಲ್ಪದ ಸಾಕ್ಷಾತ್ಕಾರಕ್ಕಾಗಿ ಕೆಲವರು ಸಂಸಾರವನ್ನೇ ತ್ಯಜಿಸಿ, ವಿರಾಗಿಗಳಾಗಿ ಯಶಸ್ಸು ಪಡೆದರೆ, ಇನ್ನು ಕೆಲವರು, 'ಸಂಸಾರದಲ್ಲಿದ್ದುಕೊಂಡೆ ಸದ್ಗತಿ'ಯನ್ನು ಹೊಂದುವ ಬಗೆಯನ್ನು ತಾವು ಬಾಳುವುದರ ಮೂಲಕ ತೋರಿಸಿಕೊಟ್ಟರು. ಕೆಲವರಂತು, ಸಂಸಾರ ಬಂಧನಕ್ಕೊಳಗಾಗದ ಸನ್ಯಾಸಿಗಳಾಗಿ ಸಾಧನೆಯ ಪಥದಲ್ಲಿ ಮುನ್ನುಗ್ಗಿದವರು. ಇಂತಹ ಹಲವರು ಪುಣ್ಯ ಪುರುಷರು ಕಾಲಕಾಲಕ್ಕೆ

ಆಗಿಹೋಗಿದ್ದಾರೆ. ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಅರವಿಂದರು ಮುಂತಾದವರನ್ನೂ ಇಲ್ಲಿ ಸ್ಮರಿಸಬಹುದಾಗಿದೆ.

ವೀರಶೈವ ಧರ್ಮ, ಸನ್ಯಾಸವನ್ನು ಬೋಧಿಸುವುದಿಲ್ಲ, ಸಂಸಾರದಲ್ಲಿದ್ದುಕೊಂಡೆ ಸದ್ಗತಿ ಹೊಂದುವ ಮಾರ್ಗವನ್ನು ತೋರಿಸಿಕೊಟ್ಟಿದೆ. ಇನ್ನೂ ಸೂಕ್ಷ್ಮವಾಗಿ ಹೇಳುವುದಾದರೆ 'ಶರಣಸತಿ-ಲಿಂಗಪತಿ'ಯಾಗಿ ಬಾಳುವುದನ್ನು ಕಲಿಸಿಕೊಟ್ಟಿದೆ. ಈ ಸಾಧನೆಯ ಜೊತೆಗೆ ಸುಖ ಸಂಸಾರವನ್ನು ಸಾಗಿಸುವಂತೆ ಸೂಚಿಸುತ್ತದೆ. 'ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವ ಜೇಡರ ದಾಸಿಮಯ್ಯನ ವಚನವನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಹೀಗೆ ಬಾಳಿದ ಶರಣರು ಅನುಸರಿಸಿದ ಕರ್ಮ ಮಾರ್ಗ 'ಕಾಯಕವೇ ಕೈಲಾಸ'ವೆಂಬುದಾಗಿದೆ. ಸಾಧನೆಯ ಹಂತದಲ್ಲಿ ಸಹಾಯಕ್ಕೆ ಬರುವ ತತ್ವಗಳು, 'ಅಷ್ಟಾವರಣ' 'ಪಂಚಾಚಾರ' ಮತ್ತು 'ಷಟ್‌ಸ್ಥಲಗಳು'. ಮೈಗೂಡಿಸಿಕೊಳ್ಳಬೇಕಾದುದು 'ತ್ರಿವಿಧ ದಾಸೋಹ ಭಾವ. ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿಯ ನಂತರ ಹಾಗೂ-ಹೀಗೂ ಸಾಗಿ, ಮಧ್ಯೆ ಮಧ್ಯೆ ಕೆಲವು ಮಾರ್ಪಾಡುಗಳನ್ನು ಪಡೆದುಕೊಂಡು, ಇಂದಿಗೂ 'ಅರ್ಥಪೂರ್ಣವಾಗಿ ನಿಂತಿರುವ ತತ್ವಗಳಿವು.

ಇಂತಹ ವೀರಶೈವ ಧರ್ಮದಲ್ಲಿ ಜನಿಸಿದ ಅನೇಕ ಶರಣರು, ಮಹತ್ತಾದ ಸಾಧನೆಗೈದು ಆದರ್ಶಪ್ರಾಯರಾಗಿ ನಿಂತಿದ್ದಾರೆ. ಆ ಶರಣಪರಂಪರೆ ಇಂದಿಗೂ ನಡೆದುಕೊಂಡು ಬಂದಿದೆ. ಇಂತಹ ಪರಂಪರೆಯಲ್ಲಿ ಒಬ್ಬರಾಗಿ ಬದುಕಿದಂತವರಲ್ಲಿ "ಜೋಳದರಾಶಿ ದೊಡ್ಡನಗೌಡರೂ ಒಬ್ಬರು.

ಆಧ್ಯಾತ್ಮಿಕತೆ ಗೌಡರಿಗೆ ಬಾಲ್ಯದಿಂದಲೇ ಮೈಗೂಡಿಕೊಂಡು ಬಂದುದಲ್ಲ ಅವರ ವಿಶೇಷ ಆಸಕ್ತಿ 'ಕಲಾರಂಗ'ದಲ್ಲಿ ಇದ್ದುದರಿಂದ, ಈ ಕಡೆಗೆ ಅಷ್ಟಾಗಿ ಒಲವು ಮೂಡಲಿಲ್ಲವೆಂದು ತೋರುತ್ತದೆ. ಆದರೆ ಅವರಿಗರಿಯದೆ ಆರಿಸಿಕೊಂಡ "ಕಲಾರಂಗ'ವು ಕೂಡ, ಆಧ್ಯಾತ್ಮಿಕ ಸಾಧನೆಗೆ ಪೂರಕವಾಗಿತ್ತೆಂಬುದು, ಅವರಿಗೂ ತಿಳಿದಿರಲಿಕ್ಕಿಲ್ಲ ಗೌಡರು ಅಭಿನಯಿಸಿದ ಬಹುತೇಕ ನಾಟಕಗಳು ಭಕ್ತಿ ಪ್ರಧಾನವಾದ ನಾಟಕಗಳಾಗಿವೆ. ಬಸವೇಶ್ವರ, ಕನಕದಾಸ, ಕಬೀರದಾಸ, ರಾಮದಾಸ, ಶ್ರೀಕೃಷ್ಣ ನಾರದ, ಮುಂತಾದ ಪಾತ್ರಗಳಲ್ಲಿ ಮತ್ತೆ ಮತ್ತೆ ಅಭಿನಯಿಸಿ, ಆ ಮಹಾಪುರುಷರ ತತ್ವಗಳ ಪರಿಚಯ ಗೌಡರಿಗೆ ಸಾಕಾಷ್ಟಾಗಿದೆ. 'ಗಮಕ ಕಲಾನಿಧಿ' ಎಂಬ ಬಿರುದು ಪಡೆದ ಗೌಡರು, ತಮ್ಮ ಗಮಕಕ್ಕೆ ವಿಶೇಷವಾಗಿ ಬಳಸಿಕೊಂಡದ್ದು 'ಶೂನ್ಯ ಸಂಪಾದನೆ'. ಪ್ರವಚನ ಮಾಡಬೇಕಾದರೆ, ಅಲ್ಲಿನ ತಂತ್ರಗಳನ್ನೂ ತಿಳಿದಿರಲೇಬೇಕಲ್ಲವೆ? ಈ ಅರ್ಥದಲ್ಲಿ ಗೌಡರು ಆಯ್ದುಕೊಂಡಿದ್ದ ಕಲಾರಂಗವು ಕೂಡ ಅವರ ಆಧ್ಯಾತ್ಮಿಕ ಸಾಧನೆಗೆ ಪೂರಕವಾಗಿದೆ ಎಂದು ಹೇಳಿದ್ದು.

## ಮನೆತನದ ಭಕ್ತಿಯ ಸಂಸ್ಕಾರ :

ಗೌಡರ ಬದುಕಿನ ೪೦ ವರುಷಗಳು 'ನಾಟಕ' ಕಲೆಯಲ್ಲಿಯೆ ಕಳೆದು ಹೋಗಿವೆ. ಆಗ ಆಧ್ಯಾತ್ಮಿಕತೆಯ ಬಲವಿಲ್ಲದಿದ್ದರೂ, ಆ ಸಂಸ್ಕಾರ ಅವರಿಗೆ ಮೊದಲಿನಿಂದಲೂ ಇತ್ತೆಂಬುದು ತಿಳಿದುಬರುತ್ತದೆ. ಉರವಕೊಂಡೆಯ

ಪೂಜ್ಯ ಚನ್ನಬಸವ ಸಾಮಿಗಳವರು, ಆಗಾಗ ಜೋಳದರಾಶಿಗೆ ಬಂದು, ಗೌಡರ ಮನೆಯಲ್ಲಿ 'ಪೂಜೆ' ಪೂರೈಸಿಕೊಂಡು ಹೋಗುತ್ತಿದ್ದ ಉದಾಹರಣೆಗಳಿವೆ. ಅಂದರೆ ಗೌಡರ ಮನೆತನ ಭಕ್ತಿ ಸಂಪನ್ನ ಶರಣ ಮನೆತನ. ಪಕ್ಕದ ಚೇಳ್ಳಗುರಿಕೆ ಎಗ್ರಿತಾತನವರ ಬದುಕಿನ ಪ್ರಭಾವ ಆ ಭಾಗದಲ್ಲೆಲ್ಲಾ ಪಸರಿಸಿರುವಂತಹದು. ಇಂತಹ ಪರಿಸರದಲ್ಲಿ ಬೆಳೆದ ಗೌಡರಿಗೆ 'ಭಕ್ತಿ' ಸಂಪನ್ನತೆಯ ಸಂಸ್ಕಾರ ಬಾಲ್ಯದಿಂದಲೂ ಬೆಳೆದುಕೊಂಡು ಬಂದುದಾಗಿದೆ. ಆದರೆ ಅದೊಂದು ವ್ಯವಸ್ಥೆಯಲ್ಲಿ ಅಳವಟ್ಟು ಸಂಪೂರ್ಣ ತನ್ಮಯತೆಯನ್ನು ಹೊಂದಲು ಕೆಲವು ವರುಷಗಳು ಸಂದಿವೆ. ಅತ್ತ ಇತ್ತ ತೂಗಾಡಿದ ಉಯ್ಯಾಲೆ ಕೊನೆಗೊಂದು ನೆಲೆಗೆ ಬಂದು ನಿಲ್ಲುವಂತೆ, ಗೌಡರ ಆಧ್ಯಾತ್ಮಿಕ ಬದುಕಿನ ಸ್ಥಿತಿಯೂ ಆಗಿದೆ. ಈ ದಿಶೆಯಲ್ಲಿ ಧಾರವಾಡದ ಮುರುಘಾಮಠದ ಮೃತ್ಯುಂಜಯಪ್ಪಗಳ ಪ್ರಥಮ ದರ್ಶನವಾದುದು, ಗೌಡರ ಬದುಕಿನ ಮಹಾ ತಿರುವಾಗಿ ಪರಿಣಮಿಸಿದೆ. ಅಲ್ಲದೆ ಅವರು ಪೋಷಿಸಿಕೊಂಡು ಬಂದ ಕಲೆಯು, ಅವರಿಗೆ ಆಧ್ಯಾತ್ಮಿಕತೆಯ ಸಂಸ್ಕಾರ ನೀಡಿದೆ ಯಾವುದಕ್ಕೆ ಗೌಡರ ಮಾತುಗಳೇ ಸಾಕ್ಷಿಯಾಗಿವೆ: “ಕಾಲುವೆಗಳಿಂದ ಹರಿಯುವ ಜಲ ನಿನಾದದಲ್ಲಿ ಗಾಳಿಗೆ ತೂಗಾಡುವ ಮಹಾವೃಕ್ಷಗಳ ಮರ್ಮರ ಧ್ವನಿಯು ಮಿಳಿತ ವಾಗಿ ಲಲಿತ-ಮಧುರ ಮಯ ಶೃತಿಯಿಂದ ಆ ಪ್ರದೇಶವನ್ನು ಪುಲಕಿತಗೊಳಿಸುತ್ತಿತ್ತು. ಸಾಯಂಕಾಲ ಸಮಯ ಇನ್ನೂ ಶೋಭೆಯನ್ನುಂಟು ಮಾಡಿತ್ತು. 'ಶಂಭೋ ಮಹಾದೇವ' ಎಂಬ ನನ್ನ ಪ್ರಾರ್ಥನೆಯು ಆ ರಮ್ಯ ಪ್ರಕೃತಿಯ ಶ್ರುತಿಯಲ್ಲಿ ಲೀನವಾಗಿ ಹಾಡಿದಾಗ ಎಲ್ಲರೊಂದಿಗೆ ನಾನೂ ಮುಗ್ಧನಾಗಿ ಆ ಅಲೌಕಿಕ ಸಂಗೀತದಲ್ಲಿ ತನ್ಮಯನಾದೆ. ಇಂದಿಗೂ ಆ ಕೃತಿಯ ಓಂಕಾರ ನಿನಾದವನ್ನು ನೆನೆದಾಗ ಮೈನವಿರೇಳುತ್ತದೆ. ರಾಮಚಂದ್ರಸ್ವಾಮಿಗಳಂತೂ ಆನಂದದಿಂದ ಆ ವಿಶ್ವನಿನಾದದಲ್ಲಿ ತನ್ಮಯರಾಗಿ, “ವಿಶ್ವಗಾನ' ಎಂಬ ಕವಿತೆಯನ್ನು ರಚಿಸಿದರು. ಈ ಸನ್ನಿವೇಶ ನನ್ನ ಜೀವನದ ಆಧ್ಯಾತ್ಮಿಕಕ್ಕೆ ಪೋಷಕವಾಯಿತು' ಎಂದಿರುವ ಗೌಡರ ಪ್ರಾರಂಭದ ಈ ಸಾಧಕನ ಸ್ಥಿತಿ ಹಲವು ದಿನಗಳವರೆಗೆ ಅವರಿಗೆ ಅರ್ಥವಾಗದಂತೆಯೇ ಸಾಗಿಕೊಂಡು ಬಂದಿದೆ. ಚಿತ್ರದುರ್ಗದ ಜಯದೇವಸ್ವಾಮಿಗಳ ಮಹಾಸನ್ನಿಧಿಯಲ್ಲಿ ಪ್ರಸಾದನಿಲಯದ ಕಾರ್ಯಕ್ರಮಕ್ಕೆ ಬಾಗಲಕೋಟೆಯಲ್ಲಿ ಹಿರಿದಾದ ಪೆಂಡಾಲಿನಲ್ಲಿ ಪ್ರಾರ್ಥನೆ ಹೇಳುವ ಭಾಗ್ಯ ಅಲ್ಲಿಯವರು ನನಗೆ ನೀಡಿದ್ದರು. ಒಮ್ಮೆಲೆ ಸಭೆಯನ್ನು ನೋಡಿದೆ. ಕೈಕಾಲುಗಳು ನಡುಗಿದವು. ಸುಮಾರು ೧೦-೧೫ ಅಡಿಗಳ ಎತ್ತರದ ಮೇಲೆ ನಿಂತಿದೆ. 'ಶಿವ ಮಹಾದೇವ' ಪ್ರಾರ್ಥನೆಯು ಪ್ರಾರಂಭವಾದ ಕೂಡಲೇ ಜನಸ್ತಬ್ಧವಾಯಿತು. ನಡುಗುತ್ತಿದ್ದ ನನ್ನ ದೇಹ ವಜ್ರಶಕ್ತಿಯಿಂದ ಸೆಟೆದು ನಿಂತಿತು. ಪ್ರಾರ್ಥನೆ ಮಾಡಿದ ಕೂಡಲೇ ಸಮುದ್ರದಲೆಗಳಂತೆ ಸಮುದ್ರದುತ್ಸಾಹದ ಚಪ್ಪಾಳೆಗಳು ತೆರೆತೆರೆಯಾಗಿ ಸಭಾಂಗಣವನ್ನು ವ್ಯಾಪಿಸಿತು.

ಎಲ್ಲಿಯ ಶಕ್ತಿ ಎಲ್ಲಿಯ ಸ್ಫೂರ್ತಿ ನಾನು ಪಾಮರ. ಈ ಪ್ರಾರ್ಥನೆಯಿಂದ ನನ್ನಲ್ಲಿಲ್ಲದ ಒಂದು ದಿವ್ಯ ಶಕ್ತಿಯು ಒಮ್ಮೆಗೇನೇ ವಿದ್ಯುದ್ವಯದಂತೆ ಸಂಚರಿಸಿದಂತಾಗುತ್ತೆ. ಪ್ರಾರ್ಥನೆಯ ನಂತರ ಇದೆಲ್ಲಿಗೆ ಹೋಗುತ್ತದೆ? ಅದು ನನ್ನಲ್ಲಿ ಸದಾ ಏಕಿರುವುದಿಲ್ಲ? ಏಕಾಂತದಲ್ಲಿ ಪ್ರಾರ್ಥಿಸಿದಾಗ ಆ ಶಕ್ತಿ ಏಕೆ ಬರುವದಿಲ್ಲ? ಜನಶಕ್ತಿಯೇ ಶಿವಶಕ್ತಿಯಾಗಿ ಪರಿಣಮಿಸುವುದೆ? ಇರಬಹುದು, ಬಹುಕಾಲದಿಂದ ನನ್ನ ಅಲ್ಪ ಕಲೆಯನ್ನು ಜನಸೇವೆಯಲ್ಲಿ ಅರ್ಪಿಸಿದಾಗಲೆ, ಆ ದಿವ್ಯ ಶಿವಶಕ್ತಿಯು ನನ್ನಲ್ಲಿ ಮೂಡಿಬರುತ್ತದೆಂಬುದು ಅನೇಕ ಸಲ ಅನುಭವಕ್ಕೆ ಬಂದಿದೆ' ಎನ್ನುವ ಮಾತಿನಲಿ ಸಾಧಕನ ಹೊಯ್ದಾಟ, ತಳಮಳಗಳೆಲ್ಲಾ ವ್ಯಕ್ತವಾಗಿರುವುದು ತಿಳಿದುಬರುತ್ತದೆ. ಇಂತಹ

ತನ್ಮಯಪೂರ್ಣ ಅನೇಕ ಪ್ರಾರ್ಥನೆಗಳನ್ನು ನಾಡಿನ ಹಲವಾರು ಕಾರ್ಯಕ್ರಮಗಳಲ್ಲಿ ಹಾಡಿ ಜನರನ್ನು ಭಕ್ತಸಾಗರದಲ್ಲಿ ಗೌಡರು ತೇಲಿಸಿದ್ದಾರೆ. ಅದೊಂದು ರೀತಿಯಿಂದ, ಅವರ ಮನಸ್ಸು ಆಧ್ಯಾತ್ಮಿಕತೆಯತ್ತ ಚಾಚಲು ಸಹಕಾರಿಯಾಗಿದೆಂಬುದನ್ನು ಗಮನಿಸಬೇಕು. ಈ ಆಧ್ಯಾತ್ಮಿಕತೆ ಒಂದು ಮೂರ್ತ ಸ್ವರೂಪವನ್ನು ತಾಳಿ ಗಟ್ಟಿಗೊಳ್ಳಲು ಸಮರ್ಥ ಮಾಧ್ಯಮದ ಅವಶ್ಯಕತೆಯಿದ್ದಾಗಲೆ, ಧಾರವಾಡ ಮೃತ್ಯುಂಜಯಪ್ಪಗಳ ದರ್ಶನವಾದದ್ದು, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಹತ್ ಸಾಧನೆಯನ್ನು ಗೈದ ಋಷಿಜೀವಿಗಳವರು. ಆಚಾರಗಳನ್ನು ಬದುಕಿದ ನೀತಿವಂತರವರು. ಅಂಥವರ ದರ್ಶನಾಶೀರ್ವಾದದಿಂದ, ಹದಗೊಂಡಿದ್ದ ಗೌಡರ ಹೃದಯ ಗರಿಗೆದರಿ ಆಧ್ಯಾತ್ಮಿಕಾಕಾಶದಲ್ಲಿ ಸ್ವಚ್ಛಂದವಾಗಿ ವಿಹರಿಸಿತು. ಈ ವಿಷಯವನ್ನು ತಮ್ಮ ಆತ್ಮಚರಿತ್ರೆಯಲ್ಲಿ ವಿವರವಾಗಿ ಹೇಳಿಕೊಂಡಿದ್ದಾರೆ.

## ಬಳ್ಳಾರಿಯಲ್ಲಿ ಔಷಧೋಪಚಾರ :

ಬಿಡುವಿಲ್ಲದ ಚಟುವಟಿಕೆಗಳಿಂದಾಗಿ ಗೌಡರ ಆರೋಗ್ಯ ಬಿಗಡಾಯಿಸಿತು. ಜೋಳದರಾಶಿಯಲ್ಲಿ ಔಷಧೋಪಚಾರಗಳಿಗೆ ಅನುಕೂಲವಿರಲಿಲ್ಲವಾದ್ದರಿಂದ, ಆ ಕಾರಣಕ್ಕಾಗಿ ಅನಿವಾರ್ಯವಾಗಿ ಬಳ್ಳಾರಿಗೆ ಬರಬೇಕಾಯಿತು. ಹಾಗೆ ಬಂದಾಗ, ಪಂ.ವೈ. ನಾಗೇಶಶಾಸ್ತ್ರಿಗಳವರ ಮನೆಯ ಒಂದು ಭಾಗದಲ್ಲಿ ಉಳಿದುಕೊಂಡು ಆರುತಿಂಗಳ ಕಾಲ ಔಷಧೋಪಚಾರ ಪಡೆದು ಗುಣಹೊಂದಿದ್ದಾರೆ. ಈ ಪ್ರಸಂಗ ಗೌಡರಿಗೊಂದು ವರದಾನವಾಗಿ ಪರಿಣಮಿಸಿದೆ. ಅಲ್ಲಿ ಭಾಸ್ಕರಾಚಾರ್ಯ ರಾಮಚಂದ್ರಸ್ವಾಮಿಗಳವರು ಗೌಡರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದರು. ಶಾಸ್ತ್ರಿಗಳವರು ಬಳ್ಳಾರಿ ವೀರಶೈವ ಕಾಲೇಜಿನ ತಮ್ಮ ಪಾಠಗಳನ್ನು ಮುಗಿಸಿಕೊಂಡು ಬಂದಮೇಲೆ, ಗೌಡರ ಜೊತೆಗೂಡಿ, 'ವೀರಶೈವ ಸಿದ್ಧಾಂತ'ದ ಬಗೆಗೆ ಚರ್ಚೆ ನಡೆಸುತ್ತಿದ್ದರು. ಕೆಲದಿನಗಳ ಮೇಲೆ ಶಾಸ್ತ್ರಿಗಳು ಕಾಲೇಜು ಸೇವೆಯಿಂದ ನಿವೃತ್ತರಾದರು. ಆವಾಗಲಂತೂ ಗೌಡರಿಗೆ ಪೂರ್ಣಾವಧಿ ಬೋಧೆಯ ಅವಕಾಶ ದೊರೆಯಿತು. ನಿತ್ಯಚರ್ಚೆ ನಡೆದೇಯಿರುತ್ತಿತ್ತು. ಶೂನ್ಯ ಸಂಪಾದನೆಯಲ್ಲಿ ತಮಗೆ ತಿಳಿಯದ ಎಷ್ಟೋ ಕಠಿಣ ಪ್ರಸಂಗಗಳನ್ನು ಶಾಸ್ತ್ರಿಗಳಿಂದ ಹೇಳಿಸಿಕೊಂಡು, ತಿಳಿದುಕೊಂಡಿದ್ದಾರೆ. ಹೀಗೆ ಬಳ್ಳಾರಿಯ ಆರುತಿಂಗಳ ಅನಾರೋಗ್ಯದ ವಾಸ, ದೇಹ-ಮನ-ಬುದ್ಧಿಯಿಂದಲೂ ಸಮೃದ್ಧ ಆರೋಗ್ಯವನ್ನು ಹೊಂದಿ, ಊರಿಗೆ ಮರಳುವಂತಾಗಿದೆ. ಗೌಡರ ಬದುಕಿನಲ್ಲಾದ ಈ ಅನಾರೋಗ್ಯ ಪ್ರಸಂಗವೂ ದೈವಾನುಕೂಲವಾಗಿಯೇ ಪರಿಣಮಿಸಿದೆ. ಗೌಡರ ಬೌದ್ಧಿಕ ವಿಕಾಸಕ್ಕೆ ಸಹಾಯಕಾರಿಯಾಗಿದೆಯೆಂಬುದು ಗಮನಾರ್ಹವಾದುದು.

## ಶೂನ್ಯಸಂಪಾದನೆಯ ಪ್ರಭಾವ :

ಶೂನ್ಯಸಂಪಾದನೆಯ ದಟ್ಟ ಪ್ರಭಾವ ಗೌಡರ ಮೇಲಾಗಿ, ಎಷ್ಟೋ ಪ್ರಸಂಗಗಳಲ್ಲಿ ತಮ್ಮನ್ನೇ ತಾವು ಮೈಮರೆಯುವಂತಾಗಿದೆ. ಭಕ್ತಿಪೂರ್ಣವಾಗಿ ತನ್ಮಯತೆಯಿಂದ, ನಿರೂಪಿಸುವ ಕೆಲವು ಪ್ರಸಂಗಗಳ, ವಾಚನದ ಕಾಲದಲ್ಲಿ ಮೃತ್ಯುಂಜಯಪ್ಪಗಳು ಕಣ್ಣೀರು ಸುರಿಸಿರುವುದುಂಟು. ಸ್ವತಃ ಗೌಡರ ಕಂಠಬಿಗಿದು, ಪ್ರವಚನ

ನಿಲ್ಲಿಸಿರುವುದುಂಟು. ಸಭೆಯಲ್ಲಿ ಸೇರಿದ ಸಾವಿರಾರು ಜನರನ್ನು ಅಳಿಸಿರುವುದುಂಟು. ಅಂದರೆ ಅಲ್ಲಿನ ತತ್ವಗಳನ್ನು ಹೃದಯತುಂಬಿ ಅಷ್ಟೊಂದು ಪರಿಣಾಮಕಾರಿಯಾಗಿ ನಿರೂಪಿಸುವ ಭಾವಪರವಶತೆ ಗೌಡರದಾಗಿರುತ್ತಿತ್ತು ಎಂಬುದನ್ನು ನೆನೆದಾಗ, ಗೌಡರ ಭಕ್ತಿಭಾವದ ಮಹತ್ವದ ಅರಿವಾಗದಿರದು.

**ಏಕದೇವೋಪಾಸನೆ :**

ತಾವು ನಂಬಿದ ಧರ್ಮದ ತತ್ವದಂತೆ 'ಗೌಡರು' ಏಕದೇವೋಪಾಸಕರಾಗಿ ಬಾಳಿದ್ದಾರೆ. ಬಸವಣ್ಣನವರ ಬಾಲ್ಯದಲ್ಲಿ ಸ್ಥಾವರನಾದ ಕೂಡಲಸಂಗಮನೇ ಆರಾಧ್ಯ ದೈವವಾದಂತೆ, ಜೋಳದರಾಶಿಯ 'ರಾಮೇಶ' ಲಿಂಗಯ್ಯ ಗೌಡರ ಆರಾಧ್ಯಮೂರ್ತಿಯಾಗಿದ್ದಾನೆ. 'ಶರಣಸತಿ ಲಿಂಗಪತಿ' ನಿಷ್ಠೆಯಂತೆ, ತಾವು ಪೂಜಿಸುವ ಲಿಂಗಪತಿಗೆ, ತಾವು ಶರಣಪತಿಯಾಗಿ ಪೂಜೆಸಲ್ಲಿಸಿದ್ದಾರೆ. ಈ ತಿಳಿವಳಿಕೆಯನ್ನು ಆಚರಣೆಯಲ್ಲಿ ತಂದು, ಆ ತತ್ವವೇ ತಾವಾಗಿ ಬದುಕಿದ ಧಾರವಾಡ ಮೃತ್ಯುಂಜಯಪ್ಪಗಳು, ಉರವಕೊಂಡೆ ಚನ್ನಬಸವೇಶ್ವರರು, ಮುಂತಾದ ಪೂಜ್ಯರನ್ನು ಭಕ್ತಿಯಿಂದ ಗೌರವಿಸಿ ನಮಿಸಿದ್ದಾರಲ್ಲದೆ, ಆಧ್ಯಾತ್ಮಿಕತೆ ಲೋಕದ ಆದರ್ಶವನ್ನಾಗಿ ಸ್ವೀಕರಿಸಿದ್ದಾರೆ. ಅದರಂತೆ ಆಯಾಕ್ಷೇತ್ರದಲ್ಲಿ ಮನಸಾರ ದುಡಿದು ಸಾಧನೆಗೈದು, ಬಹು ಎತ್ತರದ ಸ್ಥಾನಕ್ಕೆ ಏರಿದ ವ್ಯಕ್ತಿಗಳನ್ನು ಗೌರವಿಸಿದ್ದಾರೆ. ಮನಾನಂದಕ್ಕಾಗಿ ರಾಮೇಶಲಿಂಗದ ಮುಂದೆ, ತಂಬೂರಿ ಶ್ರುತಿ ಮಾಡುತ್ತ, ಹಾಡುತ್ತ, ಆನಂದಪಟ್ಟಿದ್ದಾರೆ. ಇಷ್ಟಾಗಿಯೂ ತಮ್ಮ 'ಲಿಂಗಪೂಜೆ'ಯ ನಿಷ್ಠೆಯನ್ನು ಸದಾ ಕಾಪಾಡಿಕೊಂಡು ಬಂದಿದ್ದಾರೆ.

**ಬಸವನ ಕರ್ಮಭೂಮಿ ಬಸವಕಲ್ಯಾಣಕ್ಕೆ :**

ಅಣ್ಣನವರ ತತ್ವಗಳನ್ನು ಪ್ರಸಾರ ಮಾಡುತ್ತ ನಾಡನ್ನು ಸುತ್ತಿದ ಗೌಡರಿಗೆ ಆ ಮಹಾಪುರುಷನ ಪುಣ್ಯಭೂಮಿಯ ದರ್ಶನಭಾಗ್ಯ ಲಭಿಸಿರಲಿಲ್ಲ ಬಸವಣ್ಣನವರ ಎಂಟನೇ ಶತಮಾನೋತ್ಸವ ಸಂದರ್ಭದಲ್ಲಿ (೧೯೬೭ರಿಂದ ಡಿಸೆಂಬರ್ ೨೬) ಗೌಡರಿಗೂ ಕಲ್ಯಾಣಕ್ಕೆ ಬರುವಂತೆ ಆಹ್ವಾನ ಬಂತು. ಗೌಡತಿಯ ಅಪೇಕ್ಷೆಯ ಮೇರೆಗೆ, ಒಂದು ಟ್ಯಾಕ್ಸಿ ಮಾಡಿಕೊಂಡು ಕಲ್ಯಾಣಕ್ಕೆ ಹೊರಟರು. ಅಲ್ಲಿ ಸರಿಯಾದ ವ್ಯವಸ್ಥೆಯ ಇರಲಿಲ್ಲ, ಟ್ಯಾಕ್ಸಿ ಕೂಡ ಕಾಡುತ್ತಿತ್ತು. ಅಣ್ಣನವರ ತತ್ವಗಳನ್ನು ಮನಸಾರೆ ಒಪ್ಪಿಕೊಂಡು, ಆದಷ್ಟು ಆ ತತ್ವಗಳಿಗೆ ಹತ್ತಿರವಾಗಿ ಬಾಳಲು ಯತ್ನಿಸುತ್ತಿದ್ದ ಗೌಡರು, ಬಸವಣ್ಣನವರ ಕರ್ಮಭೂಮಿಯನ್ನು ನೋಡಲಪೇಕ್ಷೆಪಟ್ಟುದು ಸಹಜವೇ ಇದೆ. ಪಡಬಾರದ ತೊಂದರೆಪಟ್ಟು ಅತ್ತ ತಿರುಗಿ ನೋಡದಂತೆ ಫಜೀತಿಗೊಳಗಾಗಿ ಊರಿಗೆ ಬಂದು ಸೇರಿರುವುದಾಗಿ ಹೇಳಿಕೊಂಡಿದ್ದಾರೆ.

**ಬಸವಪುರಾಣ :**

ಆಧ್ಯಾತ್ಮಿಕ ಚಿಂತನೆಗೆ ಮನೆಯೇನು ಮಠವೇನು? ಜನರು ಸಾವಿರವಿದ್ದರೂ ಅಷ್ಟೆ ನೂರಿದ್ದರು ಅಷ್ಟೆ ಮೂಲತಃ ತತ್ವದ ತಿಳುವಳಿಕೆಯ ಆಸಕ್ತಿ ಮುಖ್ಯವಾದುದು. ಗೌಡರು ತಮ್ಮ ಮನೆಯ ಮಹಡಿಯ ಮೇಲೆಯೇ 'ಬಸವಪುರಾಣ' ಪ್ರವಚನವನ್ನು ಪ್ರಾರಂಭಿಸಿದರು. ಮೊದಮೊದಲು ಜನ ಸೇರದಿದ್ದರೂ, ಬರಬರುತ್ತ ಜಾಗೆ

ಸಾಲದಂತಾಗ ತೊಡಗಿತು. ಸತತ ನಾಲ್ಕು ತಿಂಗಳವರೆಗೆ ಪುರಾಣಪ್ರವಚನವನ್ನು ಸಾಗಿಸಿಕೊಂಡು ಬಂದು, ಧಾರವಾಡ ಮುರುಘಾಮಠದ ಪೂಜ್ಯ ಶ್ರೀಗಳವರ ನೇತೃತ್ವದಲ್ಲಿ ಮಂಗಲಗೊಳಿಸಲಾಗಿದೆ. ಈ ಸಂದರ್ಭದ ಸವಿನೆನಪಿಗಾಗಿ 'ಭಕ್ತಿ ಸಂಜೀವಿನಿ' ಎಂಬ 'ಭೀಮಕವಿ ಬಸವಪುರಾಣದ' ಆಯ್ದ ಕೆಲ ಪದ್ಯಗಳ ಸಂಗ್ರಹದ ಕಿರುಪುಸ್ತಿಕೆಯನ್ನು ಪ್ರಕಟಿಸಿ, ಉಚಿತವಾಗಿ ಹಂಚಲಾಯಿತು. ಮಂಗಲದ ದಿನದಂದು ನೂರಾರು ಜನರಿಗೆ ಅನ್ನ ಪ್ರಸಾದದ ಏರ್ಪಾಟು ಮಾಡಲಾಗಿತ್ತು. ಈ ಪ್ರಸಂಗ ಗೌಡರ ಉದಾರಭಕ್ತಿಯ ಸಂಕೇತದಂತಿದೆ.

**ಶಿವಾನುಭವ ಸಂಘ :**

ಧಾರವಾಡದ ಮೃತ್ಯುಂಜಯಪ್ಪಗಳ ನಿರ್ದೇಶನದ ಪ್ರಕಾರ, ಬಳ್ಳಾರಿಯ ಶ್ರೀ ಮಹಾಬಲೇಶ್ವರಪ್ಪನವರ ಮನೆಯಲ್ಲಿ 'ಶಿವಾನುಭವ ಸಂಘ'ವನ್ನು ೧೭.೧.೫೪ ರಂದು ಸ್ಥಾಪಿಸಿ, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಯಿತು. ಆಸಕ್ತರು ಆಗಾಗ ಅಲ್ಲಿ ಸೇರಿ ಧಾರ್ಮಿಕ ವಿಷಯಗಳ ಚಿಂತನೆ ಕೈಗೊಳ್ಳುವುದರ ಜೊತೆಗೆ, ಗೌಡರ ಶೂನ್ಯಸಂಪಾದನೆಯ ಪ್ರವಚನ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಾಗುತ್ತಿತ್ತು.

ಹೀಗೆ ಪ್ರವಚನ ಮಾಡುತ್ತ ಧಾರ್ಮಿಕ ಪ್ರಸಾರ ಕಾರ್ಯವನ್ನು ಕೈಕೊಂಡ ಗೌಡರಿಗೆ ಅನೇಕ ಮಠಮಾನ್ಯಗಳ ಪುಣ್ಯಪುರುಷರ, ಸಾಮಾಜಿಕರ ಸಂಪರ್ಕ ಒದಗಿಬಂದಿದೆ. ತಮ್ಮ ಅಂತರಂಗದ ಅನುಭಾವದ ವಿಕಸನಕ್ಕೆ ಕಾರಣಕರ್ತರಾದ ಪುಣ್ಯಜೀವಿಗಳ ಮೇಲೆ ಪದ್ಯಬರೆದು ಹಾಡಿಕೊಂಡಿದ್ದಾರೆ. ಅಂತಹ ಪದ್ಯಗಳನ್ನು ಕೂಡಾ ಸಭೆ ಸಮಾರಂಭಗಳಲ್ಲಿ ಹಾಡಿ ಭಕ್ತರ ಮನತೃಪ್ತಿಪಡಿಸಿದ್ದಾರೆ. ಅಂತಹವರಲ್ಲಿ ತಾವು ಕಂಡದರ್ಶನವನ್ನು ಕಾವ್ಯರೂಪದಲ್ಲಿ ಅಭಿವ್ಯಕ್ತಗೊಳಿಸಿ, ಸಂತೃಪ್ತಿ ಹೊಂದಿದ್ದಾರೆ.

**ಮಹಿಮಾಪುರುಷರ ಪದಗಳು :**

ಉರವಕೊಂಡ ಚನ್ನಬಸವೇಶ್ವರರ ಮಹಿಮೆಯನ್ನು ಕೊಂಡಾಡಲು 'ಲಾವಣಿ' ಯನ್ನೇ ಬರೆದು, ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಧಾರವಾಡ ಮೃತ್ಯುಂಜಯಪ್ಪಗಳ ಗುಣಗಾನಮಾಡಿ ಹಾಡಿಕೊಂಡಿದ್ದಾರೆ.

ತ್ಯಾಗಿಯಾಗಿ ಸದಾ ಲಿಂಗ ಭೋಗೋಪಭೋಗಿಯಾಗಿ
ತ್ಯಾಗಭೋಗದಾ ಸುಖದ ಸಾಮರಸ್ಯಯೋಗಿಯಾಗಿ
ಭೋಗತ್ಯಾಗಯೋಗವಲ್ಲವೆಂದು ನಡೆದು ತೋರಲೆಂದು

'ಲಿಂಗಭೋಗಿ'ಯಾಗಲೆಂಬ ಶ್ರೀಗಳ ವಿಚಾರವನ್ನು ಒಪ್ಪಿಕೊಂಡು ಮುನ್ನಡೆದಿದ್ದಾರೆ.

ನಾಮ ರೂಪುವಿಡಿದು ಧಾರವಾಡ ಮಠದ ನೆಪವಗೊಂಡು
ಸಮತೆಯಿಂದ ಸಕಲಜನರ ಶಾಂತಿಕಾಂತಿಯಾಗಿ ನಲಿದು

ರಾಮೇಶನಿಂದಲೆಮ್ಮನುಡಿಸಿ ನಡೆಸಿಸಲಹಲೆಂದು

ಶ್ರೀಗಳಿಗೆ ನೆಪಮಾತ್ರಕ್ಕೆ ಧಾರವಾಡವು ಒಂದು ನೆಲೆಯಷ್ಟೆ ಆತ ಸರ್ವರನ್ನು ಕಾಯುವ, ಸಲಹುವ ಯೋಗಿ ಎಂದು ಹಾಡಿಕೊಂಡಿರುವುದು ಮೃತ್ಯುಂಜಯಪ್ಪಗಳಲ್ಲಿ ಗೌಡರಿಗಿರುವ ಶ್ರದ್ಧೆ ಭಕ್ತಿಯ ದ್ಯೋತಕವಾಗಿದೆ.

ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಗೌಡರು ತಾಯಿಯ ಪ್ರಾಣಾಂತಿಕ ಸಮಯದಲ್ಲಿ 'ಎರ್ರಿತಾತನಲ್ಲಿ' ಶುಭವ ಬಯಸಿ, ದರ್ಶನಕ್ಕೆ ತಂದೆಯೊಂದಿಗೆ ಹೋದಾಗ 'ಹೋಗಯ್ಯ ಬಾಯಿ ಬಾಯಿ ಬಡಕೊ' ಎಂದು ತಾತನವರು ನಿಷ್ಠುರದ ಮಾತನಾಡಿದರು. ತಾಯಿತೀರಿಹೋದರಂದು. ಅಂದು ತಾತನಿಗೆ ತನ್ನ ಭಕ್ತನ ಮೇಲೆ ಕರುಣೆ ಬರಲಿಲ್ಲ ಆದರೆ ಆ ಕರುಣೆಯ ಕೃಪಾಕಟಾಕ್ಷ ಇಂದು ವಾಲಿದೆ -

ಇಂದಿಗೆ ದಯಬಂದಿತೇನಾ ॥ ಪ ॥

ಮಂದಭಾಗ್ಯನ ನೋಡಿ ನಿನಗೆ ॥ ಅ ॥

……..ಒಂದು ದಿನ ಕನಸಿನಲಿ ಕಂಡು

ಸುಂದರದ ಮೃದುಹೂಗಳಿತ್ತು

ಆದರಿಸಿ ಜ್ಞಾನವನ್ನು ಬೋಧಿಸಿ

ಅಂದಿನಿಂದರ್ಶನವನೀಯದೆ

ಕಂದನನು ಮರುಗಿಸಿದ ಮಹಿಮ

ಗೌಡರ ಕನಸಿನಲ್ಲಿಯೂ ಗುರುವಿನ ಧ್ಯಾನವೆ - ಎಂತಹ ಭಕ್ತಿ!

ಎಂತು ನಿನ್ನನು ನಿಂದಿಸಿದರೂ

ಎಂತು ಅಪರಾಧಗಳ ಗೈದರೂ

ತಂದೆ ಮಗನನು ಮರೆಯಲುಂಟೆ

ಇಂದು ದರ್ಶನವಿತ್ತು ಸಲಹಿದೆ ।

ಮುದದಿ ಚೇಳ್ಗುರಿಕೇಶ ಎರಿಗುರು -

ಎಂದು ಗುರುವಿನ ಸಾಕ್ಷಾತ್ಕಾರದ ಆನಂದಾನುಭವವನ್ನು ಹಾಡುಕಟ್ಟಿ ಹಾಡಿಕೊಂಡಿದ್ದಾರೆ. ಅವರ ಅಚಲ ಶ್ರದ್ಧೆ ವಿಶ್ವಾಸಗಳ ಪ್ರತೀಕವಾಗಿವೆ ಈ ಸಾಲುಗಳು. ತಮ್ಮ ಭಕ್ತಿಯ ಬದುಕಿನ ಮೇಲೆ ಬೆಳಕು ಚೆಲ್ಲಿದ ಮಹನೀಯರನ್ನು ಕುರಿತು ಪದ್ಯ ಹೆಣೆದಿದ್ದಾರೆ. ಕಲ್ಯಾಣ ಬಸವಣ್ಣ ವಿದ್ಯಾರಣ್ಯ, ಬಿ. ರಾಘವ, ಪಂ. ತಾರಾನಾಥ ಪಂಚಾಕ್ಷರಿ ಗವಾಯಿಗಳವರು ಶಿ.ಶಿ. ಬಸವನಾಳರು - ಮುಂತಾದವರ ಗುಣಗಾನವನ್ನು ತಮ್ಮ ಪದ್ಯಗಳಲ್ಲಿ ಹೃದಯತುಂಬಿ ಹಾಡಿದ್ದಾರೆ. ಇಲ್ಲಿ ಗೌಡರ ತೀವ್ರ ಶ್ರದ್ಧೆಯನ್ನು ಆರಾಧನಾಭಾವವನ್ನು ಕಾಣುತ್ತೇವೆ.

ಗೌಡರ ಭಕ್ತಿಯ ಪರಿಸರ ಬಹಳ ವಿಶಾಲವಾದುದು. ತತ್ವಪ್ರಸಾರದ ತಿರುಗಾಟದಲ್ಲಿ ಅನೇಕ ಮಠಮಾನ್ಯಗಳನ್ನು ಸುತ್ತಿ ಬಂದಿರುವರೆಂಬುದನನು ಈಗಾಗಲೇ ನೋಡಿದ್ದೇವೆ. ಅನೇಕ ಕಡೆಗಳಲ್ಲಿ

ಪ್ರವಚನಕ್ಕೆಂದು ಆಹ್ವಾನಿತರಾದ ಗೌಡರಿಗೆ ರಾಜಮನ್ನಣೆ - ವೈಭವದ ಆತಿಥ್ಯ ದೊರೆತರೆ, ಕೆಲವೆಡೆ ಹಾದಿಖರ್ಚಿಗೂ ದುಡ್ಡಿಲ್ಲದೆ ಬವಣೆಪಟ್ಟಿದ್ದಾರೆ. ಇಂತಹ ತಿರುಗಾಟದಲ್ಲಿ ಅವರು ಅನೇಕ ಆದರ್ಶವ್ಯಕ್ತಿಗಳನ್ನು ಸ್ವಾಮಿಗಳನ್ನು ಕಂಡಿದ್ದಾರೆ. ಅದರ ಹಾಗೆಯೆ, ಹಲವಾರು ಸ್ವಾರ್ಥಿಗಳನ್ನು , ದ್ರೋಹಿ ಗಳನ್ನೂ ಕಂಡಿದ್ದಾರೆ. ಅವರು ಒಳ್ಳೆಯದನ್ನು ಎಷ್ಟು ಮುಗ್ಧವಾಗಿ ಮೆಚ್ಚುತ್ತಾರೆಯೋ,

ಕೆಟ್ಟದ್ದನ್ನೂ ಅಷ್ಟೇ ನಿಷ್ಠುರವಾಗಿ ಖಂಡಿಸುತ್ತಾರೆ. ಆಧ್ಯಾತ್ಮ ಕೇಂದ್ರಗಳೆಂದು ಕರೆಯಿಸಿಕೊಳ್ಳುವ ಇಂದಿನ ವೀರಶೈವ ಮಠಗಳ ಬಗೆಗೆ ಬಹಳ ಖಾರವಾಗಿ, ಮಾತನಾಡುತ್ತಾರೆ. ಹಾಗೆ ಮಾತನಾಡುವಾಗ, ಅವರು ಅನುಭವಿಸಿದ ವೇದನೆಯ ಸಂಕಟವಿದೆ ಎಂಬುದನ್ನು ಮರೆಯುವಂತಿಲ್ಲ:

"....ನಾನು ತೀರಾ ಒಳ್ಳೆಯ ಸ್ವಾಮಿಗಳನ್ನು ನೋಡಿದ್ದೇನೆ. ತೀರಾ ಅಯೋಗ್ಯರನ್ನೂ ಕಂಡಿದ್ದೇನೆ. ಈಗಲೂ ನಮ್ಮಲ್ಲಿ ಒಂದಿಬ್ಬರು ಸ್ವಾಮಿಗಳು ಸಮಾಜದ ಬಗ್ಗೆ ನಿಜವಾದ ಕಳಕಳಿಯಿಂದ ದುಡಿಯುವವರಿದ್ದಾರೆ, ಆದರೆ ಬಹಳ ಜನ ಸ್ವಾಮಿಗಳು ಸುಖಭೋಗಗಳಲ್ಲಿ ಮುಳುಗಿ ತಮ್ಮ ಕರ್ತವ್ಯಗಳನ್ನೇ ಮರೆತಿದ್ದಾರೆ... ಈ ಬ್ರಹ್ಮಚಾರಿ ಸ್ವಾಮಿಗಳು ನಮಗಿಂತ ಸಂಸಾರಿಗರಿಗಿಂತ ಹೆಚ್ಚು ಲೋಭಿಗಳೂ, ಸ್ವಾರ್ಥಿಗಳೂ, ಭೋಗಿಗಳೂ ಆಗಿಬಿಟ್ಟರು. ಇಂಥವರಿಂದ ಏನು ಪ್ರಯೋಜನ? ಅದಕ್ಕೆಂದೇ ಮಠಗಳು ರಾಷ್ಟ್ರೀಕರಣವಾಗಬೇಕೆಂದು ನಾನನ್ನುವುದು?"... ಎಂದಿರುವ ಮಾತಿನ ಹಿಂದಿರುವ ಗೌಡರ ಕಳಕಳಿ ಏನೆಂಬುದನ್ನು ಬಿಡಿಸಿ ಹೇಳಬೇಕಾದ ಅವಶ್ಯಕತೆಯಿಲ್ಲ

ಹೀಗೆ ಚಿಕ್ಕಬಾಲಕಲಾವಿದನಾಗಿ ಪ್ರಬುದ್ಧ ನಟನಾಗಿ, ಗಮಕಿಯಾಗಿ ರೂಪುಗೊಂಡ ಗೌಡರು, ತಮ್ಮ ಕಲಾಪಥದಲ್ಲಿ ಬಹುದೊಡ್ಡ ಧಾರ್ಮಿಕ ಕವಲುಮಾರ್ಗವನ್ನು ಹಿಡಿದು, ಸಾಧನೆಯ ಮೂಲಕ ಅನುಭಾವಿಗಳಾಗಿ, ಅಧ್ಯಾತ್ಮಿಗಳಾಗಿ ರೂಪುಗೊಂಡು, ಶಿವನಡಿಯೆಡೆಗೆ ಸಾಗುವಾ ನಡೆಯನ್ನು ಸಂಪಾದಿಸಿದ ಅವರ ಆಧ್ಯಾತ್ಮಿಕ ಬದುಕು, ಒಂದು ಸಾರ್ಥಕ ಬದುಕಾಗಿದೆ.

## ೮. ಅನಂತರ

ಸಾಹಿತ್ಯ-ಸಂಗೀತ-ಕಲೆ ಮತ್ತು ಆಧ್ಯಾತ್ಮ ಲೋಕದ ಎಂಬತ್ತು ನಾಲ್ಕು ವರುಷಗಳ ಇತಿಹಾಸವನ್ನು ಮಡಿಲಲ್ಲಿಟ್ಟುಕೊಂಡು ಬಾಳಿದ ಗೌಡರ ಸಾರ್ಥಕ ಬದುಕು, ಅದರ ಪರಿಚಯವಿರುವ ಯಾರೇ ಆದರೂ ಹೆಮ್ಮೆ ಪಡುವಂತಿದೆ. ನಾಟಕಕಾರರಾಗಿ, ಗಮಕ ಕಲಾನಿಧಿಯಾಗಿ, ಪ್ರವಚನ ಪಟುವಾಗಿ, ಅವರು ಕನ್ನಡ ನಾಡಿಗೆ ಸಲ್ಲಿಸಿದ ಸೇವೆ ಅನುಪಮವಾದುದು. ಒಂದರ್ಥದಲ್ಲಿ ಜೋಳದರಾಶಿಯಲ್ಲಿ ಆ ಸೇವೆ ನಿರಂತರವಾಗಿ ನಡೆದೇ ಇತ್ತು. ಸಾಮಾನ್ಯವಾಗಿ ಪ್ರತಿಯೊಬ್ಬರೂ ದಾಂಪತ್ಯ ಜೀವನದಲ್ಲಿ ಬಯಸುವ 'ಮಕ್ಕಳ ಭಾಗ್ಯ' ಮಾತ್ರ ಗೌಡರಿಗಿಲ್ಲವಾಯಿತಾದರೂ 'ನಾನು ಪಿಂಡಸಂತಾನಿಯಲ್ಲ ನಾನು ಕಲಾಸಂತಾನಿ' ಎಂದುಕೊಂಡು ಸಮಾಧಾನ ಪಟ್ಟುಕೊಂಡಿದ್ದ ಅವರು, ಬದುಕಿನ ಸುಖ-ದುಃಖಗಳಲ್ಲಿ ಪಾಲುಪಡೆಯಲು ಮಕ್ಕಳಿಲ್ಲದಿದ್ದರೂ, ಮೋಹದ ಮಡದಿ

'ಹನುಮಕ್ಕಗೌಡತಿ'ಯಾದರೂ ಇದ್ದಾರೆಂಬ ಸಮಾಧಾನವಿತ್ತು ಅವರಿಗೆ 'ಗೌಡರಿಗೆ ಹನುಮಕ್ಕ ಗೌಡತಿ, ಹನುಮಕ್ಕ ಗೌಡತಿಯವರಿಗೆ ಗೌಡರು', ಹೀಗೆ ಪರಸ್ಪರರು, ಜೀವನದ ಸುಖ-ದುಃಖದ ಪ್ರಸಂಗಗಳಲ್ಲಿ ಭಾಗಿಯಾಗಿದ್ದರು. ಮೊದಲ ಮಡದಿ ಭೀಮಕ್ಕಗೌಡತಿಯವರ ಮರಣಾನಂತರ, ಗೌಡರ ಬಾಳಸಂಗಾತಿಯಾಗಿ ಬಂದ ಹನುಮಕ್ಕ ಗೌಡತಿಯವರು, ಗೌಡರಿಗೆ ಬಹುತೇಕ ನೆಮ್ಮದಿಯ ಬದುಕನ್ನು ನೀಡಿದರೆಂಬುದನ್ನು ಮರೆಯುವಂತಿಲ್ಲ ಆದರೆ ಬಾಳಿನುದ್ದಕ್ಕೂ ಬೆಂಗಾವಲಾಗಿ ನಿಂತು, ಗೌಡರ ಸಂಗಾತಿಯಾಗಿ ಬಾಳುವ ಪುಣ್ಯವನ್ನು ಅವರು ಪಡೆದುಕೊಂಡು ಬಂದಿರಲಿಲ್ಲ ಅಥವಾ ಅಂತಹ ಮಡದಿಯ ಸಹಯೋಗದಲ್ಲಿರುವ ಭಾಗ್ಯ ಗೌಡರಿಗಿರಲಿಲ್ಲವೋ! ಈ ಹಿಂದೆ ನೋಡಿರುವಂತೆ, ಅಂತಹ ಗೌಡತಿಯವರು ಗೌಡರ ಬದುಕನ್ನು ಬರಿದಾಗಿಸಿ, ಮಕ್ಕಳಿಲ್ಲದ ಮನೆಯಲ್ಲಿ ಗೌಡರನ್ನು ಒಂಟಿಯಾಗಿಸಿ, ದಿ: ೨-೩-೧೯೭೬ ರಂದು ಮರಣವನ್ನಪ್ಪಿದರು. ಇಲ್ಲಿಗೆ ಗೌಡರ ಮೋಹದ ಬಂಧನಗಳಿಗೆಲ್ಲಾ ಕಳಚಿದಂತಾದವು. ತಾನು-ತನ್ನವರೆನ್ನುವವರಾರೂ ಇಲ್ಲದಂತಾಯಿತು. ಹನುಮಕ್ಕ ಗೌಡತಿಯವರ ಅಗಲಿಕೆ ಗೌಡರ ಬದುಕಿನ ಮೇಲೆ ತೀವ್ರ ಆಘಾತವನ್ನುಂಟು ಮಾಡಿತು. ಮನಸ್ಸಿಗಾದ ಆ ನೋವನ್ನು ಯಾರ ಮುಂದೆ ಹೇಳಬೇಕು? ಹೀಗಾಗಿ ಗೌಡತಿಯ ಮರಣಾನಂತರದ ಗೌಡರ ಬದುಕಿನ ಗತಿಯೇ ಬದಲಾಯಿತೆನ್ನುವುದನ್ನು ನೋಡಬಹುದು.

ಅಂದು ತಾತ ಕಟ್ಟಿಸಿದ ಭವ್ಯವಾದ ಮಹಡಿಯ ಮನೆ, ಮಹಡಿಯ ಮೇಲಿನ ವಿಶಾಲವಾದ ಪ್ರಾಂಗಣ. ಅದಕ್ಕೆ ಹೊಂದಿಕೊಂಡ ವಿಶ್ರಾಂತಿ ಕೊಠಡಿಗಳು. ಪ್ರಾಂಗಣದ ಗೋಡೆಯ ಮೇಲೆ ನೇತಾಡುವ, 'ಜೀವಗಾತ್ರ'ದ ಬಸವೇಶ್ವರ, ಮೃತ್ಯುಂಜಯಪ್ಪ ಎರ್ರಿತಾತ, ಚನ್ನಬಸವ ಸ್ವಾಮಿಗಳವರ ತೈಲಚಿತ್ರಗಳು, ಎದುರಿನ ಗೋಡೆಗೆ ಹೊಂದಿಕೊಂಡಿರುವ, ಹಿಂದಿನ ಕಾಲದ ಹಿರಿದಾದ ಅರಾಮಕುರ್ಚಿಯ ಮೇಲೆ ಕುಳಿತಿರುತ್ತಿದ್ದ ಗೌಡರನ್ನು ಕಂಡ ಯಾರೇ ಆಗಲಿ ಮಂತ್ರಮುಗ್ಧರಾಗುತ್ತಿದ್ದುದು ಸಹಜವಾಗಿತ್ತು. ಎತ್ತರವೂ ಅಲ್ಲದ, ಕುಳ್ಳಗೂ ಅಲ್ಲದ ಸಾಧಾರಣ ನಿಲುವು, ಬೆಳ್ಳಿಯಂತೆ ಬೆಳ್ಳಗಾದ, ಉದ್ದವಾದ ಕೂದಲುಗಳನ್ನು ಹಿಂದಕ್ಕೆ ಓರಣವಾಗಿ, ಎತ್ತಿ ಬಾಚಿಕೊಂಡಿರುವ ಬಿಳಿಯ ತಲೆ, ಹರವಾದ ಹಣೆ, ದೊಡ್ಡ ದೊಡ್ಡ ಕಿವಿಗಳು, ನರೆತ ಹುಬ್ಬುಗಳು, ಸಮಚಿತ್ತ ನೋಟದ ಕಾಂತಿಯುಕ್ತ ಕಣ್ಣುಗಳು, ಉದ್ದನೆಯ ಮೂಗು, ದುಂಡಾದ ಮುಖ, ಮುಖದ ತುಂಬೆಲ್ಲ ನಿರಿಗೆಗಳಿದ್ದರೂ, ಕಾಂತಿತುಂಬಿದ ಆಕರ್ಷಣೆ, ಬಿಳಿಯ ಬಟ್ಟೆ ಧರಿಸಿದ ರೀತಿ ನೋಡುಗರನ್ನು ಪ್ರಸನ್ನರನ್ನಾಗಿಸುತ್ತಿತ್ತು. ನಿರ್ಲಿಪ್ತತೆಯ ಛಾಯೆ ಮುಖದ ತುಂಬೆಲ್ಲ ಆವರಿಸಿದಂತೆ ಎದ್ದು ತೋರುತ್ತಿತ್ತು. ಸಮಾಧಾನ ಚಿತ್ತದಿಂದ ಬಂದವರ, ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ಗೌಡರು, ಋಷಿಸದೃಶರಂತೆ ಕಾಣುತ್ತಿದ್ದರು. ಅವರ ಮಾತನ್ನು ಕೇಳುತ್ತ.... ಕೂತಿದ್ದಂತೆ ಕುತೂಹಲ ಮೂಡಿ, ಅವರು ಇನ್ನಷ್ಟು ಎತ್ತರದ ವ್ಯಕ್ತಿಗಳಾಗಿ ಕಾಣುತ್ತಿದ್ದರು. ತಾವು ನಡೆದು ಬಂದ ಎಂಬತ್ತರಾಚೆಯ ಪಯಣದ ಅನುಭವಗಳ ಒಂದೊಂದೇ ಎಳೆಗಳನ್ನು ಬಿಚ್ಚುತ್ತಾ ಹೋದಂತೆ ಸೋಜಿಗವೆನಿಸುತ್ತಿತ್ತು.

ಗೌಡರು ಬಂಧಮುಕ್ತರಾಗಿ ಬಾಳಿದವರು. ತಮ್ಮ ತಾತನಿಂದ ಬಳುವಳಿಯಾಗಿ ಬಂದ ಜಮೀನನ್ನು ತಮ್ಮನ್ನು ಅವಲಂಬಿಸಿ ಬದುಕುವವರಿಗೆ, ದಾನ ಧರ್ಮಕ್ಕೆ ಸರಕಾರಕ್ಕೆ ನೀಡಿ, ಕೈ ತೊಳೆದುಕೊಂಡರು. ಇರುವ

ಮೂರು ಮನೆಗಳನ್ನು, ಒಬ್ಬೊಬ್ಬರಿಗೆ ವಸತಿ ಅನುಕೂಲಕ್ಕಾಗಿ ಬಿಟ್ಟುಕೊಟ್ಟು ಒಂದು ಮನೆಯ ಮಹಡಿಯಲ್ಲಿ ಮಾತ್ರ ತಾವು ವಾಸವಾಗಿದ್ದರು.

ಮಕ್ಕಳ ಬಂಧನ ಮೊದಲಿನಿಂದಲೂ ಇರಲಿಲ್ಲ. ಇದ್ದ ಮಡದಿ ಕಣ್ಮುಚ್ಚಿದಳು. ಮುಪ್ಪು ದಿನೇ ದಿನೇ ದೇಹದ ಮೇಲೆ ತನ್ನ ಕರಾಳ ಛಾಯೆಯನ್ನು ಚಾಚತೊಡಗಿತ್ತು. ಔಷಧೋಪಚಾರದಿಂದ ದೇಹ ದಣಿದು ಹೋಗಿತ್ತು. ದಣಿದು ಬೇಸತ್ತ ಜೀವನವನ್ನು ಉಪಚಾರ ಮಾಡುವವರು ಇರಲಿಲ್ಲವೆಂದು; ತನ್ನವರಿಲ್ಲವೆಂಬ ಕೊರಗು ಇದ್ದೇ ಇತ್ತು. ಗೌಡರ ಕಾವ್ಯವನ್ನು ಓದುವಾಗಲೆಲ್ಲ ಈ ಅನುಭವ ಸ್ಪಷ್ಟವಾಗಿ ಗೋಚರವಾಗುತ್ತದೆ.

'ನಾನು ಪಿಂಡಸಂತಾನಿಯಲ್ಲ ನಾನು ಕಲಾಸಂತಾನಿ' ಎಂದು ಹೇಳಿಕೊಂಡಿದ್ದರೂ, ಮಕ್ಕಳಿಲ್ಲದ ಕೊರಗು ಅವರನ್ನು ಬಹುವಿಧವಾಗಿ ಬಾಧಿಸಿದೆ - ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮಾತೆಯಿಲ್ಲ ಮಡದಿಯಿಲ್ಲ
ಮಕ್ಕಳಿಲ್ಲ ಮೋದವಿಲ್ಲ
ಮುಪ್ಪಿನೊಡಲಿಗಾಸರಿಲ್ಲ
ಮನವರಿತು ನಡೆವರಿಲ್ಲ

ಹೀಗೆ ಒಂಟಿಜೀವಕ್ಕೆ ಯಾರೂ ಇಲ್ಲದಿದ್ದರೂ, 'ನಾವಿದ್ದೇವೆ' ಎಂದು ಹೇಳಿಕೊಳ್ಳುವ ಸಂಬಂದಿಗಳಿಗೇನು ಕೊರತೆಯಿರಲಿಲ್ಲ.

ಮಕ್ಕಳಿಲ್ಲದ ಮನೆಗೆ ಯಾರಾರೊ ಬಂಧುಗಳು
ಒಕ್ಕಲಿದ್ದರು ನಿನ್ನ ಗತಿಗಾವೆ ನೆಲೆಯೆಂದು
ಸಿಕ್ಕಿದುದತಿಂದುಂಡು ಸೊಕ್ಕಿ ನಲಿದಾಡಿದರು
ಮಕ್ಕಳಿಲ್ಲದ ಬಾಳು ಇಂತೆಂದು ತೋರಿದರು.

ಇಲ್ಲಂತು, ಮಕ್ಕಳಿಲ್ಲದ ಕೊರತೆ ಬಹುವಿಧವಾಗಿ ಕೊರಗಿಸಿರುವ, ಗೌಡರ ಅಂತರಂಗದ ತಳಮಳ ಎದ್ದು ತೋರುತ್ತದೆ. ಯಾರಿದ್ದರೂ ಮಕ್ಕಳಿದ್ದಂತಾಗಲಾರದೆಂಬುದನ್ನು ಇಲ್ಲಿ ಹೇಳಿಕೊಂಡಿರುವುದು ಸ್ಪಷ್ಟವಾಗಿದೆ. ಕವಿಯ ಈ ನೋವು ಇಲ್ಲಿಗೆ ನಿಲ್ಲುವದಿಲ್ಲ :

ಸತಿಯಿಲ್ಲದಾ ಮನೆಯು ಜೀವಂತ ಮಸಣವು
ಸುತರಿಲ್ಲದಡೆ ಇದ್ದವನೆ ಭೂತ ತಾನಹನು
ಮತಿಗೆಟ್ಟು ಇಂತಿದ್ದರೇನುಂಟು
ಮತ್ತಾವ ಹಾವಿನಾ ಹುತ್ತಾದರೂ ಸೇರು.

ಮಡದಿಯಿಲ್ಲದ ಮನೆ ಮಸಣಕ್ಕೆ ಸಮನವಾಗಿ ಪರಿಣಮಿಸಿದೆ. ಮಕ್ಕಳಿಲ್ಲದ ಮನೆಯಲ್ಲಿ ವಾಸಿಸುವ ತಾನೇ ಮಸಣದಲ್ಲಿ ವಿಹರಿಸುವ ಭೂತದಂತಾಗಿದ್ದಾನೆ. ಹೀಗೆ ಬುದ್ಧಿಗೆಟ್ಟು ಬದುಕುವದಕ್ಕಿಂತ 'ಮತ್ತಾ ಹಾವಿನಾ ಹುತ್ತಾದರೂ ಸೇರು' ಎನ್ನುವಲ್ಲಿಯ ಭಾವ ತೀವ್ರತೆ, ಧ್ವನಿಯನ್ನು ಗುರುತಿಸಬಹುದಾಗಿದೆ. ಇಂತಹ ಬದುಕನ್ನು ಬಾಳುವದಾದರೂ ಏತಕ್ಕೆ? ಯಾರಿಗಾಗಿ? ಹೀಗೆ ಎಷ್ಟೋ ಸಾರಿ ತಮ್ಮನ್ನೇ ತಾವು ಕೇಳಿಕೊಂಡಿದ್ದಾರೆ. ಬದುಕಿನುದ್ದಕ್ಕೂ ಸಾಗಿಬಂದ ಆಪ್ತರೆಲ್ಲರು ಕಣ್ಮುಚ್ಚಿ ದೂರಾಗಿ ಹೋಗಿರುವಾಗ, ತಾವು ಬದುಕಿದ್ದಾದರೂ ಏಕೆಂದು ಕೊರಗಿದ್ದಾರೆ.

ನಾಟಕವೆ - ನಟನೆಯ, ಕಾವ್ಯ ಸಂಗೀತವೇ
ಒಡನಾಡಿ ಗೆಳೆಯರೆ ರಸಿಕ ಸಲ್ಲಾಪಗಳೆ
ಬೇಡುವರಿಲ್ಲದೆ ಬಡವಾದವೆನ್ನ ಕಲೆಗಳು
ಬೇಡ ನೀರಸ ಬಾಳು ನೀಗಿಸೋ ರಾಮೇಶ

"ಬೇಡುವವರಿಲ್ಲದೆ ಬಡವಾದ ಕಲೆ'ಗಳನ್ನು ತುಂಬಿಕೊಂಡಿರುವ 'ನೀರಸಬಾಳು' ಸಾಕಾಗಿ ರಾಮೇಶನಿಗೊಪ್ಪಿಸುವ ತವಕದಲ್ಲಿ ನಿರತವಾದಂತಿದೆ.

'ಬಾಯೆಂಬರಿಲ್ಲಯ್ಯ ಹೋಗೆಂಬರಿಲ್ಲಯ್ಯ
ತಾಯೆಂಬರೆಲ್ಲರು ದೂರಾದರಿಂದಿಗೆ

ಉಪಚಾರಮಾಡುವವರಂತು ಯಾರೂ ಉಳಿದಿಲ್ಲ, ಕಳೆದುಹೋದ 'ಆಸ್ತಿ'ಗಾಗಿ 'ತಾಯೆಂಬ'ರು ದೂರಾಗಿದ್ದಾರೆ. ಒಂದು ದೃಷ್ಟಿಯಿಂದ ಒಳ್ಳೆಯದೆ ಆಗಿವೆಯೆಂದು ಸಮಾಧಾನದ ಉಸಿರಿಟ್ಟಿದ್ದಾರೆ. ಅಂತರಂಗದಲ್ಲಿ ಒಂದಾಗಿ ಕಾಡುವ ನೆನಪುಗಳನ್ನು ಗೌಡತಿಗೆ ಹೇಳಿಕೊಳ್ಳುವ ರೀತಿ ವಿಶಿಷ್ಟವಾಗಿದೆ:

'ನಿದ್ದೆಯಲಿ ಕನಸಾಗಿ ಎದ್ದು ಬಾ ಎನ್ನರಸಿ
ಎಚ್ಚರಾಗುವ ಮುನ್ನ ಕಂಡೊಂದು ಮಾತಾಡು -

ಎಂದು ಅಗಲಿಹೋದ ಮಡದಿಯಲ್ಲಿ ಬಿನ್ನವಿಸಿಕೊಂಡಿರುವುದು ಅವರ ಅಸಹಾಯಕತೆಯನ್ನು ಅಂತರಂಗದ ತಳಮಳವನ್ನು ಎತ್ತಿತೋರಿಸುತ್ತದೆ. ಸುಖವಾಗಲಿ, ದುಃಖವಾಗಲಿ, ಆಪ್ತರಿಗೆ ಹೇಳಿಕೊಂಡಾಗಲೆ ಹಗುರವೆನಿಸುವುದು. ಆಪ್ತರೆಲ್ಲರೂ ದೂರಾಗಿ ಹೋದಾಗ, ಸತ್ತುಹೋದ ಮಡದಿಯಲ್ಲಿಯೇ ಬಿನ್ನವಿಸಿಕೊಳ್ಳುವ ಸನ್ನಿವೇಶ ಹೃದಯವಿದ್ರಾವಕವಾಗಿದೆ.

ನೀನಗಲಿ ಹೋದ ಬಳಕೆನ್ನ ಬಾಳಿನ ಕಥೆಯ
ಎನ್ನವರು ಕಡೆಗಣಿಸಿ ಎನ್ನಕಾಣುವ ವ್ಯಥೆಯ
ತನುವೆಳಸುವಾರ್ರೈಕೆಗೆರವಾದ ಬವಣೆಗಳ
ಇನ್ನೇನೊ ಗುಟ್ಟದು ನಿನ್ನೊಡನೆ ಆ ಮಾತು....

ಎನ್ನುವಲ್ಲಿ ಶೋಕಭಾವ ಓದುಗರ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಮಡದಿ ದೂರಾದಮೇಲೆ ಪಟ್ಟಬವಣೆ, ಅನಾದರಕ್ಕೊಳಗಾದ ಜೀವ ಎಂದಿಗೂ ಹೇಳಿಕೊಂಡು ಬಂದಂತೆ, ಇಂದಿಗೂ 'ಗುಟ್ಟಿನ ವಿಷಯವನ್ನು ಹೇಳಲು ತವಕಿಸುತ್ತಿರುವುದು, ಮಡದಿಯ ಅಗಲಿಕೆಯ ನೋವನ್ನು ಸಚಿತ್ರವಾಗಿ ತುಂಬಿಕೊಂಡು ನಿಂತಂತಿದೆ.

ಯಾರಿಗುಸುರಲು ಬಾರದೆನ್ನ ಮನದಾಸೆಗಳ
ಇರುವತನಕ ನೀನರಿದು ಸಂತೈಸಿ ಮರೆಯಾದೆ
ಮರೆಯಾದರೂ ಮರೆಯದೀ ಮನವು ಹಗಲಿರುಳು
ಉರಿಯಾಗಿ ಸುಡುತಿಹುದು ಪರಿಹಾರವೇನಿದಕೆ

ಎನ್ನುವಲ್ಲಂತೂ ಮಡದಿಯ ಅಗಲಿಕೆಯ 'ನೋವು' ಪರಾಕಾಷ್ಠೆ ಮುಟ್ಟಿ ನಿಂತಿದೆ. ಅವಳ ನೆನಪು 'ಉರಿಯಾಗಿ ಸುಡುತ್ತಿದೆ' ಎಂದು ಭಾಸವಾಗುತ್ತದೆ.

ದಿನದಿನಕೆ ಮಪ್ಪಾಗಿ ಕುಗ್ಗಿ ಮುಗ್ಗುವ ಕಾಯ
ಅನುನಯಕೆ ಹೊರತಾಗಿ ಬಾಳುವೀ ಜೀವ
ಇನಿತಾದರು ಸಾವು ಎನ್ನ ಮರೆತಿಹುದೇಕೊ
ಮುನಿದಹನು ರಾಮೇಶ ಮುಂದಿನಾ ಗತಿ ಎಂತೊ

ಎಂದೂ ಮುಪ್ಪಾಗಿರುವ ಜೀವ 'ಸಾವ'ನ್ನು ಎದುರುನೋಡುತ್ತ ಕುಳಿತಿದೆ - ಪಯಣಕ್ಕೆ ಸಜ್ಜಾಗಿಯೇ ಕುಳಿತಂತಿದೆ - ಎನ್ನುವಂತೆ ನೋವನ್ನು ಹಾಡಾಗಿ ಹೊರಹಾಕಿದ್ದಾರೆ.

ಹೀಗೆ ಗೌಡರು ತಮ್ಮ ಅಂತರಂಗದ ತಳಮಳ ನೋವನ್ನೆಲ್ಲ ತಮ್ಮ ಕವನಗಳಲ್ಲಿ ಹೇಳಿಕೊಂಡಿದ್ದಾರೆ. ಒಂದೆಡೆಯಲ್ಲಿ ತಮ್ಮ ಬದುಕು ಇಹಲೋಕದ ಯಾತ್ರೆಕೈಕೊಂಡು., ಪರಲೋಕದ ಯಾತ್ರೆಗೆ ಸಜ್ಜಾಗಿ ನಿಂತಿರುವ - 'ಯಾತ್ರಿಕ'ನಂತೆ ಎಂದು ಹೇಳಿಕೊಂಡಿದ್ದಾರೆ. ಗೌಡರ ಇಂತಹ ಪ್ರಸಂಗದಲ್ಲೂ ಅವರ ಒಂಟಿಜೀವನಕ್ಕೆ ಸಂಗಾತಿಗಳಾದದ್ದು ಶೂನ್ಯಸಂಪಾದನೆ ಮತ್ತು ತಂಬೂರಿ, ಏಕಾಕಿತನವನ್ನೆ ವಿಶೇಷವಾಗಿ ಬಯಸುವ ಅವರು, “ತಾವು ನಡೆದು ಬಂದ ದಾರಿಯ ಸಿಂಹಾವಲೋಕನದಲ್ಲಿ ಬಾಳಸಂಜೆಯನು ಕಳೆದರು. ತಮ್ಮ ಯೌವನದಲ್ಲಿ ಕಂಚಿನ ಕಂಠದಿಂದ ಗಮಕದಲ್ಲಿ ಹಾಡಿಕೊಂಡ, 'ಶೂನ್ಯಸಂಪಾದನೆ' 'ಹರಿಶ್ಚಂದ್ರ ಕಾವ್ಯ' 'ವಿಶ್ವಗಾನ' 'ಯಾತ್ರಿಕ' 'ನಮ್ಮ ಹಂಪೆ' ಮುಂತಾದ ಕಾವ್ಯಭಾಗಗಳ ಧ್ವನಿಮುದ್ರಿಕೆಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದರು. ಅವುಗಳನ್ನೇ ಮತ್ತೆ ಮತ್ತೆ ಹಾಕಿಕೊಂಡು ಕೇಳುತ್ತಿದ್ದರು. ಲೋಕದ ಯಾವ ಗೊಡವೆಯೂ ಬೇಕಿರಲಿಲ್ಲ ಗೌಡರನ್ನು ಹುಡುಕಿಕೊಂಡು ಹೋದ ಯಾರೇ ಆಗಲಿ, ಆಸೆಯಿಂದ ಅಪೇಕ್ಷೆ ಪಟ್ಟರೆ, ಬೇಸರ ಮಾಡಿಕೊಳ್ಳದೆ, ತಾಸುಗಟ್ಟಲೆ ಅವರ ಜೊತೆಗೆ, ತಮ್ಮ ಅನುಭವದ ನುಡಿಗಳನ್ನು ಆಡುತ್ತಿದ್ದರು. ದೇಹಕ್ಕೆ ಮುಪ್ಪಾವರಿಸಿದ್ದರೂ, ಅವರ ಉತ್ಸಾಹಕ್ಕೆ ಅದು ಸೋಂಕದಿರುವುದನ್ನು ಕಂಡು ಸಂತಸವೆನಿಸುತ್ತಿತ್ತು. ಮಾತಿನ ಓಘದಲ್ಲಿ ಪ್ರಸಂಗ ಒದಗಿ ಬಂದರೆ 'ಹಾಡಿ'ಯೇ

ತೋರಿಸುತ್ತಿದ್ದರು. ಹಾಡುವಾಗಿನ ಹಾವ-ಭಾವ, ಧ್ವನಿಯ ಏರಿಳಿತಗಳನ್ನು ಗಮನಿಸಿದರೆ ಅವರು ಎಂಬತ್ತರ ಅಂಚಿನ ಮುದುಕರೆಂಬುದೇ ಮರೆತು ಹೋಗುತಿತ್ತು.

ಈ ಮಾತಿನ ಮಧ್ಯೆ ಗೌಡರ ಜೊತೆಗೆ ಸಂದರ್ಶಕರಿಗೂ ಚಹಾ-ಪಾನೀಯಗಳ ಉಪಚಾರ, ಮಾತಿಗೆ ಇನ್ನಷ್ಟು 'ಹುರುಪು' ಕೊಡುತ್ತಿತ್ತು. ಗೌಡರ ಸೋದರಳಿಯ ದಿ|| ಚೆನ್ನವೀರನಗೌಡರ ಮಗಳು ಕು|| ನಾಗಮ್ಮನು ಗೌಡರ 'ಉಪಚಾರ' ಮಾಡುವುದನ್ನು ನೋಡಿದಾಗ ಗೌಡರನ್ನು ಸಾಕಿ ಸಲುಹಿ ಕಣ್ಮುಚ್ಚಿದ ಅವರ ಅಜ್ಜಿ ನಾಗಮ್ಮವನು ತನ್ನ ಮೊಮ್ಮಗನ 'ಉಪಚಾರ'ಕ್ಕಾಗಿ ಮತ್ತೆ ಹುಟ್ಟಿ ಬಂದಿರುವ ಎಂದು ಎನಿಸುತ್ತಿತ್ತು. ದಿ|| ಚೆನ್ನವೀರನಗೌಡರ ಮಗಳಿಗೆ 'ನಾಗಮ್ಮ'ನೆಂದು ನಾಮಕರಣ ಮಾಡಿರುವುದು ಸಾರ್ಥಕವಾಗಿದೆ ಎಂದೆನಿಸುತ್ತಿತ್ತು. ಮಾವನ 'ಬರಹ'ದ ಕಾರ್ಯದಲ್ಲಿ ಅಳಿಯ ದಿ|| ಚೆನ್ನವೀರಗೌಡರು ಸಹಾಯಕರಾಗಿ ನಿಲ್ಲುತ್ತಿದ್ದರು. ಶಿವಸ್ವರೂಪಿಯಂತೆ ಕಾಣುತ್ತಿದ್ದ ಗೌಡರು ಕುಳಿತುಕೊಳ್ಳುತ್ತಿದ್ದ ಅವರ ಆರಾಮ ಕುರ್ಚಿಯ ಎದುರಿಗೆ ಕುಳಿತು ಗೌಡರು ಹೇಳಿದಂತೆಲ್ಲಾ ಬರೆಯುತ್ತಾ ಹೋಗುತ್ತಿದ್ದರು. ಗೌಡರಿಗೆ ಬರುವ ಕಾಗದಗಳಿಗೆಲ್ಲಾ ಮಾವನ ಸಲಹೆಯಂತೆ, ಉತ್ತರ ಬರೆಯುವ ಕಾರ್ಯವು ಅವರದೇ ಆಗಿತ್ತು. ಅಲ್ಲದೆ ಗೌಡರ ಗ್ರಂಥಾಲಯವನ್ನು ಅಚ್ಚುಕಟ್ಟಾಗಿ ಕಾಪಾಡಿಕೊಂಡು ಬಂದವರು ಕೂಡ ದಿ|| ಚೆನ್ನವೀರಗೌಡರು.

ಹೀಗೆ ಮಾವನ ಮಣಿಹದಲ್ಲಿ ದಿ|| ಚೆನ್ನವೀರನಗೌಡರು ಸಹಾಯಕ್ಕೆ ನಿಂತಿದ್ದು ಅಭಿಮಾನದ ಸಂಗತಿಯಾಗಿದೆ. ಮನೆಗೆ ಬಂದವರ ಊಟೋಪಚಾರದ ವ್ಯವಸ್ಥೆಯನ್ನು ದಿ|| ಚೆನ್ನವೀರನಗೌಡರೆ ಮುಂದೆ ನಿಂತು ನೋಡಿಕೊಳ್ಳುತ್ತಿದ್ದರು. ಅಕಾಲದಲ್ಲಿ ಬಂದ ಅತಿಥಿಗಳಿಗೆಲ್ಲಾ ಪಕ್ವಾನ್ನಗಳನ್ನು ಮಾಡಿ, ರುಚಿಯಾದ ಊಟ ಬಡಿಸಿದ ದಿ|| ಚೆನ್ನವೀರನಗೌಡರ ಧರ್ಮಪತ್ನಿಯವರ ಸೇವೆಯನ್ನು ಮರೆಯುವಂತಿಲ್ಲ.

ಇದೆಲ್ಲದರ ಮಧ್ಯೆ, ಈ ಸಂಸಾರ ಬಂಧನದಿಂದ ಮುಕ್ತರಾಗಿದ್ದ ಗೌಡರು, ಮತ್ತೆ ತಮ್ಮದನ್ನೇ ತಾವು ಓದುವದರಲ್ಲಿ ಮಗ್ನರಾಗಿರುತ್ತಿದ್ದರು. ಇಂತಹ ಪುಣ್ಯಜೀವಿಯ 'ವಜ್ರಮಹೋತ್ಸವ'ವನ್ನು ದಿ:೨೩-೪-೧೯೮೫ರಂದು, ಜೋಳದರಾಶಿಯಲ್ಲಿ ಅಭಿಮಾನಿಗಳು ಪೂರೈಸಿ ತಮ್ಮ ಘನತೆಯನ್ನು ತಾವೇ ಹೆಚ್ಚಿಸಿಕೊಂಡಿದ್ದಾರೆ. '

ತರುವಾಯ ಯಾವ ಸಂಘ-ಸಂಸ್ಥೆಗಳ ಆಮಂತ್ರಣವನ್ನೂ ಗೌಡರು ಸ್ವೀಕರಿಸುತ್ತಿರಲಿಲ್ಲ ಅಭಿಮಾನದ ತೀವ್ರ ಒತ್ತಾಯಬಂದಾಗ, ಅನಿವಾರ್ಯವಾಗಿ ಹೋಗಿ 'ನುಡಿ' ಸೇವೆ ಮಾಡಿ ಬರುತ್ತಿದ್ದರು.

ಇಷ್ಟಾಗಿ ತಿರುಗಾಡಲು ಅವರ 'ಆರೋಗ್ಯ'ವು ಅಷ್ಟಾಗಿ ಅವಕಾಶ ಕೊಡುತ್ತಿರಲಿಲ್ಲ ಅಂದಮಾತ್ರಕ್ಕೆ ಅವರ ಉತ್ಸಾಹಕ್ಕೇನೂ ಕೊರತೆಯಿರಲಿಲ್ಲ, ಅವರ ಈ ಸಾರ್ಥಕ ಬದುಕನ್ನು ಅನುಲಕ್ಷಿಸಿ, (೧೨.೬.೧೯೮೯) ಬೆಂಗಳೂರಿನಲ್ಲಿ ಅವರ ಅಭಿಮಾನಿಗಳೆಲ್ಲಾ ಸೇರಿ, ಅವರನ್ನು ಅತ್ಯಂತ ಆದರಾಭಿಮಾನದಿಂದ ಸತ್ಕರಿಸಿ ಸಂತಸಪಟ್ಟಿದ್ದಾರೆ. ಜೋಳದರಾಶಿ ದೊಡ್ಡನಗೌಡರ ಅಭಿನಂದನಾ ಸಮಿತಿಯ ಪರವಾಗಿ ನಡೆದ ಈ ಸಮಾರಂಬದ ಅಧ್ಯಕ್ಷತೆಯನ್ನು ಮೈಸೂರಿನ, ಸುತ್ತೂರುಮಠದ ಪೂಜ್ಯರು ವಹಿಸಿದ್ದುದು ಒಂದು ವಿಶೇಷವಾಗಿತ್ತು.

ಗೌಡರ 'ಅಭಿನಂದನಾ ಗ್ರಂಥ' 'ಗಮಕ ಕಲಾನಿಧಿ'ಯ ಬಿಡುಗಡೆಯನ್ನು ಮಾಜಿ ಸಚಿವ ದಿ. ಎಂ.ಪಿ. ಪ್ರಕಾಶ ಅವರು ನೆರವೇರಿಸಿದ್ದಾರೆ.

ಎಂಬತ್ನಾಲ್ಕು ವರುಷದ ತುಂಬು ಜೀವನವನ್ನು ಬಾಳಿದ ಗೌಡರ ಬದುಕು ವ್ಯರ್ಥವಾಗಿ ಹೋಗಿರಲಿಲ್ಲ ಅಷ್ಟೇ ಅಲ್ಲ ಅದು ಅವರಿಗೆ ನಿರರ್ಥಕವೂ ಅನಿಸಲಿಲ್ಲ: "…. ನನ್ನದು ವ್ಯರ್ಥ ಬದುಕು ಅಂತ ಅನಿಸುವುದಿಲ್ಲ ನಾಟಕದ ನಟನಾಗಿ, ಅದೇ ರೀತಿ ಜೀವನ ನಾಟಕದ ನಟನಾಗಿ ನನ್ನ ಪಾಲಿಗೆಬಂದ ಪಾತ್ರಗಳನ್ನು ತಕ್ಕಮಟ್ಟಿಗೆ ಯಶಸ್ವಿಯಾಗಿಯೇ ಅಭಿನಯಿಸಿದ್ದೇನೆ - ಎಂಬ ತೃಪ್ತಿ ನನಗಿದೆ. ಹಾಗಂತ ಈ ಇಳಿವಯಸ್ಸಿನಲ್ಲಿ ಜಡತನ, ನನ್ನನ್ನು ಆವರಿಸಿಲ್ಲ ಇನ್ನೂ ಅದು ಮಾಡಬೇಕು, ಇದು ಮಾಡಬೇಕು ಅಂತ ಜೀವ ಹಂಬಲಿಸುತ್ತದೆ. ಮೊನ್ನೆ ಮೊನ್ನೆ ಎಲ್ಲೆಲ್ಲಿಂದ ವಾದ್ಯಗಾರರನ್ನು ಕರೆಸಿ ಕೂಡಿಹಾಕಿ ನನ್ನ ಹಳೆಯ ನಾಟಕದ ಹಾಡುಗಳನ್ನು ಧ್ವನಿಮುದ್ರಣ ಮಾಡಿಟ್ಟೆ' ಎಂದು ತಮ್ಮ ಬದುಕಿನ ಸಾರ್ಥಕತೆಯ ಬಗೆಗೆ ಅಭಿಮಾನದಿಂದ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಇಂತಹ ಸಾರ್ಥಕ ಬದುಕನ್ನು ಸಾಗಿಸಿದ ಗೌಡರ ಮನಸ್ಸು 'ಜೀವ' ದಿಂದ ಮುಕ್ತಿಹೊಂದಲು ಹಾತೊರೆಯುತಿತ್ತು. ಹೆತ್ತು ಸಲುಹಿದ ತಾಯಿ 'ರುದ್ರಮ'ನೇ ಬಂದು 'ಮಗು ಈ ಬದುಕು ಸಾಕು ಬಾ, ಬಂದು ಬಿಡು ಸಾಕಿನ್ನು ಎಂದು ಕರೆದಂತೆ ಅವರಿಗೆ ಭಾಸವಾಗತೊಡಗಿತ್ತು. ಅದನ್ನು ಕಾವ್ಯಕಟ್ಟಿ ಹಾಡಿ ಕೊಂಡಿದ್ದಾರೆ.

'ಬಂದು ನಿಂತಾಳೆ ನಮ್ಮಮ್ಮ ಬಾಗಿಲಾಗೆ
ಬಂದು ನಿಂತಾಳೆ ಬಾ ಎಂದು ಕರಿತಾಳೆ ‖ ಪ ‖
ನೋಡಿಲ್ಲವ ಮಗು ಸಡಲಿತು ಈ ಮನೆ
ಮಾಡು ಬೀಡುಗಳಲ್ಲಿ ಬಿರುಕಾಗಿ ಬೀಳಲಿವೆ
ನಡುಬಾಗಿಲು ಜರಿದು ಮುಂಬಾಗಿಲೊರಗಿದೆ
ದಾಟಿ ಬಾ ಬಯಲಿಗೆ ಕರೆದೊಯ್ವೆನನ್ನುವಳು'

ಎಂದು ತಾಯಿಯ ಕರೆ ಎಂಬ ಪದ್ಯದಲ್ಲಿ ಹಾಡಿಕೊಂಡಿದ್ದಾರೆ.

ಆ ತಾಯಿಯ ಮಡಿಲನ್ನೇ ಸೇರಲು ತವಕಿಸಿದಂತಿದೆ. ಈ ಮೊದಲೆ ತೀರಿ ಹೋಗಿರುವ ಮಡದಿಯ ಸಮಾಧಿಯ ಸುತ್ತ ಗಿಡ-ಮರಗಳು ಸೊಂಪಾಗಿ ಬೆಳುದುದನ್ನು ಕಂಡು, ಅಗಲಿದ ಮಡದಿ, ಬಹುಕಾಲ ಅಗಲಿ ಇರಲಾರದೆ ಕರೆದಂತೆ ಭಾಸವಾಗತೊಡಗಿದೆ ಎಂದು ಬೆಳೆದು ನೆರಳಾಗಿ' ಎಂಬ ಪದ್ಯದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ:

ಎನಗಾಗಿ ಕಾಯುವಳು ಬರಲಿಲ್ಲವೆನ್ನುತ
ಅನುಮಾನವಿಲ್ಲ ನಾ ಬೇಗಬರುವುದ ಹೇಳಿ
ದಿನದಿನದಿ ಸಂತೈಸಿ ತಂಪಾಗಿ ತರುಗಳಿರ
ಎನ್ನ ರಾಮೇಶನ ಕಾರ್ಯ ಮುಗಿಸೈತರುವೆ.

ಎಂದು ಪಯಣದ ಸಿದ್ಧತೆಯನ್ನು ಕುರಿತು ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸಿದ್ದುಂಟು. ಈ ಬದುಕಿನಿಂದ ಆದಷ್ಟು ತೀವ್ರ ಬಿಡುಗಡೆ ಹೊಂದಲು ಸ್ವಾಮಿ ರಾಮೇಶನಲ್ಲಿ ಬಿನ್ನವಿಸಿಕೊಂಡಪರಿಯನ್ನು ನೋಡಬೇಕು:

ಇಂತೇಕೆ ಯಿರಿಸೆನ್ನ ಕಾಡುವೆ ರಾಮೇಶ
ಗತಿಗಾಣದೀ ಬಾಳು ಇನ್ನೇಸುದಿನ ಹೇಳ ‖ ಪ ‖

ಹುಟ್ಟಿದ ಮೊದಲಿಂದ ರೋಗದಾಗರ ಕಾಯ
ಹೊಟ್ಟೆ ಬೆಳೆಯದ ಹೆಂಡರು ಬಿಟ್ಟು ಹೋದರುಯನ್ನ
ಕೂಡಿಬಂದ ಬಳಗ ಅಗಲದಂತಿದೆ ಸುಖದಿ
ಸುಟ್ಟವಂಶಕೆ ನಾನೆ ಕಡೆಯಾಗಿ ಬದುಕಿರುವೆ ‖ ೧ ‖

ಎನ್ನಾಪ್ತ ಸಖರೆಲ್ಲ ಮರೆಯಾದರಿಂದಿಗೆ
ಎನ್ನಗತಿಗೊಲವಿತ್ತ ಗುರುಹಿರಿಯರಾರಿಲ್ಲ
ಇನ್ನೇಕೆ ಬಾಳೆನಗೆ ಹಿಂದಿಲ್ಲ ಮುಂದಿಲ್ಲ
ಇನ್ನಾರೆನಕಟಾ ಕಾಲ್ಮುರಿದು ಮುಪ್ಪಾದೆ ‖ ೨ ‖

ಎಂದಿರುವ ಗೌಡರು ತಾವಿನ್ನು ಬದುಕಿರಬಾರದೆಂದು ತೋಡಿಕೊಂಡಿದ್ದಾರೆ. ಅವರಿಗೆ ಇನ್ನಾವ ಆಸೆಗಳೂ ಉಳಿದಿರಲಿಲ್ಲ ಒಂದೇ ಒಂದು ಆಸೆ, ಅದು ಶಿವನ ಪಾದವ ಸೇರುವ ಆಸೆ, ಆ ಆಸೆಯ ಬಯಕೆ ವಿಶಿಷ್ಟವಾದುದು. ತಂಬೂರಿಯನ್ನು ನುಡಿಸುತ್ತಾ ಶಿವಧ್ಯಾನದಲ್ಲಿ ಮಗ್ನವಾಗಿರುವಾಗಲೇ, ಈ ಲೋಕದ ಬಂಧನದಿಂದ ಬಿಡುಗಡೆಯಾಗಲಿಯೆಂದು ಬೇಡಿಕೊಂಡಿದ್ದಾರೆ :

ಕೊನೆಯಾಶೆ ತಂಬೂರಿ ನಾದ ಮಾಧುರ್ಯದಲಿ
ನಿನ್ನನಾಮಾಮೃತದೊಳನುರಾಗರಸಭಕ್ತಿ
ಧ್ಯಾನದಾನಂದ ಮಗ್ನತೆಯೆ ಸಾವಾಗಲಿ
ಏನೊಂದನೊಲ್ಲೆ ಶ್ರೀ ರಾಮೇಶ ಕರುಣಿಸಯ್ಯ

ಹಾಡುತಾಡುತ ಮೆಲ್ಲಮೆಲ್ಲನೆ
ಹಾರಿ ಹೋಗಲಿ ಹರಣವು ।
ಹೋಗ ಹೋಗುತ ಹಾಡು ಮೌನವ
ತಾಳಿ ನಿಶ್ಚಲವಾಗಲಿ ‖

ಶಿವನೆ ನಿನ್ನಯ ನಾಮಗೀತೆಯು

ಕೇಳಿದಾ ಎನ್ನವರ ಮಾನಸದಾಳ ಗುಹೆಯಲಿ ಧ್ವನಿಸಲಿ
ನಾದಮದೋಂಕಾರ ಗರ್ಭದಿ
ನಾದ ಪೂರ್ಣತೆಯಾಗಲಿ
ಇದುವೆ ಎನ್ನಯ ಕೊನೆಯ ಬಯಕೆಯು
ಕಲಿಸು ಶ್ರೀಗುರು ರಾಮೇಶ ದಯದಿ ॥

ಎಂದು ಪ್ರಾರ್ಥಿಸಿಕೊಂಡಿದ್ದಾರೆ.

ಒಟ್ಟಿನಲ್ಲಿ ಗೌಡರ ಎಂಬತ್ನಾಲ್ಕು ವರುಷಗಳ ಸುದೀರ್ಘ ಬದುಕನ್ನು ವೀಕ್ಷಿಸಿದಾಗ ಕವಿಗಳಾಗಿ ನಾಟಕಕಾರರಾಗಿ, ಗಮಕಿಗಳಾಗಿ, ವಿಮರ್ಶಕರಾಗಿ, ವೇದಾಂತಿಗಾಗಿ ಯಶಸ್ವಿಗಳಾಗಿರುವುದು ಸ್ಪಷ್ಟವಾಗುತ್ತದೆ.

## ೯. ದೊಡ್ಡನಗೌಡರ ಸಾಹಿತ್ಯಕೃತಿಗಳು

ಇದುವರೆಗೆ ಜೋಳದರಾಶಿ ದೊಡ್ಡನಗೌಡರ ವ್ಯಕ್ತಿತ್ವದ ವಿವಿಧ ಮುಖಗಳ ಪರಿಚಯಮಾಡಿಕೊಳ್ಳಲಾಯಿತು. ಈಗ ಗೌಡರ ಸಾಹಿತ್ಯ ರಚನೆಯ ಪರಿಚಯಕ್ಕೆ ತೊಡಗಬಹುದು. ಗಮಕಕಲಾನಿಧಿ, ನಾಟಕಕಾರೆಂದು ಪ್ರಸಿದ್ಧರಾಗಿದ್ದ ಗೌಡರು ಕಾವ್ಯ ನಾಟಕಗಳೂ ಸೇರಿದಂತೆ ಸುಮಾರು ನಲವತ್ತು ಕೃತಿಗಳನ್ನು ರಚಿಸಿದ್ದಾರೆ. ಅವೆಲ್ಲವುಗಳ ಸುದೀರ್ಘ ಪರಿಚಯಮಾಡಿಕೊಡುವುದು ಈ ಗ್ರಂಥದ ವ್ಯಾಪ್ತಿಗೆ ಮೀರಿದ್ದು ಕಾರಣ ಗೌಡರ ಸಾಹಿತ್ಯ ಕೃತಿಗಳ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಇಲ್ಲಿ ಕೊಡಲು ಸಾಧ್ಯವಾಗಿದೆ.

### ಗೌಡರ ಕಾವ್ಯ :

ದೊಡ್ಡನಗೌಡರು ನವೋದಯ ಕಾಲಘಟ್ಟದ ಒಬ್ಬ ಮಹತ್ವದ ಕವಿಯೆಂದು ಹೇಳುವುದಕ್ಕಿಂತ, ಅವರೊಬ್ಬ ಶ್ರೇಷ್ಠ ವಾಗ್ಗೇಯಕಾರರಾಗಿದ್ದರೆಂದು ಹೇಳುವುದೆ ಹೆಚ್ಚು ಉಚಿತವೆನಿಸುತ್ತದೆ. ತಾನೇ ಕಾವ್ಯ ರಚಿಸಿ, ಅದಕ್ಕೆ ತಕ್ಕರಾಗ ಜೋಡಿಸಿ - ಹಾಡುವವರಿಗೆ ವಾಗ್ಗೇಯಕಾರರು ಎನ್ನುತ್ತಾರೆ. ಬಾಲ್ಯದಿಂದಲೆ ಗಮಕದಲ್ಲಿ ಗತಿಯಿದ್ದ ಗೌಡರಿಗೆ, ನಾಟಕದ ರಚನೆಗಳೂ ಕೂಡ ಪ್ರಭಾವಬೀರಿವೆ. ಒಂದೆಡೆ ಗೌಡರೇ ಹೇಳಿಕೊಂಡಿರುವಂತೆ ಅವರ ಕವನಗಳು ಬರೆದು ಹಾಡಿದವುಗಳಲ್ಲ ಅವು ಹಾಡುತ್ತಲೇ ಬರೆದ ಗೀತೆಗಳು, ಕರ್ನಾಟಕ ಸಂಗೀತಕ್ಕೆ ವಿಶೇಷಕೊಡುಗೆ ನೀಡಿದ ದಾಸರ ಕೀರ್ತನೆಗಳು ಕೂಡ ಹೀಗೆ ರಚನೆಯಾದವುಗಳೆ ಎಂಬುದನ್ನು ಸ್ಮರಿಸಿಕೊಳ್ಳಬೇಕು. ಗೌಡರಿಗೆ ಕಾವ್ಯ ರಚನೆಯ ಒಲವು ಬಾಲ್ಯದಿಂದಲೆ ಒಡಮೂಡಿಬಂದದ್ದು.

ಗೌಡರ ಕಾವ್ಯಗಳಲ್ಲಿ ನಮ್ಮ ಹಂಪೆ, ರಸವರ್ಷ, ದೇಶೀಯ ವಚನಗಳು, ರಾಮೇಶ ವಚನಗಳು, ಗೌಡತಿ ಬರಲಿಲ್ಲ ಜೋಳದರಾಶಿಕಾವ್ಯ ಮುಂತಾದವು ಮಹತ್ವದ ರಚನೆಗಳು. ಅವರ ರಚನೆಗಳು ಆಕಾರದಲ್ಲಿ

ಸಂಪ್ರದಾಯಕವೆನಿಸಿದರೂ, ಅವುಗಳಲ್ಲಿರುವ ಹೂರಣ ಆಧುನಿಕವಾದುದು. ವಸ್ತು ವೈವಿಧ್ಯತೆಯಿಂದ ಕೂಡಿದ ಗೌಡರ ರಚನೆಗಳನ್ನು ಹೀಗೆ ವಿಂಗಡಣೆ ಮಾಡಿಕೊಳ್ಳಬಹುದು:

೧) ಪ್ರಾರ್ಥನೆ ಮತ್ತು ಮಂಗಲಗೀತೆಗಳು ೨) ತತ್ವ ಪ್ರಧಾನವಾದ ಕವಿತೆಗಳು

೩) ಸಾಮಾಜಿಕ ಕವನಗಳು ೪) ನಾಡು-ನುಡಿ ಗೀತೆಗಳು

೫) ಗಣ್ಯವ್ಯಕ್ತಿ ಗೀತೆಗಳು ೬) ಸಂಕೀರ್ಣ ಪದಗಳು ಇವುಗಳಲ್ಲಿ ಭಕ್ತಿ, ಆಧ್ಯಾತ್ಮಿಕ ಅನುಭವ, ಅದರಿಂದ ಒಡಮೂಡಿದ ತತ್ವನಿರೂಪಣೆಗಳಿಂದ ಕೂಡಿದ ರಚನೆಗಳೇ ಹೆಚ್ಚಾಗಿವೆ. ಇವುಗಳಿಗೆಲ್ಲ 'ಭಕ್ತಿ'ಯೇ ಮೂಲಸೆಲೆ.

ಶ್ರೀ ಗುರುದೇವ ನಮಿಪೆ ಚರಣಕೆ
ಕರುಣಿಸು ಪೊರೆ ಮಹಾದೇವ ‖ ಪ ‖

- ಗುರುದೇವ

ಜೋಳದರಾಶಿ ಕಾವ್ಯದ ಪ್ರಾರಂಭದ ಈ ಗೀತೆ ಎರಡೆರಡು ಸಾಲುಗಳ ಮೂರು ನುಡಿಗಳಲ್ಲಿ ಮುಕ್ತಾಯವಾಗುತ್ತದೆ. "ರಾವಣ, ಬಾಣದಂತೆ ನಿಷ್ಠೆಯಿಂದ ಪೂಜಿಸಲು ಸಾಧ್ಯವಾಗಲಿಲ್ಲ ಧೀರ-ಸುವಿಚಾರ, ದೀನಜನಪಾಲ, ಗೌರಿವರನಾದ ಶಿವನೆ ಕರುಣಿಸೆಂದು ಪ್ರಾರ್ಥಿಸಿಕೊಂಡಿದ್ದಾರೆ. ಇದು ಬಯಲಾಟದ ಪದವನ್ನು ಹೋಲುತ್ತದೆ.

ಶಿವನಿನ್ನ ಪಾದವ ನಂಬಿದೆ, ಎನ್ನ
ಕಾಯುವಭಾರವು ನಿನ್ನದುಯಂದೆ ‖ ಪ ‖

-ಶಿವನಿನ್ನಪಾದ

ಸಮರ್ಪಣಾಭಾವದ ಈ ಪದ್ಯದಲ್ಲಿ ಕವಿಯಶ್ರದ್ಧೆ ಅಚಲವಾದುದರ ಮನವರಿಕೆಯಾಗುತ್ತದೆ. ಗೌಡರ ಕವಿತೆಗಳಲ್ಲಿ ೩೫ಕ್ಕೂ ಮಿಕ್ಕಿ ತತ್ವಪದಗಳನ್ನು ಗುರುತಿಸಬಹುದಾಗಿದೆ. ಇವುಗಳಲೆಲ್ಲ ಒಳಸ್ರೋತ ಭಕ್ತಿಯೇ ಆಗಿದೆ. ಇಲ್ಲಿನ ರಚನೆಗಳನ್ನು ಗಮನಿಸಿದಾಗ ತತ್ವಪದಕಾರರ ರಚನೆಗಳ ನೆನಪಾಗುತ್ತದೆ. ಸ್ವರೂಪದಲ್ಲೂ ಕೂಡ ತತ್ವಪದಕಾರರ ಪದಗಳ ಹೋಲಿಕೆಯಿರುವುದನ್ನು ಗಮನಿಸಬಹುದಾಗಿದೆ.

'ಒಡಲಾಸೆ' ಎಂಬುದು ಗೌಡರ ಅತ್ಯಂತ ಜನಪ್ರಿಯ ಪದ್ಯ. ಪ್ರಕೃತಿಯಲ್ಲಿ ದೇವರನ್ನು ಗುರುವನ್ನು ಕಾಣುವ ಗೌಡರು, ಪ್ರಕೃತಿಯಲ್ಲಿ ಅಡಗಿರುವ ಜೀವಪರ ತತ್ವಕ್ಕೆ ಮನಸೋತು ಹೀಗೆ ಹಾಡಿಕೊಂಡಿದ್ದಾರೆ :

ಗಿಡಬಳಿಗಿಂತ ಕಡೆಯಾದೆನಲ್ಲ ‖ ಪ ‖
ಒಡಲಾಸೆಗಾಗಿ ಪರರ ವಂಚಿಸಿನಾನು ‖ ಅ ‖

ಒಡನೆ ಬಳ್ಳಿಯು ಬೆಳೆದು ಗಿಡವನೇರುವುದು

ಬೇಡವೆಂಬುದೆ ಗಿಡವ ಬಳ್ಳಿಯ
ಕಡುಮೋದ ಬೀರುವ ಪರಿಮಳ ಹೂವನ್ನು
ಬೇಡುವುದೇನು ಕೊಡು ಎಂದು ಬಳ್ಳಿಯ ‖ ೧ ‖
ನಾರುವ ಮಣ್ಣನು ಪರಿಪಾಕಗೊಳಿಸಿ
ಪರಿಮಳವನು ತನ್ನ ಹೂವಿನೊಳಿರಿಸಿ
ಕರೆದು ತುಂಬಿಗಳಿಗೆ ಮಧುವನು ಉಣಿಸಿ
ಹರುಷಗೊಂಬುವುದದು ತಾನುಂಬುದೇ ಬಳ್ಳಿ ‖ ೨ ‖

ದುಡಿದುಪವಾಸದಲಿ ಬಳಲುವ ಬಡವರ
ನೋಡಿಮರುಗದ ಪಾಪಿಯು ನಾನಾದೆ
ಸುಡಲೀ ಸ್ವಾರ್ಥದ ನರಜನ್ಮವೇಕೆ
ಅಡವಿ ಬಳ್ಳಿಯೊಳೊಂದು ಮಾಡೆನ್ನರಾಮೇಶ ‖ ೩ ‖

ಈ ಮೇಲಿನ ಪದ್ಯವನ್ನು ದರ್ಬಾರಿ ರಾಗದಲ್ಲಿ ಸಂಯೋಜಿಸಿ ಹಾಡಿದರಂತೂ ತೀವ್ರ ಪರಿಣಾಮವನ್ನುಂಟು ಮಾಡುತ್ತದೆ. ಬಸವಣ್ಣನವರು ಒಂದು ವಚನದಲ್ಲಿ 'ಎನಗಾಗಿ ಬೇರೆ ತರುಮರಗಳಿಲ್ಲವೆ?' ಎಂದು ಹಾಡಿಕೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಆತ್ಮನಿವೇದನೆಯನ್ನು ಮೃದುವಾದ ಭಾವ, ಆತ್ಮೀಯಭಾಷೆ, ಸರಳವಾದ ಶೈಲಿ, ಗೇಯ ಗುಣಗಳೊಂದಿಗೆ ಅಭಿವ್ಯಕ್ತಪಡಿಸಿರುವುದರಿಂದ 'ಒಡಲಾಸೆ' ಒಂದು ಯಶಸ್ವಿ ರಚನೆಯಾಗಿ ಹೊರಹೊಮ್ಮಿದೆ.

ಗುರುವಿನಿಂದ ಅರಿವನು ಪಡೆದ ಮಹಿಮೆಯನ್ನು ತಿಳಕೊಂಡೆ' ಎಂಬ ಪದ್ಯದಲ್ಲಿ ಸುಂದರವಾಗಿ ವ್ಯಕ್ತಪಡಿಸಿದ್ದಾರೆ. ಈ ಕವನವು ಭಜನಾ ಪದದ ಶೈಲಿಯಲ್ಲಿದ್ದು ಕೇಳುಗರಿಗೆ ಇದರ ಗೇಯಗುಣದಿಂದಾಗಿ ತೀವ್ರ ಪರಿಣಾಮ ಉಂಟಾಗುತ್ತದೆ.

ಗುರುವನು ಮಾಡಿಕೊಂಡೆ ನಾನು
ಅರುವನು ಪಡೆಕೊಂಡೆ ‖ ಪ ‖
ಅರುವಿನಿಂದ ಪರಿಶುದ್ಧವಾಗಿ ಬರಿ
ಮಾಯದ ಮರ್ಮವ ತಿಳಕೊಂಡೆ ‖ ಅ ‖

****

ಮಾಯದ ಮಡದಿಯ ಬೇಡೆಂದೆ | ಮುಕ್ತಿಕಾಂತ ಸಂಗವು ಬೇಕೆಂದೆ
ಮರಳಿಬರದಹಾದಿ ಕಂಡುಕೊಂಡೆ | ಮಹರಾಮೇಶನೊಳ್ಸೇರಿಕೊಂಡೆ.

“ಬೀಳ್ಕೊಡಿಗೆ' ಒಂದು ಹೃದಯಸ್ಪರ್ಶಿಪದ್ಯ. ಗೌಡರು ಈ ಪದ್ಯದಲ್ಲಿ ತಾವು ಸಾಗಿಬಂದ ಬದುಕಿನ ಪುನರಾವಲೋಕನ ಮಾಡಿಕೊಂಡಿದ್ದಾರೆ. ಮುಪ್ಪಿನ ಬದುಕು ಬೇಡವಾಗಿ ಲೋಕದಿಂದ ನಿರ್ಗಮಿಸಿಬಿಡಬೇಕೆಂಬುದನ್ನು ಭಾವಪೂರ್ಣವಾಗಿ ಹೀಗೆ - ಹಾಡಿಕೊಂಡಿದ್ದಾರೆ :

ಹೋಗಿ ಬರ್ತಿದ್ರಯ್ಯ ನಮ್ಮೂರಿಗೆ
ಎಲ್ಲರಿಗೂ ಶರಣಾರ್ಥಿ ಕಳಿಸಿ ದಯದೋರಿ

ಏಸೋ ಕಾಲದಿಂದ ಊರೂರು ತಿರುಗುತ
ನಿಮ್ಮೂರಿಗೆ ಬಂದೆ ದಿಕ್ಕಿಲ್ಲದೆ ನಾನೊಬ್ಬ
ಹಿಂದಿಲ್ಲ ಮುಂದಿಲ್ಲ ತಂದದ್ದು ಏನಿಲ್ಲ
ಎಲ್ಲಾ ನೀವೇ ನೀಡಿ ನೆರವಾದಿರೀ ಕೂಸಿಗೆ ‖ ೧ ‖

ತಂದೆತಾಯಿ ಅಣ್ಣತಮ್ಮಂದಿರಾಗುತ
ಹಾಲು ಸಕ್ಕರೆ ಬೆಣ್ಣೆ ಇಕ್ಕಿ ಸಾಕಿದಿರಿ
ಹೆಂಡತಿ ಮಕ್ಕಳೊಂದಿಗೆ ಸಂಸಾರ ಬೆಳೆಸಿದಿರಿ
ಮಮಕಾರವಿದ್ದರೇನು ಬಿಟ್ಟುಹೋಗಿಲೆ ಬೇಕು ‖ ೨ ‖

ನಾ ವಾಸವಾಗಿದ್ದ ಮನೆಯು ಹಳೆಯದಾಯ್ತು
ಇದ್ದಷ್ಟು ಕಾಲವು ಸಂಸಾರಕೆ ನೆರವಾಯ್ತು
ನಾ ಹೋದ ಕೂಡಲೆ ಕುಸಿದು ಬೀಳುವುದು
ಯಾರಿಲ್ಲದೇ ಮನೆಯು ಮಣ್ಣುಪಾಲಾಗುವುದು ‖ ೩ ‖

ಬಿಟ್ಟುಹೋಗುವುದೆಲ್ಲ ನಾ ತಂದದ್ದೇನಲ್ಲ
ನೀವಿತ್ತುದೆಲ್ಲ ನಿಮಗೆ ಒಪ್ಪಿಸಿದೆನಿಂದು
ಇದ್ದಷ್ಟು ಕಾಲದಿ ಬಳಸಿಕೊಂಡೆ ನಿಮ್ಮ ಋಣ ತೀರಿತು ಎನ್ನ ಕಾಲವು ಸಂದಿತು ‖ ೪ ‖

ಬದುಕಿದ್ದ ಕಾಲದಿ ಏನೇನೊ ಮಾಡಿದೆ
ತಪ್ಪೇನೋ ಒಪ್ಪೇನೊ ಕೃಪೆಯಿಟ್ಟು ಮನ್ನಿಸಿರಿ
ನಮ್ಮೂರ ರಾಮೇಶ ಕರೆಯಲಟ್ಟಿದನಿಂದು
ಕಣ್ಣೊರಸಿಕೊಳ್ಳಿರಿ ಶುಭವಿತ್ತು ಹರಿಸಿರಿ‖ ೫ ‖

ಒಟ್ಟಿನಲ್ಲಿ ಗೌಡರ ಆಧ್ಯಾತ್ಮಿಕ ಬದುಕಿನ ಜೀವನಾನುಭವಗಳೇ ಅವರ ಕವನಗಳ ವಸ್ತು. ತಮ್ಮ ಅನುಭವಗಳನ್ನು ಎಳೆಎಳೆಯಾಗಿ ಬಿಡಿಸುತ್ತಾ, ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸುವುದರಿಂದ ಸಹೃದಯರಿಗೆ ಮುದನೀಡುತ್ತವೆ. ಇದರಿಂದಾಗಿ ಗೌಡರ ಕಾವ್ಯ ರಚನೆಯ ಉದ್ದೇಶ ಸಫಲವಾದಂತೆನಿಸುತ್ತದೆ.

## ನಮ್ಮ ಹಂಪೆ :

'ನಮ್ಮ ಹಂಪೆ' ಮಲ್ಲಾಬಾದಿ ವೀರಭದ್ರಪ್ಪನವರ ಸಂಪಾದಕತ್ವದಲ್ಲಿ ಜೋಳದ ರಾಶಿ ಪ್ರಕಟಣೆಯ ಮೊದಲಕುಸುಮವಾಗಿ ೧೯೪೫ರಲ್ಲಿ ಪ್ರಕಟಗೊಂಡಿದೆ. ಇದು ಮೂವತ್ತೆರಡು ಭಾಮಿನಿ ಷಟ್ಪದಿಗಳ ಒಂದು ಚಿಕ್ಕರಚನೆ. ಒಂದೊಮ್ಮೆ ಅತ್ಯಂತ ವೈಭವದಿಂದ ಮೆರೆದ, ಇಂದಿನ ಹಾಳುಹಂಪೆಯ ದಾರುಣತಿಯೇ ಕಾವ್ಯದ ವಸ್ತು. ಇದರ ಮುನ್ನುಡಿಯಲ್ಲಿ ಶಿ.ಶಿ. ಬಸವನಾಳರು ಹೀಗೆ ಬರೆದಿದ್ದಾರೆ :

ನಮ್ಮ ಹಂಪೆ ಚಿಕ್ಕ ಕವನವಾದರೂ "…. ಅದರಲ್ಲಿ ಹುದುಗಿರುವ ಭಾವ ಪ್ರಪಂಚ ಬಹುವಿಶಾಲವಾದುದು ಶೋಕ, ತಾಪ, ಕೋಪ, ಪಂಪಾಪುರದಧಿದೈವತವಾದ ಶ್ರೀ ವಿರೂಪಾಕ್ಷನಲ್ಲಿ ಮೊರೆ, ಮುನಿಸು, ಭೋಗರಾಗ ವ್ಯಾಮೋಹರಹಿತವಾದ ವಿರೂಪಾಕ್ಷನಿಗೆ ಆರಾಧಕರೂ ವಿರೋಧಕರೂ ಒಂದೇ ಎಂಬ ಉದಾಸೀನತೆ, ಜಗದ ತಾಯಿಯಾದ ಕರುಣಾಮಯಿಯಾದ ಪಂಪಾಲಿಕೆಯಲ್ಲಿ ಮೊರೆ, ತಾಯಿ ಮಕ್ಕಳನ್ನು ಕೈಬಿಡಲಾರಳೆಂಬ ನೆನಪು, ಕನ್ನಡಿಗರಾದ ನಾವೇ ಆ ಸಿರಿಸೌಭಾಗ್ಯಕ್ಕೆ ಅರ್ಹರಾಗಿಲ್ಲವೆಂಬ ಆತ್ಮಜ್ಞಾನದೊಡನೆ ಹುಟ್ಟಿದ ಶಾಂತಿ, ಜಗದ ಮಾತಾಪಿತರಾದ ಅದೇ ಪಂಪಾಂಬಿಕೆ ವಿರೂಪಾಕ್ಷ ಇವರಲ್ಲಿ ಕೊನೆಯ ಶರಣು, ಹೀಗೆ ಹಲವು ವಿಧವಾದ ಭಾವಗಳನ್ನು ಈ ಕವನ ಬಿತ್ತರಿಸಿದರೂ ಎಲ್ಲವೂ ಕರುಣಾರಸ ಪೋಷಕವೇ ಆಗಿವೆ.'

ಹಂಪೆಯ ಅಂದಿನ ಘನದೈಸಿರಿಯನ್ನು ಕಾಣದೆ, ಅಂದಿನ ವಣಿಕಜನ, ಸುಕವಿಜನ, ಪಂಡಿತರು, ಅಕುಟಿಲರು, ಸಜ್ಜನಿತ ವೀರರನ್ನು ಕಾಣದೆನೊಂದ ಕವಿಹೃದಯ ಹೀಗೆ ಹಾಡುತ್ತದೆ :

ಅಂದು ವಿದ್ಯಾರಣ್ಯರಿಂ ನಲ
ವಿಂದ ರಾಜಿಪ ರಾಜ್ಯಲಕ್ಷ್ಮಿಯು
ಇಂದು ತಾ ಕಳೆಯಳಿದು ಕುಂದಿದಳಯ್ಯೊ ದುರವಿಧೆಯೆ ।
ಎಂತು ತಾಳಲಿ ನೋಡಿ ನೋಡಿದ-
ನೆಂತು ಸಹಿಸಲಿ ಮನದೊಳೇಳುವ-
ನಂತವಳಲಂ ಕಿರಿಯ ಹೃದಯದೊಳೆಂತು ಅಡಗಿಸಲಿ ॥

ವ್ಯಾಕುಲಗೊಂಡ ಮನವು ಮುನಿಸಿನಿಂದ ಪಂಪಾಪತಿಯನ್ನು ಪ್ರಶ್ನಿಸುವ ಪರಿ ಹೀಗಿದೆ:

ಅಂದು ದುರುಳರು ಸಾಹಸಿ ನಡೆ
ತಂದು ಈ ವರ ಹಂಪೆ ಲಕುಮಿಯ

ಮುಂದಲೆಯ ಹಿಡಿಗೌಂಕಿ ಭಂಗಿಸಿ ಜಡಿವ ಸಮಯದಲಿ
ತಂದೆ ಪಂಪಾಪತಿಯೆ ನೀನಿದ
ನೆಂತು ನೋಡುತ ಸುಮ್ಮನಿದ್ದೆಯೋ
ಹಂತಕರ ಹತಗೈದು ಭೈರವ ನೃತ್ಯಗೈಯದಲೆ !!

ಹೀಗೆ ಭೈರವನೃತ್ಯಗೈಯದ ವಿರೂಪಾಕ್ಷನ ಮೇಲೆ ರೋಷದಿಂದಲೆ ಕವಿ ಆಕ್ಷೇಪಣೆಗಳ ಮಳೆ ಸುರಿಯುತ್ತಾನೆ:

ಸ್ಮರನ ಭಸ್ಮವಗೈದ ಹಣೆಗ
ಣ್ಣುರಿಗೆ ತಂಪಡರಿತ್ತೆ ಆ ಯಮ
ನುರವನಿರಿದಾ ಘನ ತ್ರಿಶೂಲದ ಮೊನೆಯು ಮುರಿದಿತ್ತೆ
ಅರರೆ ತ್ರಿಪುರಾಸುರರ ಶಿರಗಳ
ತರಿದ ಶಸ್ತ್ರಕೆ ಕಿಲುಬು ಸೋಂಕಿತೆ
ಅರಿಯೆ ನಿನಗೇನಾಯ್ತೊ ಪೇಳೆಲೆ ಬೋಳೆ ಶಂಕರನೆ ॥

ನಮ್ಮ ಹಂಪೆಯೆಂಬ ಚಿಕ್ಕಪುಸ್ತಿಕೆಯೊಂದಿಗೆ ಗೌಡರು ಈ ಸಂಗ್ರಹದಲ್ಲಿ ತೆಲುಗಿನ - ಭಾಸ್ಕರಾಚಾರ್ಯ ರಾಮಚಂದ್ರ ಶಾಸ್ತ್ರಿಯವರ 'ಯಾತ್ರಿಕಡು' (ಯಾತ್ರಿಕ) ಮತ್ತು ವಿಶ್ವಗಾನ ಎಂಬ ತೆಲುಗು ಕವಿತೆಗಳ ಅನುವಾದಗಳನ್ನು ಸೇರಿಸಿದ್ದಾರೆ. ಜೀವಿಗಳು ಯಾತ್ರಿಕರು, ಬದುಕೊಂದು ಯಾತ್ರೆ, ಇದರಲ್ಲಿ ಸುಖ-ದುಃಖಗಳು ಸಾವಿರಾರು, ಇದು ಮುಗಿಯದ ಯಾತ್ರೆ, ಯಾತ್ರಿಕನ ಗುರಿ ಊರು ಸೇರುವುದು, ಎಂದರೆ ಮುಕ್ತಿ ಪಡೆಯುವುದು - ಎಂಬ ಆಧ್ಯಾತ್ಮಿಕ ತಳಹದಿಯ ಮೇಲೆ ರಚನೆಗೊಂಡ ಕವನವಿದು.

ಅನುವಾದಿತ ಕವನ 'ವಿಶ್ವಗಾನ'ದಲ್ಲಿ ಅನೇಕ ಜಾತಿಮತ ಪಂಥ ಸೀಮೆಗಳೊಡನೆ, ನಿತ್ಯ ಜಂಜಾಟಬೇಕೆಂಬ ಕವಿಯ ಮನದಿಚ್ಛೆ ಅಭಿವ್ಯಕ್ತಗೊಂಡಿದೆ.

## ಗೌಡತಿ ಬರಲಿಲ್ಲ :

ಐವತ್ತೆರಡು ತ್ರಿಪದಿಗಳಲ್ಲಿ ರಚನೆಯಗೊಂಡಿರುವ ಒಂದು ಚಿಕ್ಕ ಖಂಡಕಾವ್ಯವಿದು. ತಮ್ಮೊಂದಿಗೆ ನಲ್ವತ್ತು ವರ್ಷ ಬಾಳಿ ಬದುಕಿ, ಮನೆಬೆಳಗಿದ ಧರ್ಮಪತ್ತಿಯ ಅಕಾಲಿಕ ಮರಣವೆ ಈ ಕೃತಿ ರಚನೆಗೆ ಪ್ರೇರಣೆ. ಗೌಡತಿಯ ಅನಿರೀಕ್ಷಿತ ಅಗಲಿಕೆಯಿಂದನೊಂದು ಉಕ್ಕಿಬಂದ ಭಾವಗಳೇ ಹಾಡಾಗಿ ಹೊರಹೊಮ್ಮಿವೆ.

ಹೊಲಕೋದ ಗೌಡತಿ ಮನೆಗಿನ್ನು ಬರಲಿಲ್ಲ
ಬಿಸಿಲೇರಿ ಬಂತು ಹಸಿವಾಯ್ತು । ಗೌಡನ
ಮರೆತು ಕೂತಾಳೆ ಹೊಲದಾಗೆ

ಮಡದಿಯ ಅಗಲಿಕೆಯ ನೋವು, ಬಾಳಿಬದುಕಿದ ಕ್ಷಣಗಳನ್ನು ನೆನಪಿಸಿ, ಬದುಕಿನ ಆಸೆಯನ್ನು ತೊರೆಯುವಂತೆ ಮಾಡುತ್ತದೆ. ಅದಕ್ಕೆಂದೆ ಹೀಗೆ ಹಾಡಿದ್ದಾರೆ:

ಒಂದಿಷ್ಟು ಉಳಿದಿದೆ ಕೊನೆ ನೋಟದಭಿನಯ
ಮುಗಿಸಿ ಬರುವೆ ಬಣ್ಣವರಸಿ I ರಾಮೇಶಗೆ
ವೇಷವೊಪ್ಪಿಸಿ ನಿನ್ನ ಬಳಿ ಬರುವೆ.

'ಚೇಳ್ಳಗುರಿಕೆ ತಾತನ ಗೀತಾಂಜಲಿ' ಎಂಬ ಕೃತಿಯನ್ನು ಗೌಡರು ಹಾಡಗಬ್ಬವೆಂದು ಕರೆದಿದ್ದಾರೆ. ಎರ್ರಿತಾತನ ಜೀವನಚರಿತ್ರೆ ಮತ್ತು ಲೀಲೆಗಳೇ ಈ ಕಾವ್ಯದ ವಸ್ತು. ಚರಿತ್ರೆಯ ವಿಷಯದಲ್ಲಿ ಕವಿ ಸ್ವಾತಂತ್ರ್ಯವನ್ನು ಮೆರೆದಿದ್ದಾರೆ. ತಮ್ಮ ಕಲ್ಪನೆಯ ಹಂದರದ ಮೇಲೆ 'ತಾತ'ನ ಪೂರ್ವ ವೃತ್ತಾಂತವನ್ನು ಹೆಣೆದಿದ್ದಾರೆ. ಎರ್ರಿತಾತನವರ ಹಲವಾರು ಲೀಲೆಗಳೂ, ಆತನ ಶಿಷ್ಯನಾಗಿದ್ದ 'ತಿಕ್ಕಯ್ಯ'ನ ವಿಚಿತ್ರ ಸೇವಾ ಪ್ರವೃತ್ತಿ ಮುಂತಾದವುಗಳಿಗೆಲ್ಲ ಕಾವ್ಯದಲ್ಲಿ ಇಂಬುಕೊಡಲಾಗಿದೆ.

ಉರವಕೊಂಡೆ ಚೆನ್ನಬಸವ ಮಹಾಸ್ವಾಮಿಗಳವರ ಸಂಕ್ಷಿಪ್ತ ಚರಿತ್ರೆಯನ್ನು ಒಂದು 'ಲಾವಣಿ' ಪದದಲ್ಲಿ ಗೌಡರು ಹಾಡಿಕೊಂಡಿದ್ದಾರೆ. ಪೂಜ್ಯರ ದಿವ್ಯಚರಿತ್ರೆಯನ್ನು ಭಕ್ತರಿಗೆ ಪರಿಚಯಿಸುವುದು ಇದರ ಹಿಂದಿರುವ ಉದ್ದೇಶ.

'ಚೇಳ್ಳಗುರಿಕೆ ಎರ್ರಿಸ್ವಾಮಿಗಳ ಶಿವಮಯ ಜೀವನ ಚರಿತ್ರೆ ಮತ್ತು ತಿಕ್ಕಯ್ಯ ವಿರಚಿತ ಭಕ್ತಿಗೀತೆಗಳು' - ಎಂಬ ಕೃತಿಯನ್ನು ಗೌಡರು ಸಂಗ್ರಹಿಸಿದ್ದಾರೆ. ಕೃತಿಯ ಪ್ರಾರಂಭದಲ್ಲಿ ತಾತನ ಚರಿತ್ರೆಯ ಮುಖ್ಯಾಂಶಗಳನ್ನು ಕೊಡಲಾಗಿದೆ. ತಾತನ ಜೀವನ ಚರಿತ್ರೆ ಮತ್ತು ತಾತನ ಲೀಲೆಗಳೇ ಇಲ್ಲಿನ ವಸ್ತು. ತಿಕ್ಕಯ್ಯನವರು ತಮ್ಮ ಗುರುಗಳಾದ ಎರ್ರಿಸ್ವಾಮಿಗಳನ್ನು ಕುರಿತು ಬರೆದ ಭಕ್ತಿಗೀತೆಗಳನ್ನು ಇದರಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ಶ್ರೀಮೃತ್ಯುಂಜಯ ಭಕ್ತಿಗೀತೆಗಳು' ಎಂಬ ಕೃತಿಯಲ್ಲಿ ಧಾರವಾಡದ ಲಿಂಗೈಕ್ಯ ಮೃತ್ಯುಂಜಯಪ್ಪಗಳನ್ನು ಕುರಿತು ಬರೆದ ಭಕ್ತಿಗೀತೆಗಳಿವೆ. ಪಂಡಿತ ವೈ. ನಾಗೇಶ ಶಾಸ್ತ್ರಿಗಳು, ಸಿಡಿಗಿನಮೊಳೆ ಚಂದ್ರಯ್ಯನವರು, ಪೂಜ್ಯ ಲಿಂ॥ ಮೃತ್ಯುಂಜಯಪ್ಪಗಳನ್ನು ಕುರಿತು ಕೆಲವು ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಅಂತಹ ರಚನೆಗಳಲ್ಲಿ ಗೌಡರು ಕೆಲವನ್ನು ಆಯ್ದು ಈ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ಹೀಗೆ ಪೂಜ್ಯ ಮೃತ್ಯುಂಜಯಪ್ಪಗಳ ಮಹಿಮೆಯನ್ನು ಹಾಡಿ, ಅವುಗಳನ್ನು ಸಂಗ್ರಹಿಸಿದ ಒಂದು ಉತ್ತಮ ಕೃತಿಯಿದು.

'ಭಕ್ತಿಸಂಜೀವಿನಿ' ಎಂಬುದು ಭೀಮಕವಿಯ 'ಬಸವಪುರಾಣ'ದಿಂದ ಆಯ್ದುಕೊಂಡ ಕೆಲವು ಪದ್ಯಗಳ ಸಂಗ್ರಹದಿಂದ ಕೂಡಿದ ಒಂದು ಚಿಕ್ಕಕೃತಿ. ಗೌಡರು ತಮ್ಮ ಮನೆಯಲ್ಲಿಯೆ ನಾಲ್ಕು ತಿಂಗಳುಗಳ ಕಾಲ

ಬಸವಪುರಾಣ ಪ್ರವಚನ ಮಾಡಿದರು. ಪ್ರವಚನದ ಮಂಗಲ ಸಮಯದಲ್ಲಿ ಭಕ್ತರಿಗೆ ಉಚಿತವಾಗಿ ವಿತರಿಸಿದ ಚಿಕ್ಕ ಕೃತಿಯಿದು.

### ಗೌಡರ ವಚನಗಳು :

ಆಧುನಿಕ ವಚನಕಾರರಲ್ಲಿ ಗೌಡರಿಗೆ ವಿಶಿಷ್ಟವಾದ ಸ್ಥಾನವಿದೆ. ವೀರಶೈವ ಧರ್ಮದ ತತ್ವಗಳ ಆಧಾರಿತ ಗಂಭೀರ ಚಿಂತನೆಯ ಫಲವಾಗಿ ಅವರ ವಚನಗಳು ರಚನೆಯಾಗಿದ್ದು ಅವು ಅಭ್ಯಾಸನೀಯವಾಗಿವೆ. ವಿಡಂಬನೆಗಾಗಿಯೂ ವಚನಗಳನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಗೌಡರ ಆಧ್ಯಾತ್ಮಿಕ ಜೀವನದ ಗಂಭೀರ ಚಿಂತನೆಯ ಫಲವಾಗಿ ಮೂಡಿಬಂದ ಕೃತಿಯೇ ರಾಮೇಶ ವಚನಗಳು. ಇಲ್ಲಿ ವಚನಗಳನ್ನು ಸ್ಥಲಕಟ್ಟಿನಮೇಲೆ ವಿಭಾಗಿಸಿ ವಿಂಗಡಿಸಲಾಗಿದೆ. ಇಲ್ಲಿನ ವಚನಗಳಲ್ಲಿ ತತ್ವಚಿಂತನೆ, ಆತ್ಮಾವಲೋಕನ, ಸಾಧಕನ ತೊಳಲಾಟ, ಮುಂತಾದವು ಮೈತೆರೆದುಕೊಂಡಿವೆ. ಶರಣರ ವಚನಗಳ ಮಾದರಿಯಲ್ಲಿಯೇ ಇಲ್ಲಿಯ ವಚನಗಳನ್ನು ಹೆಣೆಯಲಾಗಿದೆ. ಅಂದರೆ, ಮೌಲ್ಯದ ದೃಷ್ಟಿಯಿಂದಲೂ ಗೌಡರು ಶರಣರನ್ನು ಸರಿಗಟ್ಟುತ್ತಾರೆಂದು ಅರ್ಥವಲ್ಲ. ಆದರೆ, ಬಸವಾದಿ ಶರಣರ ದಟ್ಟ ಪ್ರಭಾವದಲ್ಲಿಯೇ ಇಲ್ಲಿನ ವಚನಗಳು ರಚನೆಗೊಂಡಿರುವುದು ಕಂಡುಬರುತ್ತದೆ. ಜೀವಾತ್ಮ ಮತ್ತು ಪರಮಾತ್ಮರುಗಳ ಮಿಲನವನ್ನು ಗೌಡರು ಒಂದು ವಚನದಲ್ಲಿ ಹೀಗೆ ನಿರೂಪಿಸಿದ್ದಾರೆ:

"ಹಾಲಿನಲಿ ತುಪ್ಪವಿದ್ದಂತೆ, ನೀರಿನಲ್ಲಿ ಕಿಚ್ಚಿಪ್ಪಂತೆ
ಗೋವಿನಲಿ ಗೋರೋಜನವಿಪ್ಪಂತೆ
ಕಾಯದೊಳಗಾತ್ಮವಿಪ್ಪಂತೆ-
ತೋರುವುದ ವುರಗೊಂಡು ತೋರದಂತಿಪ್ಪನಯ್ಯ
ನಮ್ಮ ಸ್ವಾಮಿ ರಾಮೇಶ"

ಮೂರು ಭಾಗಗಳಲ್ಲಿ ಪ್ರಕಟಗೊಂಡ ಕಿರು ಪುಸ್ತಕಗಳಾದ 'ದೇಸೀಯ ವಚನಗಳು' -ಇವುಗಳಲ್ಲಿ ಲೌಕಿಕ ವಿಚಾರಗಳಿಗೆ ಇಂಬುದೊರೆತಿದೆ. ಇವುಗಳಲ್ಲಿ ಮೊದಲ ಕೃತಿಯನ್ನು ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರಿಗೆ ಶತಮಾನೋತ್ಸವದ ನೆನಪಿಗೆ ಸಮರ್ಪಿಸಿದ್ದಾರೆ. ಎರಡನೇ ಭಾವವನ್ನು ಜನನಾಯಕ ಜಯಪ್ರಕಾಶ ನಾರಾಯಣರಿಗೆ ಸಮರ್ಪಿಸಿದ್ದಾರೆ. ಅಸ್ತವ್ಯಸ್ತಗೊಂಡ ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ವಿಡಂಬನೆಯೇ ಈ ಕಿರುಪುಸ್ತಕಗಳ ಉದ್ದೇಶ. ರಾಮೇಶ ವಚನಗಳು ಧಾರ್ಮಿಕ ನೆಲೆಗಟ್ಟಿನ ಮೇಲೆ ನಿಂತು ಗಂಭೀರ ಆಲೋಚನೆ ಫಲವಾಗಿ ಸೃಷ್ಟಿಯಾದಂಥವುಗಳು. ದೇಶೀಯ ವಚನಗಳಿಗೆ ಆ ಹಿನ್ನೆಲೆ ಇಲ್ಲ, ಕೊಳಕು ರಾಜಕೀಯ ವ್ಯವಸ್ಥೆಯೇ ಇಲ್ಲಿ ವಸ್ತುವಾಗಿರುವುದರಿಂದ ಇವು ಭಿನ್ನವಾಗಿ ನಿಲ್ಲುತ್ತವೆ. ಉದಾಹರಣೆಗೆ ಕೆಳಗಿನ ಸಾಲುಗಳನ್ನು ಗಮನಿಸಬೇಕು :

ಮಾತಿನಲಿ ಗಾಂಧಿ, ಮರೆಯಲ್ಲಿ ಬ್ರಾಂದಿ

ಇಂದು ಶತಮಾನದುತ್ಸವ, ಗಾಂಧಿಯದೋ? ಬ್ರಾಂದಿಯದೋ?

ಪಕ್ಷಾಭಿಮಾನವಿಲ್ಲ ಪ್ರಜಾಭಿಮಾನವಿಲ್ಲ

ಮರದಿಂದ ಮರಕ್ಕೆ ಹಾರುವ ಮಂಗನಂತೆ

ಇಂದೊಂದು ಪಕ್ಷ ನಾಳೆಗಿನ್ನೊಂದು ಪಕ್ಷ

..... ಚುನಾವಣೆಯಲಿ ಇಲಿಯಾಗಿ ಸುಳಿದು

ಗೆದ್ದು ಹುಲಿಯಾಗಿ ಗರ್ಜಿಸುವಿರಲ್ಲ......

ಒಟ್ಟಿನಲ್ಲಿ ಸಮಕಾಲೀನ ಅಸ್ತವ್ಯಸ್ತ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧ ಬಂಡೆದ್ದು ದುರಾಡಳಿತ, ಮಿತಮೀರಿದ ಭ್ರಷ್ಟಾಚಾರ, ದುರ್ನಡತೆ, ಮೌಲ್ಯಗಳ ಅಪಮೌಲ್ಯೀಕರಣ ಮುಂತಾದವುಗಳ ವಿರುದ್ಧ ಧ್ವನಿ ಎತ್ತಿದ ಗೌಡರ ಲೇಖನಿಗೆ ವಿಶಿಷ್ಟವಾದ ಶಕ್ತಿಯಿದೆ ಎನ್ನುವುದು ಸ್ಪಷ್ಟವಾಗುತ್ತದೆ.

**ಗೌಡರ ನಾಟಕಗಳು :**

ಗೌಡರಿಗೆ ಬಾಲ್ಯದಿಂದಲೂ ಅಂಟಿಕೊಂಡುಬಂದ ನಂಟು ನಾಟಕಗಳದ್ದು. ದೊಡ್ಡನಗೌಡರು ನಾಟಕಗಳನ್ನು ರಚಿಸಿದ್ದಾರೆ, ಆಡಿದ್ದಾರೆ ಮತ್ತು ಆಡಿಸಿಯೂ ಇದ್ದಾರೆ. ಬಾಲ್ಯದಲ್ಲಿಯೇ ಬಾಲನಟನಾಗಿ ರಂಗಭೂಮಿ ಪ್ರವೇಶಿಸಿದ ಗೌಡರು ಸಾಹಿತ್ಯಾಧ್ಯಯನ ಮತ್ತು ನಾಟಕಾಭಿನಯದ ಅನುಭವದಿಂದ ಒಟ್ಟು ಹದಿನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಗೌಡರ ಗುರುಗಳಾದ ಬಳ್ಳಾರಿ ರಾಘವರ ಪ್ರೋತ್ಸಾಹ, ಮಾರ್ಗದರ್ಶನಗಳು ದೊಡ್ಡನಗೌಡ್ರು ಒಬ್ಬ ನಾಟಕಕಾರರಾಗಿ ರೂಪುಗೊಳ್ಳಲು ಮುಖ್ಯಕಾರಣ. ಗೌಡರು ತಮ್ಮ ಮನಸ್ಸನ್ನು ಕಲಕಿದ ಪ್ರಸಂಗಗಳನ್ನೇ ಆಯ್ದು ನಾಟಕಗಳನ್ನೂ ರಚಿಸಿದ್ದಾರೆ.

"ಸಂತ ತುಕಾರಾಮ' ಗೌಡರು ಬರೆದ ಮೊದಲ ನಾಟಕ ಇದು ಮೂರು ಅಂಕಗಳ ಒಂದು ದೊಡ್ಡ ನಾಟಕ. ಸಂತ ತುಕಾರಾಮನ ಚರಿತ್ರೆ ಮತ್ತು ಭಕ್ತಿಯ ಮಹತ್ವವನ್ನು ಪರಿಚಯಿಸುವುದೇ ಈ ಕೃತಿಯ ಉದ್ದೇಶ. ಸಂಸಾರ ಮತ್ತು ಸಮಾಜದೊಂದಿಗೆ ಹೋರಾಡಿ ತನ್ನ ಆರಾಧ್ಯದೈವವಾದ ಪಂಢರಪುರದ ವಿಠೋಬನನ್ನು ಒಲಿಸಿಕೊಂಡ ಮಹಾಸಂತ. "ತುಕಾರಾಮ'ನೆಂಬ ಭಕ್ತನ ಚರಿತ್ರೆ ಇದರಲ್ಲಿದೆ. ಭಕ್ತಿಪ್ರಧಾನವಾದ ಈ ನಾಟಕ ತುಂಬಾ ಪರಿಣಾಮಕಾರಿಯಾಗಿ ಮೂಡಿಬಂದಿದೆ.

**ಕನಕದಾಸ :**

ದಾಸಶ್ರೇಷ್ಠರಲ್ಲಿ ಕನಕದಾಸರದು ಪುರಂದರದಾಸರಂತೆ, ದೊಡ್ಡ ಹೆಸರು. ಅವರ ಜೀವನವನ್ನು ದೃಶ್ಯಮಾಧ್ಯಮದ ಮೂಲಕ ಜನತೆಗೆ ಪರಿಚಯಮಾಡಿಕೊಟ್ಟ ಕೀರ್ತಿ ಗೌಡರಿಗೆ ಸಲ್ಲುತ್ತದೆ. ನೂರು ಪುಟಗಳ ವ್ಯಾಪ್ತಿಯ ಈ ನಾಟಕ ರಚನೆಗೂ ಕೂಡ ಗುರುಗಳಾದ ಬಳ್ಳಾರಿ ರಾಘವರ ಪ್ರೇರಣೆಯೇ ಕಾರಣ. ವಸ್ತುವಿನ

ದೃಷ್ಟಿಯಿಂದ ನಾಟಕ ಕನಕದಾಸರ ಜೀವನ ಚರಿತ್ರೆಯನ್ನು ಆಧರಿಸಿದೆಯಾದರೂ, ಕೀಳುಕುಲದವರಿಗೆ ಮೇಲು ಕುಲದವರು ಕೊಡುವ ಕಿರುಕುಳವನ್ನು ಖಂಡಿಸುವ ಆಶಯವನ್ನು ಹೊಂದಿದೆ. ಮಾನವಕುಲ ಒಂದೇ ಎಂಬ ಆದರ್ಶವನ್ನು ಇದು ಸಾರುತ್ತದೆ. ಕೀಳುಕುಲದಲ್ಲಿ ಜನಿಸಿದ ಕನಕದಾಸ ತನಗೆ ಎದುರಾದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಿ ಸಾಧನೆಯ ಮೂಲಕ ಮೇಲಕ್ಕೇರಿದನೆಂಬುದನ್ನು ಚಿತ್ರಿಸಿರುವುದು ಸಾಮಾನ್ಯ ಕುಲದವರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುತ್ತದೆ. ಯಾವಗೊಂದಲಗಳಿಲ್ಲದೇ ಕಥೆ ಬೇಸರ ತರದಂತೆ ಸಂತನೊಬ್ಬನ ಸಾಧನೆಯ ಹಂತಗಳನ್ನು ಹಂತ-ಹಂತವಾಗಿ ತೋರಿಸುತ್ತ ಸರಾಗವಾಗಿ ಸಾಗುವುದು ಈ ನಾಟಕದ ವಿಶಿಷ್ಟಗುಣ. ಈ ನಾಟಕವು ರಂಗದ ಮೇಲೆ ತುಂಬಾ ಯಶಸ್ವಿಯಾದ ನಾಟಕ.

## ಕ್ರಾಂತಿಪುರುಷ ಬಸವಣ್ಣ:

"ಕ್ರಾಂತಿಪುರುಷ ಬಸವಣ್ಣ' ಗೌಡರ ಜನಪ್ರಿಯ ನಾಟಕಗಳಲ್ಲಿ ಪ್ರಧಾನವಾದುದು. ಈ ನಾಟಕ ರಚನೆಗೂ ಕೂಡ ಗುರುಗಳಾದ ಬಳ್ಳಾರಿ ರಾಘವರೇ ಮುಖ್ಯ ಪ್ರೇರಣೆ. ಬಸವಣ್ಣನವರ ವ್ಯಕ್ತಿತ್ವವನ್ನು ವೈಚಾರಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಚಿತ್ರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಬಸವಣ್ಣನವರನ್ನು ಪವಾಡ ಪುರುಷರಂತೆ ಕಾಣದೇ ಒಬ್ಬ ವೈಚಾರಿಕ, ಸಾಮಾಜಿಕ, ಧಾರ್ಮಿಕ ಆಂದೋಲನಕಾರನನ್ನಾಗಿ ಚಿತ್ರಿಸುವುದೇ ಇಲ್ಲಿನ ಮೂಲ ಉದ್ದೇಶ. ಒಟ್ಟು ಮೂರು ಅಂಕಗಳಿರುವ ಈ ನಾಟಕದ ಮೊದಲ ಅಂಕದಲ್ಲಿ ವೇಶ್ಯಾಪದ್ಧತಿ ನಿರ್ಮೂಲನೆ, ಸ್ವಾತಂತ್ರ ಅಸ್ಪೃಶ್ಯತಾ ನಿವಾರಣೆ, ಇವುಗಳ ಪ್ರತಿಪಾದನೆಯೊಂದಿಗೆ, ರಾಜಧರ್ಮವು ರಾಷ್ಟಧರ್ಮವಾಗಬೇಕೆಂದು ಮಹಾಮಂತ್ರಿ ಬಸವಣ್ಣನವರು ನಡೆಸುವ ಪ್ರಯತ್ನಗಳ ಪ್ರಸಂಗಗಳನ್ನು ಒಳಗೊಂಡಿದೆ. ಎರಡನೆಯ ಅಂಕದಲ್ಲಿ ಕಾಯಕತತ್ವ, ಮಧುವರಸ - ಹರಳಯ್ಯನವರ ಮಕ್ಕಳ ವಿವಾಹ, ಆ ವಿವಾಹದ ಕಾರಣದಿಂದಾಗಿ ಕಲ್ಯಾಣದಲ್ಲಿ ನಡೆದ ಸನಾತನ ಧರ್ಮಾನುಯಾಯಿಗಳ ಪ್ರತಿಭಟನೆಯನ್ನು ಕಾಣುತ್ತೇವೆ. ಮೂರನೇ ಅಂಕದಲ್ಲಿ ಬಸವಣ್ಣನವರ ತತ್ವಾನುಯಾಯಿಗಳು ಪರಸ್ಪರ ಗುಂಪುಗಳಾಗಿ ನಿಂತು ಬಿಜ್ಜಳನಲ್ಲಿ ಅಂತರ್ಜಾತಿಯ ಮದುವೆ ಬಗೆಗೆ ವಾದ-ಪ್ರತಿವಾದಗಳು ನಡೆದದು. ಬಿಜ್ಜಳರಾಜನು ಸನಾತನ, ಬಹುಸಂಖ್ಯಾತರ ಮನವಿಗೆ ಒಪ್ಪಿ ಹರಳಯ್ಯ ಮಧುವರಸರಿಗೆ ಮರಣದಂಡನೆಯನ್ನು ವಿಧಿಸಿದ್ದು, ಇದರಿಂದ ಕೆರಳಿದ ಶರಣರು ಶಾಂತಿಮಂತ್ರಕೆ ಕಿವಿಗೊಡದೆ ಬಿಜ್ಜಳನ ಕೊಲೆಗೈಯಲು ವಿದ್ಯುಕ್ತರಾದದ್ದು ತಾನಿನ್ನು ಕಲ್ಯಾಣರಾಜ್ಯದ ದುರಂತವನ್ನು ನೋಡಬಾರದೆಂದು ಬಸವಣ್ಣನವರು ಭಾರವಾದ ಹೃದಯದಿಂದ ಕಲ್ಯಾಣವನ್ನು ತೊರೆದು ಕೂಡಲಸಂಗಮದೆಡೆಗೆ ತೆರಳಿದ್ದು - ಈ ಅಂಶಗಳನ್ನು ಒಳಗೊಂಡಿರುತ್ತದೆ. ನಾಟಕ ಸಂವಿಧಾನವು ಉತ್ತಮಮಟ್ಟದ್ದಾಗಿದ್ದು ಉಚಿತ ಸನ್ನಿವೇಶಗಳನ್ನು ಬಸವಣ್ಣನ ಪಾತ್ರಕ್ಕಿಂತ ಇತರ ಪಾತ್ರಗಳೇ ಹೆಚ್ಚಾಗಿ ಕಟ್ಟಿಕೊಡುತ್ತವೆ. ಇದರಲ್ಲಿ ಬಳ್ಳಾರಿಯ ಪ್ರಾದೇಶಿಕ ಭಾಷೆಯ ಸೊಗಡು, ಕಲ್ಪಿತ ಪಾತ್ರಗಳ ಮೂಲಕ ಹೊರಹೊಮ್ಮುವ ವಿನೋದ ಪ್ರಸಂಗಗಳು ಗ್ರಾಮೀಣ ಪರಿಸರದ ಹಿನ್ನೆಲೆಯೊಂದಿಗೆ ಸನ್ನಿವೇಶಗಳ ನಿರೂಪಣೆ, ಸಮಸ್ಯೆಗಳನ್ನು ಎಳೆ-ಎಳೆಯಾಗಿ ಹರಿಯ ಬಿಟ್ಟು ಅವುಗಳಿಗೆ ಪರಿಹಾರ ತೋರುವ ಕ್ರಮ - ಇವುಗಳು ಮನೋಹರವಾಗಿ ಮೂಡಿಬಂದಿವೆ. ಈ ನಾಟಕವು ಸಾಹಿತ್ಯಕ

ದೃಷ್ಟಿಕೋನ ಹಾಗೂ ಪ್ರಯೋಗಾತ್ಮಕ ದೃಷ್ಟಿಕೋನಗಳೆರಡರಿಂದಲೂ ತುಂಬಾ ಪರಿಣಾಮಕಾರಿ ಎನಿಸಿದೆ. ಈ ನಾಟಕವನ್ನು ೧೯೮೬ರಲ್ಲಿ ಹೈದರಾಬಾದ್ ತೆಲುಗು ವಿಶ್ವವಿದ್ಯಾಲಯವು - ೧೮೦ ಪುಟಗಳನ್ನೊಳಗೊಂಡಂತೆ ಕನ್ನಡ ಮತ್ತು ಅದರ ತೆಲುಗು ಅನುವಾದದೊಂದಿಗೆ ಒಂದೇ ಗ್ರಂಥದಲ್ಲಿ ಸುಂದರವಾಗಿ ಪ್ರಕಟಿಸಿದೆ.

ಜೋಳದರಾಶಿಯ ರಾಮೇಶ ಪ್ರಕಟಣಾ ಮಂದಿರದಿಂದ ೧೯೯೫ರಲ್ಲಿ ಪ್ರಕಟಗೊಂಡ "ದೊಡ್ಡನಗೌಡರ ನಾಟಕಗಳು' ಎಂಬ ಸಂಕಲನದಲ್ಲಿ ಮಾಯಾ ಪ್ರಭಾವ, ಶಿವನಾಣೆ, ಜಾಗೃತಿ, ಎಂಬ ಮೂರುನಾಟಕಗಳಿವೆ. ಇವುಗಳಲ್ಲಿ **'ಮಾಯಾಪ್ರಭಾವ'** ಎಂಬ ನಾಟಕವು ೧೯೨೮ರಲ್ಲಿಯೇ ರಚನೆಗೊಂಡಿದೆ. ಮಾಯೆಯ ಪ್ರಭಾವಕ್ಕೊಳಗಾಗುವ ಫಜೀತಿಯ ಪರಿಚಯಮಾಡಿಕೊಡುವುದೇ ಇಲ್ಲಿಯ ಉದ್ದೇಶವಾಗಿದೆ. ಇದೊಂದು ಪೌರಾಣಿಕ ವಸ್ತುವನ್ನು ಆಧರಿಸಿದ ಕಾಲ್ಪನಿಕ ನಾಟಕ. ನಾರದನು ಮಾಯಾಸ್ವರೂಪವನ್ನು ತಿಳಿಯಬೇಕೆಂದು ವಿಷ್ಣುವಿನಲ್ಲಿ ಬೇಡಿದುದರ ಫಲವಾಗಿ, ನವಮೋಹಿನಿ ರೂಪವನ್ನು ತಳೆಯಬೇಕಾಯಿತು. ನಂತರ ತಾಲಧ್ವಜನಿಗೆ ಸತಿಯಾಗಿ ಅರವತ್ತು ಮಕ್ಕಳನ್ನು ಹೆರಬೇಕಾಯಿತು. ಕನ್ಯಾಕುಬ್ಜದ ಅರಸನಾದ ತಾಲಧ್ವಜನ ಮೇಲೆ ಹಗೆಗಳು ದಂಡೆತ್ತಿ ಬಂದುದರ ಪರಿಣಾಮವಾಗಿ ಆತ ತನ್ನೆಲ್ಲ ಮಕ್ಕಳೊಂದಿಗೆ ರಣರಂಗದಲ್ಲಿಯೇ ಸಾವನ್ನಪ್ಪುತ್ತಾನೆ. ನಾರದ ಈ ವಾರ್ತೆಯನ್ನು ಕೇಳಿ ರಣರಂಗಕ್ಕೆ ಹೋಗಿ ಸತ್ತಗಂಡ ಮತ್ತು ಮಕ್ಕಳಿಗಾಗಿ ಗೋಳಾಡುತ್ತಿರುವಾಗ ವಿಷ್ಣುವು ಮುದಿ ಬ್ರಾಹ್ಮಣ ವೇಷದಲ್ಲಿ ಅಲ್ಲಿಗೆ ಬರುತ್ತಾನೆ. ಸತ್ತವರಿಗೆ ತಿಲೋದಕವನ್ನು ಕೊಡುವಂತೆ ನಾರದನಿಗೆ ತಿಳಿಸುತ್ತಾನೆ. ಈ ಮೊದಲು ನಾರದನನ್ನು ಮುಳುಗಿಸಿ ಅವನನ್ನು ಹೆಣ್ಣಾಗಿಸಿದ ಪುಣ್ಯತೀರ್ಥದಲ್ಲಿಯೇ ಮತ್ತೀಗ ಮುಳುಗುವಂತೆ ಸೂಚಿಸುತ್ತಾನೆ. ಇದರ ಪರಿಣಾಮವಾಗಿ ನಾರದನು ಮೋಹನಿ ರೂಪ ತಳೆದು ನಿಜವಾದ ರೂಪ ಪ್ರಾಪ್ತವಾಗುತ್ತದೆ. ಹೀಗೆ ನಾರದನು ಮಾಯಾನಿವೃತ್ತಿ ಪಡೆಯುತ್ತಾನೆ. ಮಾಯೆಯಿಂದ ಹೆತ್ತಮಕ್ಕಳು ಅರವತ್ತು ವರ್ಷಗಳಾಗಿ ಕಾಲನಿರ್ಣಯಕ್ಕೆ ಸೂಚಿತವಾಗುವದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ. ಹೀಗೆ ಮಾಯೆಯ ಪ್ರಭಾವಕ್ಕೊಳಗಾಗುವ ಫಜೀತಿಯನ್ನು ಈ ನಾಟಕದಲ್ಲಿ ರಂಜನೀಯವಾಗಿ ಸೆರೆಹಿಡಿಯಲಾಗಿದೆ. ನಾಟಕದುದ್ದಕ್ಕೂ ಕುತೂಹಲವನ್ನು ಕಾಯ್ದು ಕೊಂಡು ಬರುವ ತಂತ್ರ ನಾಟಕದ ಯಶಸ್ಸಿಗೆ ಬಹುಪಾಲು ಕಾರಣವಾಗಿದೆ.

'ಶಿವನಾಣೆ' ಎಂಬ ನಾಟಕ ೧೯೪೦ರಲ್ಲಿಯೇ ರಚನೆಗೊಂಡದ್ದು ಅರವತ್ತೂರು ಪುರಾತನರಲ್ಲಿ ಒಬ್ಬರಾದ ತಿರುನೀಲಕಂಠರ ಚರಿತ್ರೆಯನ್ನು ಪರಿಚಯಿಸುವುದೇ ಈ ಕೃತಿಯ ಉದ್ದೇಶ. ಈ ನಾಟಕದ ಮೂಲ ವಸ್ತು ಹರಿಹರನ ತಿರುನೀಲಕಂಠನ ರಗಳೆ. ಗೌಡರು ಅಗತ್ಯಕ್ಕೆ ತಕ್ಕಷ್ಟು ಮಾರ್ಪಾಡುಮಾಡಿಕೊಂಡಿದ್ದಾರೆ. ಹೊಸ ಪಾತ್ರಗಳನ್ನು ಹೊಸ ದೃಶ್ಯಗಳನ್ನು ಸಂಯೋಜಿಸಿಕೊಂಡಿದ್ದಾರೆ. ಇದರಿಂದಾಗಿ ಈ ನಾಟಕವು ಪ್ರೇಕ್ಷಕರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಗಿದೆ.

**'ಜಾಗೃತಿ'** ಎಂಬ ಸಾಮಾಜಿಕ ನಾಟಕವನ್ನು ಗೌಡರು ೧೯೮೨ರಲ್ಲಿ ರಚಿಸಿದ್ದಾರೆ. ವಿಶ್ವಹಿಂದೂ ಪರಿಷತ್ತಿನ ಧ್ಯೇಯಧೋರಣೆಗಳ ಪರಿಚಯ ನೀಡಲಾಗಿದೆ. ಸ್ವಾತಂತ್ರಾ, ನಂತರಕಾಲದ ಗ್ರಾಮೀಣ ಭಾರತದ ಮೀಮಾಂಸೆಯನ್ನು ಮಾಡಲಾಗಿದೆ. “ಶಿಥಿಲ ಆಡಳಿತ, ಭ್ರಷ್ಟಾಚಾರ ಸರಕಾರದ ಪೊಳ್ಳು ಭರವಸೆಗಳು

ಕೋಮುದ್ವೇಷ ಸ್ವಾರ್ಥಿಗಳಾದ ಮತ ಪ್ರಚಾರಕರು, ಇಂದಿನ ರಂಗಭೂಮಿ ಸ್ಥಿತಿ, ಗುಂಡಾ ಸಂಸ್ಕೃತಿಯ ರಾಜಕೀಯ ಕೆಳಜಾತಿಯವರಲ್ಲಿ ಮೂಡಿರುವ ಜಾಗೃತಿ, ಅದರ ಬಗ್ಗೆ ಮೇಲ್ಜಾತಿ ಜನಸಮುದಾಯದ ಅಸಮಾಧಾನ - ಈ ಎಲ್ಲ ಸಂಗತಿಗಳನ್ನು ಈ ನಾಟಕದಲ್ಲಿ ವ್ಯಾಖ್ಯಾನಕ್ಕೆ ಗುರಿಮಾಡಲಾಗಿದೆ' ಎಂದು ಡಾ. ಬಸವರಾಜ ಮಲಶೆಟ್ಟಿ ಅವರು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನವರು ೧೯೯೪ರಲ್ಲಿ ಜೋಳದರಾಶಿಯವರ "ಮೂರು ನಾಟಕಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ **"ನೋಡೋರ ನಾಟಕ', 'ಅಭಯ", "ಸಾಯದವನ ಸಮಾಧಿ"** ಎಂಬ ಮೂರು ನಾಟಕಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಸೋಜಿಗದ ಸಂಗತಿಯೆಂದರೆ, ಈ ಮೂರು ನಾಟಕಗಳಲ್ಲೂ ಸಾವಿನದೇ ಆಟ ನಡೆದಿದೆ. ಈ ನಾಟಕವನ್ನು ಪ್ರಕಟಿಸುವ ಸಂದರ್ಭದಲ್ಲಿಯೇ ಜೋಳದ ರಾಶಿ ದೊಡ್ಡನಗೌಡರು ನಿಧನರಾದ ವಾರ್ತೆಯನ್ನು ಕೇಳಿ ಅಂದು ಕ.ಸಾ.ಪ. ಅಧ್ಯಕ್ಷರಾಗಿದ್ದ ಗೊ.ರು. ಚನಬಸವಪ್ಪನವರು ಸೋಜಿಗಗೊಂಡು ಇದೊಂದು ವಿಧಿ ವಿಚಿತ್ರ ಎಂದು ಬರೆದಿದ್ದಾರೆ.

ಮೂರು ಅಂಕಗಳಲ್ಲಿ ರಚನೆಗೊಂಡಿರುವ **"ನೋಡೋರ ನಾಟಕ'** ೧೯೮೨ ರಲ್ಲಿ ರಚನೆಗೊಂಡುದು. ಇದರಲ್ಲಿ ವೈವಿಧ್ಯಮಯವಾದ ವಿಷಯಗಳನ್ನು ಆಯ್ದುಕೊಳ್ಳಲಾಗಿದೆ. ಇದರಲ್ಲಿಯ ಹಲವಾರು ದೃಶ್ಯಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಪ್ರೇಕ್ಷಕರ ಅಭಿಪ್ರಾಯಗಳನ್ನೇ ಚರ್ಚೆಗೆ ಅಳವಡಿಸಿಕೊಂಡಿರುವುದು ಈ ನಾಟಕಗಳ ವೈಶಿಷ್ಟ್ಯ.

ಒಂದೇ ದೃಶ್ಯದಲ್ಲಿ ನಿರೂಪಣೆಗೊಂಡಿರುವ 'ಅಭಯ' ಎಂಬ ನಾಟಕವನ್ನು ೧೯೮೩ರಲ್ಲಿ ರಚಿಸಲಾಗಿದೆ. ಮೃತ್ಯುವಿನ ಬಗೆಗಿನ ಅಭಯಾ-ಭಯಗಳ ಸ್ಪಷ್ಟ ನಿಲುವನ್ನು ಸೂಚಿಸುವುದೇ ಇಲ್ಲಿನ ಉದ್ದೇಶವಾಗಿದೆ.

ದ್ವಿಪಾತ್ರಾಭಿನಯದ ಒಂದೇ ದೃಶ್ಯವನ್ನು ಹೊಂದಿರುವ ಈ ಕಲ್ಪಿತ ನಾಟಕವನ್ನು ಗೌಡರು ೧೯೮೨ರಲ್ಲಿ ರಚಿಸಿದ್ದಾರೆ. ಸುಪ್ರಸಿದ್ಧ ಮಹಾಕವಿಯೋರ್ವನ ದುರಂತ ಜೀವನ ಕಥೆಯೇ **'ಸಾಯದವನ ಸಮಾಧಿ'**. ನಾಟಕದ ವಸ್ತು, ಇಂದಿನ ಸಮಾಜ ನಾಡು-ನುಡಿಗಾಗಿ ಸೇವೆಸಲ್ಲಿಸುತ್ತಿರುವ ಕವಿಗಳನ್ನು ಕಾಣುವ ವೈಪರೀತ್ಯದ ಚಿತ್ರಣ ನೀಡುವಲ್ಲಿ ಗೌಡರು ನೈಜತೆಯನ್ನು ಮೆರೆದಿದ್ದಾರೆ.

**"ಬಗೆಹರಿಯದ ಪ್ರಶ್ನೆ'** ಎಂಬ ನಾಟಕವನ್ನು ಗೌಡರು ೧೯೪೪ರಲ್ಲಿ ರಚಿಸಿ ೧೯೪೬ರಲ್ಲಿ ಮೊದಲ ಪ್ರದರ್ಶನ ಮಾಡಿದ್ದಾರೆ. ಸಾಮಾಜಿಕ ವಸ್ತುವನ್ನು ಹೊಂದಿರುವ ಈ ನಾಟಕ ತೆಲುಗಿನ ಶ್ರೀ ರಾಜಮನ್ನಾರ್ ಅವರ ಕೃತಿಯ ಅನುವಾದವಾಗಿದೆ. ಬಳ್ಳಾರಿ ರಾಘವರು ಇದರ ಸಂಪೂರ್ಣ ವಿವರಣೆಯನ್ನು ನೀಡಿದ್ದಾರೆ. ಜೀವನದಲ್ಲಿ ಅಳವಡಿಸಿಕೊಳ್ಳುವ ಆಚರಣೆಗಳಲ್ಲಿ ತಲೆದೋರುವ ಭಿನ್ನಾಭಿಪ್ರಾಯಗಳ ಕಾರಣವನ್ನು ಇಲ್ಲಿ ತಿಳಿಸಿಕೊಡಲಾಗಿದೆ. ಈ ನಾಟಕ ಪ್ರಾರಂಭದಿಂದ ಕೊನೆಯವರೆಗೂ ಕುತೂಹಲವನ್ನು ಉಳಿಸಿಕೊಂಡು ಬಂದು ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದು ವಿಶಿಷ್ಟ ಪರಿಣಾಮವನ್ನುಂಟು ಮಾಡುತ್ತದೆ.

ಗೌಡರು ರಚಿಸಿದ **'ವಿಶ್ವಾಮಿತ್ರ'** ಎಂಬ ನಾಟಕದಲ್ಲಿ ವಿಶ್ವಾಮಿತ್ರನನ್ನು ಮಾನವೀಯ ನೆಲೆಯಲ್ಲಿ ಚಿತ್ರಿಸಲಾಗಿದೆ. ಸಾಧನೆಯಿಂದ ಮನುಷ್ಯ ಏನನ್ನಾದರೂ ಸಾಧಿಸಬಹುದು ಎಂದು ತಿಳಿಸಿಕೊಡುವುದೇ ಈ ಪೌರಾಣಿಕ ನಾಟಕದ ಉದ್ದೇಶ.

ಹೀಗೆ ಗೌಡರು ನಾಟಕ ಸಾಹಿತ್ಯ ಸೃಷ್ಟಿಯಲ್ಲಿ ಕೃಷಿಗೈದಿರುವರಾದರೂ ಅವರು ರಂಗಭೂಮಿಯಲ್ಲಿ ನಟರಾಗಿ ವಿಜೃಂಭಿಸಿದ್ದು ಹೆಚ್ಚು ಆದರೂ ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಗೌಡರಿಗೆ ವಿಶಿಷ್ಟ ಸ್ಥಾನ ಇದ್ದೇ ಇದೆ.

## ಗೌಡರ ಜೀವನಚರಿತ್ರೆ - ಆತ್ಮಚರಿತ್ರೆಗಳು :

ಜೋಳದರಾಶಿ ದೊಡ್ಡನಗೌಡರು ೧) ನಾಟ್ಯಯೋಗಿ ಬಳ್ಳಾರಿ ರಾಘವ ೨) ನಾಟ್ಯಕಳಾ ಪ್ರಪೂರ್ಣ ರಾಘವ ೩) ಚಳ್ಳಗುರಿಕೆ ಎರ್ರಿತಾತ - ಎಂಬ ಮೂರು ಜೀವನ ಚರಿತ್ರೆಯ ಕೃತಿಗಳನ್ನು ರಚಿಸಿದ್ದಾರೆ. 'ನಂದೇ ನಾನೋದಿದೆ' ಎಂಬುದು ಗೌಡರ ಆತ್ಮಚರಿತ್ರೆ.

ಗೌಡರು ಬಳ್ಳಾರಿ ರಾಘವರ ಗರಡಿಯಲ್ಲಿ ತಯಾರಾದ ರಾಘವರ ಪರಮಶಿಷ್ಯರಲ್ಲಿ ಒಬ್ಬರು. ಗೌಡರಿಗೆ ಬಳ್ಳಾರಿ ರಾಘವರ ಸಂಪೂರ್ಣ ಆಶೀರ್ವಾದವಾಗಿತ್ತು. ಗುರುವಿನ ಋಣತೀರಿಸುವುದಕ್ಕೆಂದೇ ರಂಗಭೂಮಿ ಕ್ಷೇತ್ರದಲ್ಲಿ ಅನನ್ಯ ಸೇವೆಗೈದ ಬಳ್ಳಾರಿ ರಾಘವರನ್ನು ಕುರಿತು, 'ನಾಟ್ಯಯೋಗಿ ಬಳ್ಳಾರಿ ರಾಘವ' ಎಂಬ ಜೀವನ ಚರಿತ್ರೆ ಕೃತಿಯನ್ನು ರಚಿಸಿ ಕೃತಾರ್ಥರಾಗಿದ್ದಾರೆ. ನಾಟ್ಯಕಳಾ ಪ್ರಪೂರ್ಣ ರಾಘವ ಎಂಬುದು ಕೂಡಾ ಇದೇ ಜಾಡಿನಲ್ಲಿ ಬರೆದ ಇನ್ನೊಂದು ಕೃತಿ. ಗೌಡರು ಎರ್ರಿತಾತನ ಜೀವನಚರಿತ್ರೆಯನ್ನು ಜನಸಾಮಾನ್ಯರು ಮತ್ತು ಚಿಕ್ಕ ಮಕ್ಕಳಿಗೂ ಪರಿಚಯಿಸುವ ಉದ್ದೇಶದಿಂದ ಸರಳಶೈಲಿಯಲ್ಲಿ ಚಳ್ಳಗುರಿಕೆ ಎರ್ರಿತಾತ ಎಂಬ ಕೃತಿಯನ್ನು ರಚಿಸಿದ್ದಾರೆ.

## ನಂದೇ ನಾನೋದಿದೆ :

ಜೋಳದರಾಶಿಯ ರಾಮೇಶ ಪ್ರಕಟಣಾ ಮಂದಿರದಿಂದ ೧೯೭೯ರಲ್ಲಿ ಪ್ರಕಟಗೊಂಡ ಗೌಡರ ಆತ್ಮಕಥೆಯೇ 'ನಂದೇ ನಾನೋದಿದೆ'. ಇದು ೫೧೮ ಪುಟಗಳಲ್ಲಿ ಹರಡಿಕೊಂಡಿರುವ ಒಂದು ಬೃಹತ್ಗ್ರಂಥ. ಇಲ್ಲಿಯ ವಿಷಯಗಳನ್ನು ಪ್ರಮುಖವಾಗಿ ಪೂರ್ವಭಾಗ ಮತ್ತು ಉತ್ತರಭಾಗ ಎಂದು ಎರಡು ವಿಭಾಗಗಳಲ್ಲಿ ವಿಂಗಡಿಸಿಕೊಡಲಾಗಿದೆ. ಇದು ಗೌಡರ ಜೀವನದ ಸಮಗ್ರ ಆತ್ಮಕಥನವಾದರೂ ಇದನ್ನು 'ಜೋಳದರಾಶಿಯವರ ಕಲಾಜೀವಿನ' ಎಂದು ಕರೆಯಲಾಗಿದೆ. ಈ ಕೃತಿಯನ್ನು ರಚಿಸಲು ಗೌಡರು ಒಂದು ರೂಢಿಯಾಗಿ ಬರೆದಿಟ್ಟುಕೊಂಡು ಬಂದ ಡೈರಿಗಳು ತುಂಬಾ ಸಹಾಯಕವಾಗಿವೆ. ವ್ಯಕ್ತಿ ತನ್ನ ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲದೇ ತನ್ನ ಬಗೆಗೆ ಇನ್ನೊಬ್ಬರಿಂದ ಕೇಳಿ ತಿಳಿಯುವಂತಾಗಬಾರದು ಎಂಬುದು ಗೌಡರ ಅಭಿಪ್ರಾಯ. ಅದಕ್ಕೆಂದೇ ತಾವು ಬರೆದ ಆತ್ಮಕಥೆಗೆ 'ನಂದೇ ನಾನೋದಿದೆ' ಎಂದು ಹೆಸರಿಟ್ಟಿರುವುದಾಗಿ ಹೇಳಿಕೊಂಡಿದ್ದಾರೆ. ಗೌಡರ ಗಮಕ, ರಂಗಭೂಮಿ,

ಪ್ರವಚನಗಳು, ಇವುಗಳಿಗೆ ಸುತ್ತಿಕೊಂಡ ಸಾಮಾಜಿಕ - ಧಾರ್ಮಿಕ ಪರಿಸರದ ವ್ಯಕ್ತಿಗಳ ಒಡನಾಟ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾಗಗಳ ಆಗುಹೋಗುಗಳು ಮುಂತಾದವುಗಳನ್ನೆಲ್ಲಾ ಈ ಆತ್ಮಚರಿತ್ರೆಯಲ್ಲಿ ಗೌಡರು ಬರೆಯುತ್ತಾ ಬಂದಿದ್ದಾರೆ. ಹೀಗಾಗಿ ಇದೊಂದು ಕೇವಲ ಆತ್ಮಚರಿತ್ರೆಯಾಗಿರದೇ ಗೌಡರ ಬದುಕಿನ ವರ್ತಮಾನ ಹಾಗೂ ಹಿಂದು ಮುಂದಿನ ಕಾಲಘಟ್ಟದ ಒಂದು ಸಾಂಸ್ಕೃತಿಕ ಚರಿತ್ರೆಯಾಗಿ ಪರಿಣಮಿಸಿದೆ. ಬಹುತೇಕ ಸಂದರ್ಭಗಳಲ್ಲಿ ಆತ್ಮಚರಿತ್ರೆಗಳು ಆತ್ಮಪ್ರಶಂಸೆಗಳಾಗಿಯೇ ಹೊರಹೊಮ್ಮುತ್ತವೆ. ಆದರೆ ಗೌಡರು ಈ ಕೃತಿಯ ಉದ್ದಕ್ಕೂ ತೋರಿದ ಪ್ರಾಮಾಣಿಕತೆಯನ್ನು ಹಿರಿಯ ವಿದ್ವಾಂಸರಾದ ಡಾ. ಹಾ.ಮಾ. ನಾಯಕರು 'ಗ್ರಂಥಲೋಕ' ಪತ್ರಿಕೆಯಲ್ಲಿ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

**ಬಯಲ ಗಳಿಕೆಗಳು :**

ಬಯಲ ಗಳಿಕೆಯು ಎರಡು ಭಾಗಗಳಲ್ಲಿ ಪ್ರಕಟವಾಗಿದ್ದು ಮೊದಲ ಭಾಗದಲ್ಲಿ ಸಿದ್ಧರಾಮಯ್ಯಗಳ ಸಂಪಾದನೆ, ಸಿದ್ಧರಾಮೇಶ್ವರಗೆ ಗುರುಕರುಣ, ಮೋಳಿಗೆ ಮಾರಯ್ಯಗಳ ಸಂಪಾದನೆ, ನುಲಿಯ ಚನ್ನಯ್ಯಗಳ ಸಂಪಾದನೆ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ಪ್ರಭುದೇವರ ಆರೋಗಣೆ, ಎಂಬ ಆರು ಶೀರ್ಷಿಕೆಗಳ ಅಡಿಯಲ್ಲಿ ಹರಡಿದೆ. ಇದರ ಎರಡನೆಯ ಭಾಗವು ಪ್ರಭುಕಲ್ಯಾಣಕ್ಕೆ ಬಂದ ಸಂಪಾದನೆ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ಮೋಳಿಗಯ್ಯಗಳ ಸಂಪಾದನೆ, ಮಹಾದೇವಿಯಕ್ಕಗಳ ಸಂಪಾದನೆ, ಎಂಬ ನಾಲ್ಕೂ ಶೀರ್ಷಿಕೆಗಳ ಅಡಿಯಲ್ಲಿ ಹರಡಿದೆ. ಶೂನ್ಯ ಸಂಪಾದನೆಯ ತತ್ವಗಳನ್ನು ಸರಳೀಕೃತ ರೂಪದಲ್ಲಿ ಜನತೆಗೆ ತಲುಪಿಸಲು, ಗೌಡರು ಈ ಕೃತಿಗಳನ್ನು ರಚಿಸಿಕೊಂಡವರು. ಮೊದಲಿನಿಂದಲೂ ಆಸಕ್ತಿ ಹೊಂದಿದ್ದ ಗಮಕ, ಅಭಿನಯ ಕಲೆಗಳು, ತತ್ವಗಳನ್ನು ಈ ರಚನೆಗಳ ಮೂಲಕ ಜನಸಾಮಾನ್ಯರಿಗೆ ಸರಳ ರೂಪದಲ್ಲಿ ತಿಳಿಸುವಲ್ಲಿ ನೆರವಾದವು.

**ಬಯಲಗಳಿಕೆಯ ಬೆಳಗು :**

'ಬಯಲ ಗಳಿಕೆಯ ಬೆಳಗು' ದೊಡ್ಡನಗೌಡರು ೧೯೮೦ರಲ್ಲಿ ರಚಿಸಿದ ೯೮೫ ಪುಟಗಳ ಬೃಹತ್ ಗ್ರಂಥ. ಈ ಮೊದಲು ಪ್ರೊ| ಸಂ.ಶಿ. ಭೂಸನೂರುಮಠರು ಹಾಗೂ ಡಾ|| ಜ.ಚ.ನಿ ಅವರು ಶೂನ್ಯ ಸಂಪಾದನೆಯನ್ನು ಕುರಿತು ಕೃತಿಗಳನ್ನು ರಚಿಸಿದ್ದರು. ಅವೆಲ್ಲ ಪ್ರೌಢವ್ಯಾಖ್ಯಾನಗಳು. ಆದರೆ, ಗೌಡರು ಶೂನ್ಯಸಂಪಾದನೆ ಸಮಗ್ರ ವಚನಗಳನ್ನು ಸರಳ ರೂಪದಲ್ಲಿ ಅರ್ಥೈಸಿ, ವಿವರಿಸಿ, ಜನತೆಗೆ ತಲುಪಿಸಬೇಕೆಂದು ಪರಿಶ್ರಮದಿಂದ ರಚಿಸಿದ ಗ್ರಂಥವಿದು. ಸುದೀರ್ಘಕಾಲದವರೆಗೆ ಗೌಡರು ಶೂನ್ಯ ಸಂಪಾದನೆಯನ್ನು ಕುರಿತು ಪ್ರವಚನ ಮಾಡುತ್ತ ಬಂದುದು ಕೃತಿರಚನೆಗೆ ತುಂಬ ನೆರವಾಗಿದೆ. ಇದರಲ್ಲಿ ಗೌಡರು ತುಂಬ ಪ್ರಾಮಾಣಿಕತೆಯನ್ನು ಮೆರೆದಿದ್ದಾರೆ. ತಮಗೆ ಸರಳವಾಗಿ ಹೊಳೆದಲ್ಲಿ ಅರ್ಥವನ್ನು ಸರಳವಾಗಿ ನಿರೂಪಿಸಿದ್ದಾರೆ. ಕೆಲವು ವಚನಗಳ ಅರ್ಥ ಸ್ಪಷ್ಟವಾಗದ ಕಡೆಗಳಲ್ಲಿ ಇದರಲ್ಲಿ ಹೊಳೆವ ಅರ್ಥ ಎಂದು ಮುಂದೆ ಸಾಗಿದ್ದಾರೆ. ಬೆಡಗಿನ ವಚನಗಳ ಸಂದರ್ಭದಲ್ಲಂತೂ ಅರ್ಥ ಹೊಳೆದಿಲ್ಲವೆಂಬುದನ್ನು ನೇರವಾಗಿ ಹೇಳಿ - ಬಲ್ಲವರು ಅರ್ಥೈಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಕೆಲವೆಡೆ

ನಾಲ್ಕಾರು ವಚನಗಳಿಗೆ ಒಟ್ಟಿಗೆ ಅರ್ಥವನ್ನು ಹೇಳುವ ರೂಢಿ ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ಗೌಡರ ಈ ಬೃಹದ್ಗ್ರಂಥವು ಈ ಮೊದಲಿನ ವಿದ್ವಾಂಸರ ಪರಾಮರ್ಶೆಗಳಿಗಿಂತ ಭಿನ್ನವಾಗಿದ್ದು ಅತ್ಯಂತ ಸರಳ ನಿರೂಪಣೆಯ ಮೂಲಕ ಜನರನ್ನು ತಲುಪಬೇಕೆಂಬ ಉದ್ದೇಶದಿಂದ ರಚನೆಗೊಂಡಿದೆ. ಗೌಡರು ಈ ಕೃತಿಗೆ ಅರವತ್ತು ಪುಟಗಳ ಪೀಠಿಕೆಯನ್ನೂ ಬರೆದಿದ್ದಾರೆ. ಈ ಕೃತಿಯನ್ನು ಗೌಡರು ಹೇಗೆ ಬರೆದಿದ್ದಾರೆ ಎಂಬುದಕ್ಕಿಂತ ಇತರರಿಗಿಂತ ಹೇಗೆ ಭಿನ್ನರಾಗಿ ನಿರೂಪಿಸಿದ್ದಾರೆಂಬುದೇ ಮಹತ್ವದ್ದೆನಿಸುತ್ತದೆ.

ಹೀಗೆ ಗೌಡರು ಕವಿಗಳಾಗಿ, ಗಮಕಿಗಳಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ವೇದಾಂತಿಗಳಾಗಿ, ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ರಂಗದಲ್ಲಿ ಅನನ್ಯಸೇವೆ ಗೈದಿದ್ದಾರೆ. ಗೌಡರಲ್ಲಿ ಇಂತಹ ಪಂಚಮುಖಗಳನ್ನು ಕಾಣುತ್ತೇವಾದರೂ ಅವರು ಗಮಕಿಗಳಾಗಿ ಪ್ರಸಿದ್ಧರಾದುದು, ಗಮಕಕಲಾನಿಧಿ ಜೋಳದರಾಶಿ ದೊಡ್ಡನಗೌಡರೆಂದೇ ಗುರುತಿಸಿಕೊಂಡುದು ಎದ್ದು ಕಾಣುತ್ತದೆ. ಕಲಾಸೇವೆಯಲ್ಲಿಯೇ ಅವರು ಕರ್ನಾಟಕ ಮತ್ತು ಆಂಧ್ರದ ಗಡಿಪ್ರದೇಶದಲ್ಲಿ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿಯೇ ತಮ್ಮ ಆಯುಷ್ಯದ ಅರ್ಧಭಾಗ ಕಳೆದವರು. ಬ್ರಿಟೀಷರ ಆಡಳಿತ, ಮದ್ರಾಸ್ ರಾಜ್ಯದ ಆಡಳಿತ, ತೆಲುಗು ಭಾಷೆಯ ಪ್ರಭಾವದ ಮಧ್ಯದಲ್ಲಿ ಗೌಡರು ಕನ್ನಡನಾಡು ನುಡಿಯನ್ನು ಕಟ್ಟುವಲ್ಲಿ ಶ್ರಮಿಸಿದ ಅವರ ಸೇವೆ ಗಮನಾರ್ಹವಾದುದು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕನ್ನಡದ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡವರು. ಕನ್ನಡದಲ್ಲಿ ಸಾಹಿತ್ಯ ಕೃಷಿಗೈದು, ಕನ್ನಡ ನುಡಿ ಸೇವೆಯನ್ನು ಕೈಕೊಂಡರಲ್ಲದೇ ಕನ್ನಡ ನಾಟಕಗಳನ್ನು ಆಡುವುದರ ಮೂಲಕ ನಾಡಿನ ತುಂಬ ಕನ್ನಡ ನೆಲದ ಸಂಸ್ಕೃತಿಯ ಪ್ರಸಾರಮಾಡಿದರು. ಕನ್ನಡದ ಶ್ರೇಷ್ಠ ಕಾವ್ಯಗಳನ್ನೇ ಗಮಕಕ್ಕೆ ಅಳವಡಿಸಿಕೊಂಡು ಪ್ರವಚನಗಳ ಮೂಲಕ ಜನಮಾನಸದಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದ ಗಾರುಡಿಗರು.

ಒಟ್ಟಿನಲ್ಲಿ ಯಾವ ಸೌಕರ್ಯಗಳೂ ಇಲ್ಲದೆ, ಕರ್ನಾಟಕ-ಆಂಧ್ರದ ಗಡಿಭಾಗದ ಒಂದು ಕುಗ್ರಾಮದಲ್ಲಿ ಜನಿಸಿ ಸ್ವಪ್ರಯತ್ನ ಮಾತ್ರದಿಂದ ಒಬ್ಬ ಪರಿಪೂರ್ಣ ವ್ಯಕ್ತಿಯಾಗಿ ರೂಪಗೊಂಡು ಕನ್ನಡವನ್ನು ಕಟ್ಟಿದ ಮಹಾ ಪುರುಷರಲ್ಲಿ ಗೌಡರು ಪ್ರಮುಖರು. ದೇಶೀಯತೆಯನೆ ಬೋಧಿಸಿ, ಅದರಂತೆಯೆ ಬಾಳಿದ ಗೌಡರ ಬದುಕು, ಅವರು ಬದುಕಿರುವವರೆಗೂ ಇತರರಿಗೆ ಪ್ರೇರಕವಾಗಿತ್ತು. ಜೀವನಪೂರ್ತಿ ಕನ್ನಡನೆಲದ ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಸಾರಕ್ಕಾಗಿ ಬದುಕನ್ನು ಮುಡಿಪಾಗಿಟ್ಟು ದಿನಾಂಕ ೧೦-೫-೧೯೯೪ರಂದು ಇಹಲೋಕ ಯಾತ್ರೆಯನ್ನು ಮುಗಿಸಿದ ಗೌಡರ ಬದುಕು ಸದಾಸ್ಮರಣೀಯವಾದುದು.

# ದೊಡ್ಡನಗೌಡರ ಕೃತಿಗಳು

**ಕಾವ್ಯಗಳು :**

ನಮ್ಮ ಹಂಪೆ

ರಸವರ್ಷ

ತಾತನಗೀತಾಂಜಲಿ (ಎರ್ರಿತಾತನ ಚರಿತ್ರೆ)

ದೇಶೀಯ ವಚನಗಳು ಭಾಗ - ಒಂದು

ದೇಶೀಯ ವಚನಗಳು ಭಾಗ - ಎರಡು

ದೇಶೀಯ ವಚನಗಳು ಭಾಗ - ಮೂರು

ಗೌಡತಿ ಬರಲಿಲ್ಲ

ತಾತನ ಗೀತಾಂಜಲಿ

ರಾಮೇಶ ವಚನಗಳು

ಚೆನ್ನಬಸವಸ್ವಾಮಿಗಳ ಲಾವಣಿ

ದ್ವೈತ ಧರ್ಮ ರಹಸ್ಯ

ಪೃಷ್ಠರಾಜ ಪಟಾ ಟೋಪ (ಅಪ್ರಕಟಿತ)

ಸಂಕ್ಷಿಪ್ತರಾಮಾಯಣ (ಅಪ್ರಕಟಿತ)

ಜೋಳದರಾಶಿ ಕಾವ್ಯ

**ನಾಟಕ**

**ಪ್ರಕಟಿತ**

ತುಕಾರಾಮ

ಕನಕದಾಸ

ಕ್ರಾಂತಿಪುರುಷ ಬಸವಣ್ಣ

ದೊಡ್ಡನಗೌಡರ ನಾಟಕಗಳು

(ಮಾಯಾಪ್ರಭಾವ, ಶಿವನಾಣೆ, ಜಾಗೃತಿ)

ಜೋಳದರಾಶಿಯವರ ಮೂರು ನಾಟಕಗಳು

(ನೋಡೋರ ನಾಟಕ, ಅಭಯ, ಸಾಯದವನ ಸಮಾಧಿ)

ಬಯಲಗಳಿಕೆ-ಭಾಗ-ಒಂದು

ಬಯಲಗಳಿಕೆ-ಭಾಗ-ಎರಡು

## ಆತ್ಮಕಥನ

ನಂದೇನಾನೋದಿದ ಪ್ರಥಮ ಮುದ್ರಣ - (೧೯೭೯)

ದ್ವಿತೀಯ ಮುದ್ರಣ - (೧೯೯೮)

## ವಿಚಾರ

ನೀವೇನಂತೀರಿ?

## ಜೀವನ ಚರಿತ್ರೆ

ಚೆಳ್ಳಗುರಿಕೆ ಎರ್ರಿತಾತ (ಮಕ್ಕಳಿಗಾಗಿ)

ಶಿವಮಯ ಜೀವನ ಚರಿತ್ರೆ

ನಾಟ್ಯಕಲಾಪ್ರಪೂರ್ಣ ಟಿ. ರಾಘವರು

ಪಂಡಿತ ವೈ. ನಾಗೇಶಶಾಸ್ತ್ರಿಗಳು

## ಸಂಪಾದನೆ

ಶ್ರೀ ಮೃತ್ಯುಂಜಯ ಭಕ್ತಿಗೀತೆಗಳು

ಕಲಾ

ಚೆಳ್ಳಗುರ್ಕಿ ಎರ್ರಿತಾತನವರ ಭಕ್ತಿಗೀತೆಗಳು

## ತೆಲುಗು

ಅನುಭವಾಲು-ಜ್ಞಾಪಕಾಲು

ವಚನಾಮೃತಮು

ಗೇಯ ಗುಂಜಾರಮು

ಶೂನ್ಯ ಸಂಪಾದನಮು

## ದೊಡ್ಡನಗೌಡರನ್ನು ಕುರಿತು


* ಗಮಕ ಕಲಾನಿಧಿ (ಅಭಿನಂದನ ಗ್ರಂಥ)

ಸಂ-ಜಯಾ ರಾಜಶೇಖರ

* ಜೋಳದರಾಶಿ ದೊಡ್ಡನಗೌಡರು : ಸಮಗ್ರ ಅಧ್ಯಯನ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಡಾ. ಶಂಭು ಬಳಿಗಾರ * ಮುಪ್ಪುರಿ ಪ್ರತಿಭೆಯ ಸ್ವಯಂಭೂ ಜೋಳದರಾಶಿ ದೊಡ್ಡನಗೌಡ (ಸಂದರ್ಶನ- ಉದಯವಾಣಿ ದೀಪಾವಳಿ ಸಂಚಿಕೆ-೧೯೮೭) ಡಾ. ಬಸವರಾಜ, ಮಲಶೆಟ್ಟಿ

* ಜೋಳದರಾಶಿ ದೊಡ್ಡನಗೌಡರು: ಡಾ. ಬಸವರಾಜ ಮಲಶೆಟ್ಟಿ.

## ಜೋಳದರಾಶಿ ದೊಡ್ಡನಗೌಡರ ವಿವಿಧ ಭಾವಚಿತ್ರಗಳು






ಶ್ರೀಕೃಷ್ಣನ ಪಾತ್ರ, 'ಗರುಡ ಗರ್ವಭಂಗ' ಕನ್ನಡ ನಾಟಕದಲ್ಲಿ



ಬಸವೇಶ್ವರ ಪಾತ್ರ, 'ಕ್ರಾಂತಿ ಪುರುಷ ಬಸವಣ್ಣ'' ಕನ್ನಡ ನಾಟಕದಲ್ಲಿ



ಭಿಕ್ಷುಕನ ಪಾತ್ರ, 'ಚಾಣಕ್ಯ' ತೆಲುಗು ನಾಟಕದಲ್ಲಿ



ಕಬೀರ್ ಪಾತ್ರ, 'ರಾಮದಾಸ' ತೆಲುಗು ನಾಟಕದಲ್ಲಿ



ಗಮಕ ಗೋಷ್ಠಿ - ಬೆಂಗಳೂರು, ಜಿ. ನಾರಾಯಣ, ಡಿ.ವಿ.ಜಿ. ಇವರೊಂದಿಗೆ




ತೆಲುಗು ವಿಶ್ವವಿದ್ಯಾಲಯ, ಹೈದರಾಬಾದ್ -
ಕುಲಪತಿ ತೂಮಾಟಿ ದೋಣೆಪ್ಪನವರಿಂದ ಸನ್ಮಾನ




ಗೌಡರ ತಂದೆಯವರಾದ
ಕೆಂಗಲ್ ಪಂಪನಗೌಡರು



ಗೌಡರ ಧರ್ಮಪತ್ನಿ ಹನುಮಕ್ಕ ಗೌಡತಿ



ಗೌಡರ ಕೃತಿಗಳು



ಗೌಡರ ಹಸ್ತಾಕ್ಷರ



ಕನಕದಾಸರ ಪಾತ್ರದಲ್ಲಿ
ಗೌಡರು



ಪ್ರಥಮ ನಾಟಕ ಕಲಾಪರಿಷತ್ತು ೧೯೪೮ - ಜೋಳದರಾಶಿ



ಜೋಳದರಾಶಿ ನಾಟಕ ಮಂಡಳಿ



ರಾಮೇಶನ ಸಾನಿಧ್ಯದಲ್ಲಿ ಗೌಡರು



ಅಧ್ಯಯನ ನಿರತ ಗೌಡರು



ಗ್ರಂಥಾವಲೋಕನದಲ್ಲಿ ಗೌಡರು




ಗೌಡರ ಮದುವೆ ಪತ್ರ



ಆಲೋಚನಾಮಗ್ನ ಗೌಡರು



ಬಿಡುವಿನ ಸಮಯದಲ್ಲಿ ಗೌಡರು



ತತ್ತ್ವಪದಕಾರ - ಗೌಡರು



ಗೌಡರೊಂದಿಗೆ ಲೇಖಕ ಡಾ. ಶಂಭು ಬಳಿಗಾರ (೧೯೮೮)